# ಅಧ್ಯಯನ – 8 Study VIII

# ಪ್ರಾಯಶ್ಚಿತ್ತ ಯಜ್ಞದ ನಾಲೆ

## ದೇವರ ಪವಿತ್ರಾತ್ಮನು

## The Channel of the Atonement

## The Holy Spirit of God

**ಪವಿತ್ರಾತ್ಮನ ಕಾರ್ಯಾಚರಣೆ – ಇಂದು ಮತ್ತು ಮಿಲಿಯಾಂತರ ಕಾಲದಲ್ಲಿ – ಪವಿತ್ರಾತ್ಮನ ವಿವಿಧ ವಿವರಣಾ ನಾಮಗಳು : "ಪ್ರೀತಿಯ ಆತ್ಮ" "ಸತ್ಯದ ಆತ್ಮ" ಮುಂತಾದವುಗಳು – ಇದಕ್ಕೆ ವ್ಯತಿರಿಕ್ತವಾಗಿ ಅಶುದ್ಧ ಆತ್ಮ , "ಸುಳ್ಳಿನ ಆತ್ಮ" "ಭಯದ ಆತ್ಮ" ಮುಂತಾದವುಗಳು – ವೈಯುಕ್ತವಾದ ಸರ್ವನಾಮಗಳು ಅನ್ವಯಿಸಲಾಗಿದೆ – 'ಆತ್ಮ' ಎಂಬ ಪದದ ಮಹತ್ವ – "ದೇವರು ಆತ್ಮನಾಗಿದ್ದಾನೆ" – " ಪವಿತ್ರಾತ್ಮವು ಇನ್ನೂ ನೀಡಲ್ಪಟ್ಟಿರುವುದಿಲ್ಲ" – ಆತ್ಮನ ವರಗಳು – ಪವಿತ್ರಾತ್ಮನ ರೂಪಾಂತರಗೊಳಿಸುವ ಶಕ್ತಿ – ಅಳತೆಯುಳ್ಳ ಆತ್ಮ, ಅಳತೆಯಿಲ್ಲದ ಆತ್ಮ – " ಈ ಲೋಕದ ಆತ್ಮ" ಕ್ರಿಸ್ತ ವಿರೋಧಿ – ಇದಕ್ಕೂ ಪವಿತ್ರಾತ್ಮನಿಗೂ ಕದನ – ಭಕ್ತ ಜನರಲ್ಲದ ಹಾಗೂ ಭಕ್ತ ಜನರ ಮಧ್ಯದಲ್ಲಿ ಕಾದಾಡುವ ಆತ್ಮ – ಮತ್ಸರದ ದುರಾಶೆಯುಳ್ಳ ಆತ್ಮ – ಆತ್ಮನ ಬೋಧನೆ – ಪಾರ್ಕೊಲೆಟೋಸ್ ಅಂದರೆ ಸಮಾಧಾನಪಡಿಸುವವರು – ಆತನು ನಿಮ್ಮನ್ನು ಸತ್ಯಕ್ಕೂ ಮತ್ತು ಸಂಪೂರ್ಣವಾದ ಪಾಪ ನಿವೃತ್ತಿಗೂ ನಡಿಸುವನು – ಅದ್ಭುತವಾದ ವರಗಳು ನಿಂತುಹೋದರೂ ಆತ್ಮನ ಮೇಲ್ವಿಚಾರಣೆಯು ಎಂದೂ ನಿಂತಿಲ್ಲ, ಮುಂದುವರೆಯುತ್ತಿದೆ . . .**

**"ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು. ನೀವು ತಿರುಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ. ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು 'ಅಪ್ಪಾ, ತಂದೆಯೇ' ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿಹೇಳುತ್ತಾನೆ " – ರೋಮಾ. 8:14–16.**

**"ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮನನ್ನು ಸುರಿಸುವೆನು. ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು" – ಯೋವೇಲ 2:28.**

ಪಾಪ ನಿವೃತ್ತಿಯ ಮಹಾ ಕಾರ್ಯದಲ್ಲಿ ಪವಿತ್ರಾತ್ಮನ ಪಾತ್ರವನ್ನು ಉದಾಸೀನ ಅಥವಾ ಅಲಕ್ಷ್ಯ ಮಾಡಿದ್ದೇ ಆದರೆ, ನಾವು ಆ ಕಾರ್ಯವನ್ನು ಸ್ಪಷ್ಟವಾಗಿ ಪರಿಗಣಿಸುವುದಾಗಲೀ, ಅರ್ಥಮಾಡಿಕೊಳ್ಳುವುದಾಗಲೀ ಸಾಧ್ಯವಿಲ್ಲ. ಪಾಪ ನಿವೃತ್ತಿಯ ಪ್ರಸ್ತುತಿಯಲ್ಲಿ ವಿಶ್ವಾಸಿಗಳಿಗೆ ದೈವಿಕ ಕ್ಷಮಾಪಣೆಯನ್ನು ಪ್ರಕಟಿಸುವುದು ಮತ್ತು ಅವರನ್ನು ಸಂಪೂರ್ಣವಾದ ಹೃದಯದೊಂದಿಗೆ ದೇವರೊಡನೆ ಪುನಃಸಂಧಾನಕ್ಕೆ ನಡೆಸುವುದು ಇವೇ ಮುಂತಾಗಿ ಪವಿತ್ರಾತ್ಮನ ಕಾರ್ಯವು ಬಹಳಷ್ಟು ಇದೆ. ನಮ್ಮ ಕರ್ತನಾದ ಯೇಸು ಕ್ರಿಸ್ತನು ತನ್ನ ದೀಕ್ಷಾಸ್ನಾನದಲ್ಲಿ ಪವಿತ್ರಾತ್ಮನಿಂದ ಪಡಕೊಂಡ ಸ್ಫೂರ್ತಿಯ ಪ್ರಭಾವದಿಂದ, ತನ್ನ ಸೇವೆಯ ಪ್ರಾರಂಭದಲ್ಲಿ, ಆತನ ಪ್ರತಿಷ್ಠೆಗೊಂಡ ಹೃದಯವು ಕರ್ತನ ಚಿತ್ತವನ್ನು. ಸರಿಯಾದ ಕ್ರಮವನ್ನು, ಸ್ವಯಂ ಬಲಿದಾನದ ಇಕ್ಕಾಟ್ಟಾದ ಮಾರ್ಗವನ್ನು ಸ್ಪಷ್ಟವಾಗಿಯೂ, ನಿರ್ದಿಷ್ಟವಾಗಿಯೂ ನೋಡಲು ಮತ್ತು ಆತನ ಮಿಗಿಲಾದ ಅಮೂಲ್ಯ ವಾಗ್ದಾನಗಳನ್ನು ಮೆಚ್ಚಿಕೊಳ್ಳಲು ಸಾಧ್ಯವಾಯಿತು. ಇದರ ನೆರವೇರಿಕೆಯು ಆತನ ದೈನ್ಯತೆ, ಅಪಮಾನ ಮತ್ತು ಕಲ್ವಾರಿಯಲ್ಲಿ ಆತನ ಮರಣವನ್ನೂ ಮೀರಿದ್ದಾಗಿತ್ತು. ಆದುದರಿಂದ, ಪವಿತ್ರಾತ್ಮನ ಮೂಲಕ ತಂದೆಗೆ ಅಂಗೀಕಾರಾರ್ಹವೂ, ಸಂತೋಷದಾಯಕವೂ ಆದ ತನ್ನ ಮಹಾ ಕಾರ್ಯವನ್ನು ನಮ್ಮ ವಿಮೋಚಕನು ಸಾಧಿಸಲು ಸಾಧ್ಯವಾಯಿತು. ಇದು ಇಡೀ ಮಾನವ ಕುಲಕ್ಕೆ ಈಡುಬಲಿಯೊಂದನ್ನು ಒದಗಿಸುವಂಥಾದ್ದಾಗಿತ್ತು. ಅದೇ ರೀತಿಯಲ್ಲಿ ಪವಿತ್ರಾತ್ಮನನ್ನು ಸಭೆಯೊಂದಿಗೆ ಗುರುತಿಸಲಾಗಿದೆ : ಪಾಪ ಪ್ರಾಯಶ್ಚಿತ್ತ ಮಹಾಬಲಿಯ ಅರ್ಹತೆಯನ್ನು ಅಂಗೀಕರಿಸಿದವರೆಲ್ಲರೂ, ಮತ್ತು ಆತನ ಮಗನ ಬಲಿದಾನದ ಅರ್ಹತೆಯ ಮೂಲಕ ತಂದೆಯ ಬಳಿಗೆ ಬಂದವರೆಲ್ಲರೂ, ಮತ್ತು ದೈವ ಸ್ವಭಾವದ ಮಹಾಕರೆಯ ಅನುಸಾರವಾಗಿ ತಮ್ಮನ್ನು ಸಜೀವ ಬಲಿಯನ್ನಾಗಿ ಪ್ರಸ್ತುತಿಪಡಿಸಿದವರೆಲ್ಲರೂ ಅವುಗಳನ್ನು ಸುವಾರ್ತಾಯುಗದಲ್ಲಿ ಎತ್ತಿಹಿಡಿಯುವವರಾಗಿದ್ದಾರೆ. ಮತ್ತು ಇದಕ್ಕಾಗಿ ಅವರಿಗೆ ಪವಿತ್ರಾತ್ಮನ ಅಗತ್ಯವೂ, ನೆರವೂ ಬೇಕಾಗುತ್ತದೆ. ದೇವರ ಆತ್ಮನನ್ನು ಪಡಕೊಂಡ ಅನುಪಾತದಲ್ಲಿ ಅವರುಗಳು ತಂದೆಯೊಂದಿಗೆ ಮತ್ತು ಮಗನೊಂದಿಗೆ ಸಮರ್ಪಕವಾದ ಸಾಂಗತ್ಯ ಹೊಂದಲು ಬರಬಹುದಾಗಿದೆ ಮತ್ತು ಉತ್ತಮವಾದದ್ದು

ಮೆಚ್ಚುಗೆಯಾದದ್ದು ಪರಿಪೂರ್ಣವಾದದ್ದು ಆಗಿರುವ ದೇವರ ಚಿತ್ತವೇನೆಂದು ನೀವು ವಿವೇಚಿಸಿ ಅವುಗಳನ್ನು ಕೈಗೊಳ್ಳಬಹುದಾಗಿದೆ. ಕೇವಲ ದೇವರ ಸಾಕ್ಷ್ಯದ ಬರಹಕ್ಕಿಂತ ಮಿಗಲಾಗಿ ನಾವು ಪವಿತ್ರಾತ್ಮನ ಮೂಲಕ ಮಾತ್ರವೇ 'ದೇವರ ಆಗಾಧವಾದ ಸಂಗತಿಗಳನ್ನು' ಮತ್ತು ದೇವರು ಆತನನ್ನು ಪ್ರೀತಿಸುವವರಿಗಾಗಿ ಕಾಯ್ದಿರಿಸಿದ, ಆದರೆ ಮಾನವ ಕಣ್ಣುಗಳು ಕಾಣದ, ಮಾನವ ಕಿವಿಗಳು ಕೇಳದ ಮತ್ತು ಮಾನವ ಹೃದಯುಗಳಲ್ಲಿ ಅರ್ಥಮಾಡಿಕೊಳ್ಳುವಂತೆ ಭಾವಗಳು ಹುಟ್ಟದ ಎಲ್ಲಾ ಸಂಗತಿಗಳನ್ನು ಅರಿತು ಅವುಗಳನ್ನು ಮೆಚ್ಚಿಕೊಳ್ಳಲು ಸಾಧ್ಯ. – **"ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅವರ ಭಾವನೆಯು ಮನುಷ್ಯರ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು" – 1 ಕೊರಿಂಥ 2:9–10.**

ಪವಿತ್ರಾತ್ಮನ ಕಾರ್ಯಾಚರಣೆಯು ಮಿಲಿಯಾಂತರ ಯುಗದಲ್ಲಿ ಮಾನವ ಕುಲದ ಪ್ರಪಂಚವನ್ನು ನೂತನ ಒಡಂಬಡಿಕೆಯ ಶರತ್ತುಗಳಿಗನುಸಾರವಾಗಿ ವಿಮೋಚಕನ ಬಲಿದಾನದ ಅರ್ಹತೆಯ ಮೂಲಕ ದೇವರ ಸಾಂಗತ್ಯಕ್ಕೆ ತರುವುದರಲ್ಲಿ ಅಷ್ಟೇ ಪ್ರಮುಖವಾಗಿದೆ. ಅದರಂತೆ ಯೋವೇಲ ಪ್ರವಾದಿಯ ಮೂಲಕ ಕರ್ತನು ಈ ವಿಷಯದ ಬಗ್ಗೆ ನಮ್ಮ ಗಮನ ಸೆಳೆದಿದ್ದಾನೆ – ಯೋವೇಲ 2: 28–29. ನಮ್ಮ ಕರ್ತನು ಈ ಸತ್ಯತೆಯ ಬಗ್ಗೆ ಗಮನ ಸೆಳೆಯುವವನಾಗಿ ಆತನು ತನ್ನ ಆತ್ಮನನ್ನು ಸುವಾರ್ತಾ ಯುಗದಲ್ಲಿ ತನ್ನ ದಾಸ ದಾಸಿಯರ ಮೇಲೆ ಮಾತ್ರವೇ ಸುರಿಸುವವನಾಗಿದ್ದು ನಂತರದಲ್ಲಿ ಮಿಲಿಯಾಂತರ ಯುಗದಲ್ಲಿ ಆತನ ಪವಿತ್ರಾತ್ಮವು ಮಾನವ ಕುಲದ ಮೇಲೆ, ಎಲ್ಲಾ ಮನುಷ್ಯರ* ಮೇಲೆ ಸುರಿಸಲ್ಪಡುವುದು ಎಂದು ಹೇಳಿದ್ದಾನೆ. ನಂತರದಲ್ಲಿ ಲೋಕದ ಪ್ರಗತಿಯು ಪವಿತ್ರಾತ್ಮನೊಂದಿಗೆ ಸಂಪೂರ್ಣವಾಗಿ ಸಾಂಗತ್ಯ ಗೊಳ್ಳುತ್ತದೆ; ಅಂದರೆ, ಮಾನವರಲ್ಲಿ ಯಾರಾದರೂ ಪವಿತ್ರಾತ್ಮನೊಂದಿಗೆ ಮಿಲಿಯಾಂತರ ಯುಗದ ಆಚೆಗೆ ಇರುವ ನಿತ್ಯಜೀವ ಸ್ಥಿತಿ, ಸಂತೋಷ ಮತ್ತು ಆಶೀರ್ವಾದಕ್ಕೆ ಅರ್ಹರಾಗುವ ಅನುಪಾತದಲ್ಲಿ ಮಾತ್ರವೇ ಇರುತ್ತದೆ. ಈ ಲೋಕದ ಎಲ್ಲಾ ಕುಟುಂಬಗಳ ಆಶೀರ್ವಾದಕ್ಕಾಗಿ ಪರಿಶುದ್ಧಾತ್ಮನು ಪವಿತ್ರ ಸಭೆಯೊಂದಿಗೆ ಸಹಕರಿಸುವುದೆಂಬ ಸತ್ಯದ ಬಗ್ಗೆಯೂ ನಮ್ಮ ಕರ್ತನು ಸಾಕ್ಷಿ ಹೇಳಿದ್ದಾನೆ. ಮಿಲಿಯಾಂತರ ಯುಗದ ವೈಭವಗಳು ಮತ್ತು ಅದರ ಆಗಾಧವಾದ ಸತ್ಯವು ಪ್ರಭಾವಯುಕ್ತ ಜೀವ ಜಲದ ನದಿಯಂತೆ, ಸ್ಫಟಿಕದಂತೆ ಸ್ಪಷ್ಟವಾಗಿ ಹರಿಯುತ್ತದೆಂದು ನಮಗೆ ಚಿತ್ರಣ ನೀಡುವಂತೆ – **"ಆತ್ಮನೂ ಮದಲಗಿತ್ತಿಯೂ – ಬಾ ಅನ್ನುತ್ತಾರೆ. ಕೇಳುವವನು ಬಾ ಅನ್ನಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ"** ಎಂದು ಬರೆಯಲ್ಪಟ್ಟಿದೆ – ಪ್ರಕಟನೆ 22:17.

ಆದರೆ, ಪವಿತ್ರಾತ್ಮನ, ಆತನ ಕಾರ್ಯಸ್ಥಾನ ಮತ್ತು ಕಾರ್ಯಾಚರಣೆಗಳ ಕುರಿತಾದ ಈ ಪ್ರಸ್ತಾಪವು ಅನೇಕ ದೇವಜನರಿಂದ ಶತಮಾನಗಳ ಕಾಲದಿಂದಲೂ ಘೋರವಾದ ರೀತಿಯಲ್ಲಿ ತಪ್ಪಾಗಿ ಅರ್ಥೈಸಲ್ಪಟ್ಟಿದೆ. ಉದಯಿಸುವ ನೀತಿ ಸೂರ್ಯನ ಬೆಳಕಿನಲ್ಲಿ – ಮನುಷ್ಯ ಕುಮಾರನ ದ್ವಿತಿಯಾಗಮನ (Parousia) ಪ್ರತ್ಯಕ್ಷತೆಯ ಬೆಳಕಿನಲ್ಲಿ ಮಾತ್ರವೇ ಈ ಪ್ರಸ್ತಾಪವು ಆದಿ ಸಭೆಗಳಿಗೆ ಸ್ಪಷ್ಟವಾಗಿ ಆಗುತ್ತಿದಂತೆಯೇ ಈಗಲೂ ಈ ಸಂಬಂಧಿತವಾದ ದೇವರ ವಾಕ್ಯದ ಸಾಕ್ಷ್ಯಗಳಿಗೆ ಅನುಗುಣವಾಗಿ ಸಮಗ್ರವಾಗಿ ಸ್ಪಷ್ಟವಾಗುತ್ತದೆ ಮತ್ತು ಸಮಂಜಸವೆನಿಸುತ್ತದೆ.

ತ್ರೈಯೇಕತ್ವ ಸಿದ್ಧಾಂತವು ನಾವೀಗಾಗಲೇ ಕಂಡುಕೊಂಡಂತೆ ಎರಡನೆಯ ಶತಮಾನದಲ್ಲಿ ಉತ್ಥಾನಗೊಂಡು ಮೇಲೇರಲು ಪ್ರಾರಂಭಿಸಿ ನಾಲ್ಕನೆಯ ಶತಮಾನದ ವೇಳೆಗೆ ಬಹಳಷ್ಟು ಅಭಿವೃದ್ಧಿ ಹೊಂದಿತು. ಇದು ಅನೇಕ ಕ್ರೈಸ್ತರ ಮನದಲ್ಲಿ ಗಣನೀಯವಾದ ಪ್ರಮಾಣದಲ್ಲಿ ಈ ಪ್ರಸ್ತಾಪವು ಸತ್ಯದೊಂದಿಗೆ ಬೆರೆತುಹೋಗಿರುವ ಅಂಧಕಾರಕ್ಕೆ ಕಾರಣವಾಗಿದೆ ಮತ್ತು ಅವರ ಎಲ್ಲಾ ಧಾರ್ಮಿಕ ನಿಶ್ಚಿತಾಭಿಪ್ರಾಯಗಳಿಗೆ ಅನಾನುಕೂಲವಾಗಿಯೂ ಗೊಂದಲ ಉಂಟು ಮಾಡುವುದಾಗಿಯೂ ಮತ್ತು ಮಂಕುಗೊಳಿಸುವುದಾಗಿದೆ.

ತಂದೆ ಮತ್ತು ಮಗನು ಪೂರ್ಣ ಹೊಂದಾಣಿಕೆ ಯಲ್ಲಿದ್ದಾರೆ ಮತ್ತು ಉದ್ದೇಶ ಹಾಗೂ ಅದರ ಸಾಧನೆಯಲ್ಲಿ ಏಕತೆಯನ್ನು ಹೊಂದಿದವರಾಗಿದ್ದಾರೆ. ದೇವರ ವಾಕ್ಯದ ಬೋಧನೆಗಳಲ್ಲಿ ಏಕರೂಪತೆ ಇದೆ ಎಂಬುದನ್ನು ನಾವು ಈಗ ತಾನೇ ನೋಡಿದ್ದೇವೆ. ಪವಿತ್ರಾತ್ಮನ ಬಗ್ಗೆ ದೇವರ ವಾಕ್ಯದ ಬೋಧನೆಗಳು ಅದೇ ರೀತಿಯಾಗಿ ಏಕರೂಪತೆಯುಳ್ಳವುಗಳಾಗಿವೆ. – ಅದು ಮತ್ತೊಂದು ದೇವರಲ್ಲ, ಅದು ಆತ್ಮ ಮಾತ್ರವಾಗಿದ್ದು ಅದರ ಶಕ್ತಿ ಮತ್ತು ಪ್ರಭಾವಗಳನ್ನು ಒಬ್ಬನೇ ದೇವರಾದ ತಂದೆಯೂ, ಆತನ ಏಕಮಾತ್ರ ಕುಮಾರನಾದ ಮಗನೂ ನಿರ್ಬಂಧವಿಲ್ಲದೆ ಏಕರೂಪತೆಯಿಂದ ಅನುಷ್ಠಾನ ಗೊಳಿಸುವವರಾಗಿದ್ದಾರೆ. ಆದುದರಿಂದ ಇವರಿಬ್ಬರೂ ಒಂದೇ ಆಗಿದ್ದುಕೊಂಡು ಪರಸ್ಪರ ಪೂರ್ಣ ಒಡಂಬಡಿಕೆಯುಳ್ಳವರಾಗಿದ್ದಾರೆ. ಆದರೆ, ತಂದೆ, ಮಗನ ಮತ್ತು ಪವಿತ್ರಾತ್ಮನ ಈ ಅನ್ಯೋನ್ಯತೆಯ

* ಪ್ರವಾದಿಯ ಹೇಳಿಕೆಯಲ್ಲಿ ಇದರ ಕ್ರಮವು ಅದಲುಬದಲಾಗಿದೆ. ಬಹಳಷ್ಟು ಬಹುಶಃವಾಗಿ ಸೂಕ್ತ ಸಮಯ ಬರುವವರೆಗೆ ಈ ಸಂಗತಿಯನ್ನು ಅಗೋಚರಗಳಿಸುವ ಸಲುವಾಗಿ ಮತ್ತು ಈ ರೀತಿಯಲ್ಲಿ ದೇವರ ಯೋಜನೆಯಲ್ಲಿನ ಇದರ ಉದ್ದ, ಅಗಲ, ಎತ್ತರ ಆಳವನ್ನು ವಿಸ್ತೀರ್ಣವನ್ನು ಅದರ ತಿಳಿಯುವಿಕೆ ಮತ್ತು ಮೆಚ್ಚಿಗೆಯ ಸೂಕ್ತ ಸಮಯ ಬರುವ ವರೆಗೆ ಮರೆಮಾಡುವ ಸಲುವಾಗಿ ಹೀಗೆ ಮಾಡಿದ್ದಿರಬಹುದು.

ತ್ರೈಯೇಕತ್ವ ಸಿದ್ಧಾಂತಿಗಳು ಎತ್ತಿ ಹಿಡಿಯುವ ಮತ್ತು ಬೋಧಿಸುವ ಬೋಧನೆಗಳಿಗೆ ಎಷ್ಟೊ ಭಿನ್ನವಾಗಿದೆ. ಇದನ್ನು ಕ್ರೈಸ್ತ ಪ್ರಶ್ನೋತ್ತರರೂಪ ಗ್ರಂಥದ (ಪ್ರಶ್ನೆ 5 ಮತ್ತು 6) ಭಾಷೆಯಲ್ಲಿ 'ಒಂದೇ ದೇವರಲ್ಲಿ– ತಂದೆ, ಕುಮಾರ ಮತ್ತು ಪವಿತ್ರಾತ್ಮರೆಂಬ ಮೂರು ವ್ಯಕ್ತಿಗಳಿದ್ದಾರೆ. "ಈ ಮೂವರೂ ಒಂದೇ ದೇವರಲ್ಲಿದ್ದು ಅವರುಗಳು ತತ್ವದಲ್ಲಿಯೂ, ಶಕ್ತಿಯಲ್ಲಿಯೂ, ಮಹಿಮೆಯಲ್ಲಿಯೂ ಒಂದೇ ಆಗಿದ್ದಾರೆ". ಈ ದೃಷ್ಟಿಕೋನವು "ಕತ್ತಲಿನ ಯುಗ"ದಲ್ಲಿ ಉಂಟು ಮಾಡಲು ಸೂಕ್ತವಾಗಿತ್ತು. ಅಂದಿನ ಕಾಲದಲ್ಲಿ ಸತ್ಯವು ಇನ್ನೂ ಪ್ರಕಟವಾಗಿರದ ವಿಷಯವನ್ನು ಬಿಟ್ಟು ಗೋಪ್ಯವಾದವುಗಳನ್ನು ಆರಾಧಿಸುತ್ತಿದ್ದರು. ಏಕೆಂದರೆ ಆ ತತ್ವದಲ್ಲಿ ಅಧಿಕ ಆಯ್ಕೆಗಳಿದ್ದವು, ಇದು ಅಸಮಂಜಸಕರವಾದದ್ದು ಅಲ್ಲದೇ ದೇವರ ವಾಕ್ಯಕ್ಕೆ ವಿರುದ್ಧವಾದದ್ದು. ಮೂರು ವ್ಯಕ್ತಿಗಳು ಒಬ್ಬರೇ, ಒಂದೇ ತತ್ವ ಆಗಲು ಹೇಗೆ ಸಾಧ್ಯ? 'ತತ್ವದಲ್ಲಿ ಒಂದೇ' ಆದಲ್ಲಿ ಅವರುಗಳು ಸಮಾನರಾಗಿರಲು ಹೇಗೆ ಸಾಧ್ಯ? ಯಾವುದೇ ಜ್ಞಾನವಂತ ವ್ಯಕ್ತಿಗೆ ದೇವರು ಒಬ್ಬನೇ ವ್ಯಕ್ತಿಯಾಗಿದ್ದರೆ ಆತನು ಮೂರು ವ್ಯಕ್ತಿಯಾಗಲು ಸಾಧ್ಯವಿಲ್ಲ ಎಂಬುದು ತಿಳಿಯದೇ? ಆತನು ಒಬ್ಬನಲ್ಲಿ ಮೂರು ವ್ಯಕ್ತಿಯಾಗಿದ್ದರೆ, ಮೂವರೂ ಒಂದಾಗುವುದರಲ್ಲಿ ಒಂದು ಅರ್ಥದಲ್ಲಿ ಮಾತ್ರ ಸಾಧ್ಯವಿದೆ. ಅದೇಂದರೆ ಒಂದೇ ವ್ಯಕ್ತಿಯಾಗಿ ಅಲ್ಲ ಆದರೆ ಉದ್ದೇಶದಲ್ಲಿ, ಮನಸ್ಸಿನಲ್ಲಿ, ಚಿತ್ತದಲ್ಲಿ ಮತ್ತು ಸಹಕಾರದಲ್ಲಿ ಮಾತ್ರ? ನಿಜವಾಗಿಯೂ, ಎಳೆಯ ಪ್ರಾಯದಿಂದಲೂ ಈ ತ್ರೈಯೇಕತ್ವವೆಂಬ ಅರ್ಥವಿಲ್ಲದ ಸಂಗತಿಗಳು ನಮಗೆ ಕೊರೆಯಲ್ಪಡದಿರುತ್ತಿದ್ದರೆ, ಅವುಗಳನ್ನು ನಮಗೆ ಅಮಲೇರುವಂತೆ ವೇದವಿದ್ಯಾಲಯಗಳಲ್ಲಿ ತಲೆನೆರೆತ ಪ್ರಾಧ್ಯಾಪಕರುಗಳಿಂದ, ಇನ್ನೂ ಇತರ ಅನೇಕ ರೀತಿಯಲ್ಲಿ ಜಾಣತನದಿಂದಲೋ ಎಂಬಂತೆ ಕಲಿಸಿಕೊಡದಿರುತಿದ್ದರೆ, ಯಾರೂ ಒಂದು ಕ್ಷಣವಾದರೂ ಇದನ್ನು ಗುರುತರವಾಗಿ ಪರಿಗಣಿಸುತ್ತಿರಲಿಲ್ಲ. ದೇವಜನರ ಮೇಲೆ ಅವರುಗಳು ದೇವರ ಅನೇಕ ವಾಕ್ಯಗಳಲ್ಲಿ ಇದರ ಅರ್ಥವನ್ನು ಕಂಡುಕೊಳ್ಳದಂತೆ ಅವರನ್ನು ದಿಗ್ಭ್ರಮೆಗೊಳಿಸಿ ಮಂಕಾಗುವಂತೆ ಮಾಡಿ ಅವರ ಮೇಲೆ ಇದನ್ನು ವಂಚನೆಯಿಂದ ಹೇರುವಲ್ಲಿ ವಿರೋಧಿಯು ಜಯಶೀಲನಾದುದಾದರೂ ಹೇಗೆ? ಎಂಬುದು ನಿಜವಾಗಿಯೂ ರಹಸ್ಯ ಸಂಗತಿಯಾಗಿದೆ. ಇದನ್ನು ನಾವು 'ಮಹಿಮೆಯಲ್ಲಿ "ನನ್ನನ್ನು ತಿಳಿದುಕೊಂಡಂತೆಯೇ ನಾನು ತಿಳಿದುಕೊಳ್ಳುತ್ತೇನೆ" ಎಂಬಂತೆ.

ಮೇಲಿನ ಅಧ್ಯಾಯಗಳಿಂದ ಒಬ್ಬ ಜಾಗರೂಕ ವಿದ್ಯಾರ್ಥಿಯು ದೇವರ ಪರಿಶುದ್ಧ ಗ್ರಂಥದಿಂದ ಸರ್ವಶಕ್ತನಾದ ಒಬ್ಬ ದೇವರಾದ ಯೆಹೋವನು ಮಾತ್ರವೇ ಇದ್ದಾನೆ ಮತ್ತು ಆತನು ತನ್ನ ಪ್ರಥಮವಾದ ಒಬ್ಬನೇ ಮಗನನ್ನು ಅತ್ಯಂತ ಉನ್ನತ ಸ್ಥಾನಕ್ಕೆ ಅಂದರೆ ತನ್ನ ಸ್ವಭಾವಕ್ಕೆ ಮತ್ತು ವಿಶ್ವದಲ್ಲಿನ ತನ್ನ ಸ್ವಂತ ಸಿಂಹಾಸನಕ್ಕೆ ಏರಿಸಿದ್ದಾನೆ ಎಂಬ ಬಗ್ಗೆ ಬಹಳಷ್ಟು ಸಾಕ್ಷ್ಯಗಳನ್ನು ಕಂಡುಕೊಂಡಿದ್ದಾನೆ. ಈ ಕ್ರಮದಲ್ಲಿ ಸಭೆಯು ನಂತರದಲ್ಲಿ ಆತನ ಮದಲಗಿತ್ತಿಯಾಗಿ, ಕುರಿಮರಿಯ ವಧುವಾಗಿ, ಜೊತೆ ವಾರಸುದಾರ ಅಥವಾ ಮತ್ತೊಂದು ಮಾತಿನಲ್ಲಿ 'ಸಹೋದರರು' ಎಂಬುವ ಮಹಿಮೆ ಹೊಂದಿಕೊಳ್ಳುತ್ತದೆ. ಇವರುಗಳು ಪ್ರಸ್ತುತದಲ್ಲಿ ಆತನ ಶ್ರಮೆಯ ಸಂಗಾತಿಗಳಾಗಿರುವಂತೆಯೂ ಮುಂದೆ ಆತನ ಮಹಿಮೆಯ ಸಂಗಾತಿಗಳಾಗಿಯೂ ಮಾಡಲ್ಪಡುತ್ತಾರೆ. ಎಲ್ಲಾ ವೇದ ಗ್ರಂಥಗಳೂ ಈ ಸಾಕ್ಷ್ಯದ ಬಗ್ಗೆ ಸಾಮರಸ್ಯದಿಂದೊಡಗೂಡಿದೆ ಮತ್ತು ಅವುಗಳನ್ನು ಒಪ್ಪಿಕೊಳ್ಳುತ್ತವೆ ಮತ್ತು ಮುಂದುವರೆದು ಯಾವುದೇ ದೇವರವಾಕ್ಯವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ನಿಜವಾಗಿ ಅಥವಾ ತೋರಿಕೆಯಾಗಿ ಈ ಕಾಣುವಿಕೆಯೊಂದಿಗೆ ಘರ್ಷಣೆ ಉಂಟುಮಾಡುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳು ಗಮನಿಸಿದ್ದಾರೆ. ಆಗ ಉದ್ಭವಿಸುವ ಪ್ರಶ್ನೆಯೆಂದರೆ ಪವಿತ್ರಾತ್ಮನು ಯಾರು?, ಎಲ್ಲಿದ್ದಾನೆ? ಏನಾಗಿದ್ದಾನೆ ಎಂಬುದು.

ನಾವು ಈ ಪ್ರಶ್ನೆಯ ಬಗ್ಗೆಯೂ ಉಳಿದವುಗಳನ್ನು ಅನುಸರಿಸಿದಂತೆ ಅದೇ ರೀತಿಯ ತನಿಖೆಗಳನ್ನು ಅನುಸರಿಸೋಣ. ನಾವು ನಮ್ಮ ಎಲ್ಲಾ ಮಾಹಿತಿಗಳಿಗಾಗಿ ದೇವರ ಧರ್ಮ ನಿಯಮ ಮತ್ತು ಸಾಕ್ಷ್ಯಗಳನ್ನು ನೋಡೋಣ. ನಾವು ಮನುಷ್ಯರ ಬಳಿಗೆ ಹೋಗದೇ ಇರೋಣ. ನಾವು ಮರಣಿಸಿದ ಅಥವಾ ಜೀವಿಸಿದ ಅಥವ ನಮಗೆ ಇನ್ನೂ ನಮ್ಮ ಸ್ವಂತದವರಾಗಿರದ ಒಳ್ಳೆಯ ಜನರ ಅನುಮಾನಗಳನ್ನು, ಊಹಾಪೋಹಗಳನ್ನು ಒಪ್ಪಿಕೊಳ್ಳದೇ ಇರೋಣ. ದೇವರ ವಾಕ್ಯವು **"ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧವಾಗುವಂತೆ"** (2 ತಿಮೋ. 3:17 ನೋಡಿರಿ) ನೀಡಲ್ಪಟ್ಟಿದೆ ಎಂಬ ಅಪೋಸ್ತಲನ ಹೇಳಿಕೆಯನ್ನು ನೆನಪಿಸಿಕೊಳ್ಳೋಣ. ನಾವು ನಮ್ಮ ಭರವಸೆಗಳನ್ನು ಸಂಪೂರ್ಣವಾಗಿ ಕರ್ತನ ಮೇಲೆ ಮಾತ್ರವೇ ಇಡೋಣ ಮತ್ತು ಆತನು ಪವಿತ್ರಾತ್ಮನ ಬಗ್ಗೆ ಹೇಳುವುದರ ಅರ್ಥವೇನೆಂಬುದನ್ನು ತಿಳಿದುಕೊಳ್ಳ ಬಯಸೋಣ. ದೇವರ ವಾಕ್ಯದ ಎಲ್ಲಾ ಸಾಕ್ಷ್ಯಗಳನ್ನು ಸಾಮರಸ್ಯಕ್ಕೆ ತರೋಣ ಮತ್ತು ಅಂಥಾ ಪರೀಕ್ಷೆಯಲ್ಲಿ ಸತ್ಯವು ಮಾತ್ರವೇ ಉಳಿದುಕೊಳ್ಳುತ್ತದೆ ಎಂದು ತಿಳಿಯೋಣ. ಈ ರೀತಿಯಾಗಿ ಪ್ರಾರ್ಥನಾ ಪೂರ್ವಕವಾಗಿಯೂ ಮತ್ತು ಜಾಗರೂಕತೆಯಿಂದಲೂ ಮಾಡುವವರಾದಲ್ಲಿ ನಮ್ಮ ಪ್ರಯತ್ನಗಳಿಗೆ ಪ್ರತಿಫಲ ದೊರೆಯುತ್ತದೆ. ಜ್ಞಾನದ ಬಾಗಿಲನ್ನು ತಟ್ಟುವವನಿಗೆ ಅದು ತೆರೆಯಲ್ಪಡುತ್ತದೆ, ಪವಿತ್ರಾತ್ಮನ ಜ್ಞಾನವನ್ನು ಬಯಸುವವರಿಗೆ ಅದು ಪ್ರಕಟಗೊಳ್ಳುತ್ತದೆ – ಯೆಶಾಯ 8:20; ಮತ್ತಾಯ 7:7,8.

ದೇವರ ವಾಕ್ಯದಲ್ಲಿ ಪವಿತ್ರಾತ್ಮನ ಬಗ್ಗೆ ಅನೇಕ ಅರ್ಥವಿವರಣೆಗಳಿವೆ. ಈ ಪ್ರಸ್ತಾಪವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಈ ವಿವಿಧ ಅರ್ಥವಿವರಣೆಗಳನ್ನು ಒಟ್ಟಾಗಿ ಪರಿಗಣಿಸಿ ಅವುಗಳು ಪರಸ್ಪರ ಬೆಳಕು ಚೆಲ್ಲುವಂತೆ ಮಾಡಬೇಕಾಗುತ್ತದೆ. ಪವಿತ್ರಾತ್ಮನನ್ನು ವಿವಿಧ ರೀತಿಯಲ್ಲಿ – **"ದೇವರ ಆತ್ಮನು" "ಕ್ರಿಸ್ತನ ಆತ್ಮನು" " ಪವಿತ್ರತೆಯ ಆತ್ಮನು" "ಸತ್ಯದ ಆತ್ಮನು" "ಸ್ವಸ್ಥ ಮನಸ್ಸಿನ ಆತ್ಮನು" "ಬಿಡುಗಡೆಯ ಆತ್ಮನು" "ತಂದೆಯ ಆತ್ಮನು" "ವಾಗ್ಧಾನದ ಪವಿತ್ರಾತ್ಮನು" "ದೈನ್ಯತೆಯ ಆತ್ಮನು" "ತಿಳುವಳಿಕೆಯ ಆತ್ಮನು" "ಜ್ಞಾನದ ಆತ್ಮನು" "ತೇಜೋಮಯನಾದ ಆತ್ಮನು" "ಆಲೋಚನ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮನು" "ಕೃಪೆಯ ಆತ್ಮನು" "ಪಡಕೊಳ್ಳುವ ಆತ್ಮನು"** ಮತ್ತು **"ಪ್ರವಾದನೆಯ ಆತ್ಮನು"** ಎಂದು ಹೇಳಲಾಗಿದೆ.

ಈ ವಿವಿಧ ಬಿರುದಾವಳಿಗಳು ಅನೇಕ ಸಾರಿ ಪುನರುಚ್ಚರಿಸಲ್ಪಟ್ಟಿದ್ದು ಮತ್ತು ಅಂತರಿಕ ಬದಲಾವಣೆ ಗಳೊಂದಿಗೆ ಉಪಯೋಗಿಸಲ್ಪಟ್ಟಿದ್ದು ಅವುಗಳೆಲ್ಲವೂ ಒಂದೇ ಪವಿತ್ರಾತ್ಮನಿಗೆ ಸಂಬಂಧಿಸಿದವುಗಳು ಎಂಬ ಸಂಪೂರ್ಣವಾದ, ಯುಕ್ತವಾದ ಭರವಸೆಗಳನ್ನು ನಮಗೆ ನೀಡುವವುಗಳಾಗಿವೆ. ನಿಜವಾಗಿಯೂ, ಆಗಿಂದಾಗ್ಗ್ಯೆ **"ಪವಿತ್ರ"** ಎಂಬ ಪದವನ್ನು ಇದಕ್ಕೆ ಸೇರಿಸಲಾಗುವುದು ಇಲ್ಲವೇ ಜೋಡಿಸಲಾಗುವುದು. ಉದಾಹರಣೆಗೆ **"ದೇವರ ಪವಿತ್ರಾತ್ಮ", "ವಾಗ್ಧಾನದ ಪವಿತ್ರಾತ್ಮ"** ಮುಂತಾಗಿ. ಈ ಯಾವುದೇ ನಾಮಧೇಯಗಳ ಪ್ರಸ್ತಾಪವನ್ನು ತಿರಸ್ಕರಿಸದ ಆದರೆ ಅವುಗಳನ್ನು ಸಾಮರಸ್ಯಗೊಳಿಸುವ ತಿಳುವಳಿಕೆಯನ್ನು ನಾವು ಬಯಸಬೇಕು. **"ಮೂರನೆಯ ದೇವರು"** ಎಂಬ ಸಾಮಾನ್ಯ ಕಲ್ಪನೆಯಲ್ಲಿ ಈ ಎಲ್ಲಾ ಹೇಳಿಕೆಗಳನ್ನು ಸಾಮರಸ್ಯಗೊಳಿಸಲು ಸಾಧ್ಯವಿಲ್ಲ. ಆದರೆ ಈ ಪ್ರತಿಯೊಂದಕ್ಕೂ ಅನುಗುಣವಾಗಿ ಈ ವಿವಿಧ ಶಬ್ಧಪ್ರಯೋಗಗಳನ್ನು ಆತ್ಮನ ವಿವರಣೆ ಎಂಬುದಾಗಿಯೂ, ನಮ್ಮ ತಂದೆಯಾದ ಒಬ್ಬನೇ ದೇವರ ಚೈತನ್ಯ, ಪ್ರವೃತ್ತಿ ಮತ್ತು ಶಕ್ತಿಯೆಂಬುದಾಗಿಯೂ ಅರ್ಥಮಾಡಿಕೊಳ್ಳಬೇಕು. ಮತ್ತು ಆತ್ಮನನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರವೃತ್ತಿ ಮತ್ತು ಶಕ್ತಿಯೆಂಬುದಾಗಿ. ಯಾಕೆಂದರೆ, ಆತನು ತಂದೆಯೊಂದಿಗೆ ಒಂದಾಗಿದ್ದಾನೆ – ಮಾತ್ರವಲ್ಲದೆ ಕೆಲಮಟ್ಟಿಗೆ ನಿಜವಾಗಿಯೂ ದೇವರ ದೂತರು ಅಥವಾ ಮನುಷ್ಯರಾದವರೆಲ್ಲರು ಆತನೊಂದಿಗೆ ಏಕತೆಗೆ ಅಥವಾ ಸಾಮರಸ್ಯಕ್ಕೆ ಬಂದ ಅನುಪಾತದಲ್ಲಿ ಅದು ಅವರ ಸ್ಫೂರ್ತಿ, ಪ್ರವೃತ್ತಿ ಮತ್ತು ಶಕ್ತಿಯೂ ಆಗಿದೆ.

ದೇವರ ಪರಿಶುದ್ಧ ಗ್ರಂಥಗಳಲ್ಲಿ ಆಗಾಗ್ಗ್ಯೆ ಮತ್ತೊಂದು ಆತ್ಮನ ಬಗ್ಗೆಯೂ ಹೇಳುವುದಿದೆ. ಅದು ವಿರೋಧ ಅರ್ಥದಲ್ಲಿ – 'ಭಯದ ಆತ್ಮ', 'ದಾಸತ್ವವೆಂಬ ಬಂಧನದ ಆತ್ಮ', 'ಈ ಲೋಕದ ಆತ್ಮ' 'ಸುಳ್ಳನ್ನು ಬೋಧಿಸುವ ಆತ್ಮ' 'ಶಕುನ ಹೇಳುವ ಆತ್ಮ' 'ಕ್ರಿಸ್ತ ವಿರೋಧಿಯ ಆತ್ಮ' 'ಜಡಭಾವದ ಆತ್ಮ' ಇತ್ಯಾದಿಯಾಗಿ. ಇವೆಲ್ಲವೂ ದುರಾತ್ಮಗಳು. ಈ ವಿವಿಧ ಅರ್ಥವಿವರಣೆಗಳನ್ನು ಒಟ್ಟಾಗಿ ಪರಿಗಣಿಸಿದಲ್ಲಿ ಎರಡು ಅಥವಾ ಇನ್ನೂ ಹೆಚ್ಚು ಸೈತಾನರು ಇದ್ದಾರೆಂದು ಯಾರೂ ಆಲೋಚಿಸುವುದಿಲ್ಲ. ಪ್ರತಿಯೊಬ್ಬರೂ ಈ ಪದಗಳ ಅರ್ಥವನ್ನು ಯಥೋಚಿತವಾಗಿ ಗ್ರಹಿಸುವವರಾಗಿ ಇವು 'ಅನ್ಯಾಯದ ಆತ್ಮ' 'ದುರಾತ್ಮ'ನನ್ನು ಸೂಚಿಸುತ್ತವೆಂದು ತಿಳಿಯುತ್ತಾರೆ. ಈ ದುರಾತ್ಮನ ಆತ್ಮ, ಪ್ರವೃತ್ತಿ ಮತ್ತು ಶಕ್ತಿ ಇವುಗಳ ಮುಖ್ಯ ನಿದರ್ಶನವು ಸೈತಾನನಲ್ಲಿದೆ. ಈ ಆತ್ಮವು ಯಾರಾರು ಪಾಪ ಮತ್ತು ಸೈತಾನನೊಂದಿಗೆ ಸಾಮರಸ್ಯದಲ್ಲಿರುತ್ತಾರೋ ಅವರಲ್ಲಿ ಪ್ರಕಟಗೊಳ್ಳುತ್ತದೆ. ಯಾರೂ ಇದನ್ನು ವ್ಯಕ್ತಿಗತವಾದ ಆತ್ಮವೆಂದು ತಿಳಿಯದಿರುವುದು ಬಹಳಷ್ಟು ಸಮಂಜಸವಾಗಿದೆ. ಇಂಥಾಃ ಆತ್ಮನ (ಪಿಶಾಚನ) ವಿವಿಧ ಅನ್ವಯುಗಳನ್ನು ಯಾರೊಬ್ಬರೂ ಒಳ್ಳೆಯ ಅರ್ಥದಲ್ಲಿ ಅಂದರೆ ವಿವಿಧ ಆತ್ಮಗಳನ್ನು ಪ್ರತಿನಿಧಿಸುತ್ತವೆ ಅಥವಾ ಇವುಗಳು ಒಟ್ಟಾಗಿ ಮತ್ತೊಂದು ದೇವರನ್ನು ಸೂಚಿಸುತ್ತವೆ ಎಂಬುದಾಗಿ ಪರಿಗಣಿಸಬಾರದು. ಈ ಶಬ್ಧಗಳನ್ನು ಸದ್ಭಾವದಲ್ಲಿ ಒಟ್ಟಾಗಿ ಪರಿಗಣಿಸಿದಾಗ, ನಮ್ಮ ಯೆಹೋವ ದೇವರ ಆತ್ಮ, ಅದರ ವಿವಿಧ ಗುಣ ಲಕ್ಷಣಗಳು, ಮನೋಪ್ರವೃತ್ತಿ, ಅದೇ ಅನುಪಾತದಲ್ಲಿ ಆತನ ಆತ್ಮನನ್ನು ಅಂಗೀಕರಿಸಿದವರ, ಆತನ ಪ್ರವೃತ್ತಿಯಲ್ಲಿ ಪಾಲುದಾರರಾದವರ, ದೇವರ ಮನಸ್ಸಿನೊಂದಿಗೆ ಸಾಮರಸ್ಯಕ್ಕೆ ಬಂದವರ ಮನೋಧರ್ಮವನ್ನು ಸಹಾ ಪ್ರತಿನಿಧಿಸುತ್ತವೆ.

ಮಾನವ ಆತ್ಮಗಳ ಬಗ್ಗೆ ದೇವರ ವಾಕ್ಯದಲ್ಲಿಲ್ಲದ, ಆದಕಾರಣ ತಪ್ಪಾದ ಕಲ್ಪನೆಗಳು – ಇವುಗಳ ಕುರಿತಾಗಿ ನಾವು ಮುಂದಿನ ಅಧ್ಯಾಯಗಳಲ್ಲಿ ತಿಳಿಸುವವರಾಗಿದ್ದೇವೆ – ಪವಿತ್ರಾತ್ಮನ ಬಗ್ಗೆ ವೇದದಲ್ಲಿ ಇಲ್ಲದ ಮತ್ತು ತಪ್ಪಾದ ದೃಷ್ಟಿಕೋನಕ್ಕೆ ಹತ್ತಿರವಾಗಿವೆ. ಇವುಗಳು ಈಗ ಸಾಮಾನ್ಯವಾಗಿ ಪ್ರಚಲಿತವಾಗಿವೆ. ದೇವರ ಆತ್ಮನ ಮತ್ತು ಮಾನವನ ಆತ್ಮನ ಕುರಿತಾದ ತಪ್ಪಾದ ಆಲೋಚನೆಗಳನ್ನು ತೀಕ್ಷ್ಣಗೊಳಿಸಲಾಗಿದೆ, ಮತ್ತು ಆಗಾಧಗೊಳಿಸಲಾಗಿದೆ ಎಂಬ ಸತ್ಯವು ಆಂಗ್ಲ ಭಾಷೆಯ ಸಾಧಾರಣ ಭಾಷಾಂತರ (Common version) ದಲ್ಲಿ ಯಾವುದೇ ಕಿಂಚಿತ್ತೂ ಅಧಿಕಾರವೂ ಇಲ್ಲದೆ `Holy Ghost' ಎಂಬ ಪದವನ್ನು ಸುಮಾರು ತೊಂಬತ್ತೆರಡು ಸಾರಿ ಉಪಯೋಗಿಸಲ್ಪ ಟ್ಟಿರುವುದರಲ್ಲಿ ನಮಗೆ ತಿಳಿದುಬರುತ್ತದೆ. ಇದರ ಮೂಲ ಗ್ರೀಕ್ ಪದ Pneuma ಅಂದರೆ 'ಆತ್ಮನು' ಎಂಬುದಾಗಿದೆ. ಅವಿದ್ಯಾವಂತರಿಗೆ 'Ghost' ಎಂಬ ಪದವು ಅಸ್ಪಷ್ಟವಾದ ಅರ್ಥವನ್ನು ನೀಡುತ್ತದೆ. ಪರಂತು, ಇದನ್ನು ಬಹಳ

ಸಕಾರಾತ್ಮಕವಾಗಿ 'ವ್ಯಕ್ತಿತ್ವ' ಎಂಬ ಆಲೋಚನೆಯೊಂದಿಗೆ ಗುರುತಿಸಲಾಗುತ್ತದೆ. ನೂತನ ಒಡಂಬಡಿಕೆಯ ಪರಿಷ್ಕೃತ ಭಾಷಾಂತರ (Revised version)ದಲ್ಲಿ 'Ghost' ಎಂಬ ಪದವು ಕಂಡುಬರುವ ಇಪ್ಪತ್ತೊಂದು ಕಡೆಗಳಲ್ಲಿ ಇದನ್ನು 'Spirit' ಎಂಬುದಾಗಿ ಬದಲಾಯಿಸಿರುವುದು ಗಮನಾರ್ಹವಾಗಿದೆ. ಅಮೆರಿಕಾದ ಪರಿಷ್ಕೃತ ಸಮಿತಿ (Revision Committee) ಯವರು ಉಳಿದ ಎಪ್ಪತ್ತೊಂದು ಕಡೆಗಳಲ್ಲಿ ಇನ್ನೂ ಕಂಡುಬರುವ 'Ghost' ಎಂಬ ಪದದ ಉಪಯೋಗಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಹೀಗಿದ್ದಾಗ್ಯೂ, ಆಂಗ್ಲೇಯ ಮತ್ತು ಅಮೆರಿಕಾ ಸಮಿತಿಗಳೆರಡರಲ್ಲಿಯೂ ಗುರುತರವಾದ ತ್ರೈಯೇಕತ್ವ ವಾದಿಗಳು ಇದ್ದಾರೆ.

ದೇವರ ಪವಿತ್ರಾತ್ಮನನ್ನು ತಂದೆಯಾದ ದೇವರಿಂದ, ಮಗನಿಂದ ಬೇರೆಯದೇ ಆದ ವ್ಯಕ್ತಿತ್ವ ಹೊಂದಿರುವ ಮತ್ತೊಂದು ದೇವರು ಎಂದು ಆಲೋಚಿಸುವುದಕ್ಕೂ, ಹೇಳುವುದಕ್ಕೂ ನಿರಪೇಕ್ಷವಾಗಿ ಯಾವುದೇ ನೆಲೆಯಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ನಮ್ಮ ಕರ್ತನಾದ ಯೇಸುವಿನೊಡನೆ ಸಂಪರ್ಕಿಸಿದ್ದು ದೇವರ ಆತ್ಮನೇ ಆಗಿದ್ದಾನೆ ಎಂಬ ಸತ್ಯವನ್ನು ನಾವು ಗಮನಿಸಬೇಕಾಗುತ್ತದೆ. **"ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭ ವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು"** (ಲೂಕ. 4:18) ಎಂದು ಓದುತ್ತೇವೆ. ಈ ಉಲ್ಲೇಖವನ್ನು ತೆಗೆದುಕೊಂಡ ಪ್ರವಾದನಾ ವಾಕ್ಯದ ಕಡೆಗೆ ತಿರುಗಿ ನೋಡುವುದಾದರೆ ನಾವು ಅಲ್ಲಿ ಇಬ್ರಿಯ ಭಾಷೆಯಲ್ಲಿ "The Spirit of the Lord Jevoah shall rest upon me, because he hath anointed me to proclaim good tidings to the humble" (Isa. 61:1) ಎಂದು ನೋಡುತ್ತೇವೆ. ಅದೇ ಅಭಿಪ್ರಾಯದಲ್ಲಿ ನಾವು ಪುನಃ **"ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ; ಆಲೋಚನ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮ, ತಿಳುವಳಿಕೆಯನ್ನೂ, ಯೆಹೋವನ ಭಯವನ್ನೂ ಉಂಟುಮಾಡುವ ಆತ್ಮ, ಅಂತೂ ಯೆಹೋವನ ಆತ್ಮವೇ ನೆಲೆಗೊಂಡಿರುವುದು"** (ಯೆಶಾಯ 11:2,3) ಎಂದು ಸಹಾ ಓದುತ್ತೇವೆ. ಅದೇ ರೀತಿಯಲ್ಲಿ ಕರ್ತನಲ್ಲಿರುವ ಆತ್ಮನನ್ನು **"ಕ್ರಿಸ್ತನ** ಆತ್ಮ"ನೆಂದೂ, ಕ್ರಿಸ್ತನ ಮನಸ್ಸು ಎಂದೂ ಸೂಚಿಸಲಾಗಿದೆ. – **"ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ"** (ಫಿಲಿಪ್ಪಿ 2:5) ಎಂದು ಬರೆಯಲಾಗಿದೆ.

ಪವಿತ್ರಾತ್ಮನ ಬಗ್ಗೆ ಯೋಹಾನ 14:26ರಲ್ಲಿರುವ ನಮ್ಮ ಕರ್ತನ ಉಲ್ಲೇಖವು ಪವಿತ್ರಾತ್ಮನು ಒಬ್ಬ ವ್ಯಕ್ತಿಯೆಂಬುದನ್ನು ರುಜುವಾತುಪಡಿಸುತ್ತದೆ ಎಂಬುದಾಗಿ ಕೆಲವರು ಒತ್ತಾಯಪೂರ್ವಕವಾಗಿ ಹೇಳುತ್ತಾರೆ. ಸಾಮಾನ್ಯ ಭಾಷಾಂತರದಲ್ಲಿ **"ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು"** ಎಂಬುದಾಗಿ ಅಲ್ಲಿ ಬರೆಯಲ್ಪಟ್ಟಿದೆ. ಆದರೆ ಗ್ರೀಕ್ ಮೂಲಗ್ರಂಥದಲ್ಲಿ ಈ ವಾಕ್ಯಭಾಗದ ಕ್ಷಣ ದರ್ಶನ ಮಾಡಿದರೆ ನಮ್ಮ ಭಾಷಾಂತರಕಾರರು ಪೂರ್ವಕಲ್ಪಿತ ಅಭಿಪ್ರಾಯಗಳಿಗೆ ತುತ್ತಾಗಿದ್ದಾರೆ ಎಂದು ಕಂಡುಬರುತ್ತದೆ. ಅವರು ಆಂಗ್ಲ ಭಾಷೆಯಲ್ಲಿ 'whom' ಮತ್ತು 'He' ಪದಗಳನ್ನು ಉಪಯೋಗಿಸುವ ಕಾರಣವೇ ಇದ್ದಿಲ್ಲ (ಕನ್ನಡದಲ್ಲಿ 'ಪವಿತ್ರಾತ್ಮನು' 'ತರುವನು' ಎಂಬೀ ಪದಗಳು). ಮೂಲ ಗ್ರೀಕ್ ವಾಕ್ಯವನ್ನು ಈ ರೀತಿಯಾಗಿ ಭಾಷಾಂತರಿಸಬೇಕಾಗಿತ್ತು **"ಆ <u>ಸಹಾಯವು</u> ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ <u>ಪವಿತ್ರಾತ್ಮವು</u> ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನೆಲ್ಲಾ ನಿಮ್ಮ ನೆನಪಿಗೆ <u>ತರುವುದು</u>"** ("But the helper, the Holy Spirit which the father will send in my name, shall teach you all things and remind of those things which I said to you").

ಅದೇ ರೀತಿಯಲ್ಲಿ ಹದಿನೇಳನೆಯ ವಚನದ ಬಗ್ಗೆಯೂ ವಿಮರ್ಶಿಸಬಹುದು, ಸಾಮಾನ್ಯ ಭಾಷಾಂತರದಲ್ಲಿ ಆ ವಚನವು ಇಂತಿದೆ – **"ಆ ಸಹಾಯಕನು ಯಾರೆಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವುದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ; ಹೇಗೆಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು"** (The Spirit of truth, whom the world cannot receive, for he dwelleth with you, and shall be in you). ಇಲ್ಲಿ ಸತ್ಯದ ಆತ್ಮನು (The Spirit of truth) ಎಂಬ ಹೇಳಿಕೆಯು ಸ್ಪಷ್ಟವಾಗಿ 'ತಪ್ಪುಗಳ ಆತ್ಮ' (The Spirit of Error) ಎಂಬುದರ ವಿರುದ್ಧ ಪದವಾಗಿ ಬಳಕೆಯಾಗಿದೆ. ಈ ವಾಕ್ಯಭಾಗವು ಯಾವುದೇ ವ್ಯಕ್ತಿಯನ್ನು ಉಲ್ಲೇಖಿಸದೆ ಸತ್ಯದ ಪ್ರಭಾವವನ್ನು ಮತ್ತು ದೇವ ಜನರ ಮೇಲೆ ಅದರ ಪರಿಣಾಮವನ್ನು ಮಾತ್ರವೇ ಉಲ್ಲೇಖಿಸುತ್ತದೆ. ಗ್ರೀಕ್ ಪದದ ಭಾಷಾಂತರವು "The Spirit of truth, <u>which</u> the world cannot receive, because it beholds <u>it</u> not, nor knows <u>it</u>; but ye know <u>it</u> ; because <u>it</u> operates with you and will be in you" [**ಆ ಸಹಾಯವು ಯಾವುದೆಂದರೆ ಸತ್ಯದ ಆತ್ಮವೇ. ಲೋಕವು ಅದನ್ನು ನೋಡದೆಯೂ ತಿಳಿಯದೆಯೂ ಇರುವುದರಿಂದ ಅದನ್ನು ಹೊಂದಲಾರದು. ನೀವು ಅದನ್ನು ಬಲ್ಲಿರಿ; ಹೇಗೆಂದರೆ ಅದು ನಿಮ್ಮ ಬಳಿಯಲ್ಲಿ ವಾಸಮಾಡುತ್ತದೆ. ಮತ್ತು ನಿಮ್ಮೊಳಗೆ ಇರುವುದು"**]

ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ – **"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತ ನನ್ನನ್ನೇ ಮಹಿಮೆಪಡಿಸುವನು"** (ಯೋಹಾನ 16:13–14) – ಈ ವಾಕ್ಯಭಾಗದಲ್ಲಿ ಗ್ರೀಕ ಪದವಾದ heautou ಎಂಬುದನ್ನು himself ಎಂಬುದಾಗಿ ಭಾಷಾಂತರಿಸಲಾಗಿದೆ. ಆದರೆ ಇದನ್ನು itself ಎಂಬುದಾಗಿ ಭಾಷಾಂತರಿಸ ಬೇಕಾಗುತ್ತದೆ. ನಮ್ಮ ಸಾಧಾರಣ ಭಾಷಾಂತರದಲ್ಲಿ heautou ಎಂಬ ಗ್ರೀಕ್ ಪದವನ್ನು ಪುಲ್ಲಿಂಗ, ಸ್ತ್ರೀಲಿಂಗ, ಸಮಾನ ಲಿಂಗ ಮತ್ತು ನಪುಂಸಕ ಲಿಂಗದ ಪದವನ್ನಾಗಿ ಬಳಸಲಾಗಿದೆ. ಉದಾಹರಣೆಗೆ ಮೇಲಿನ ವಾಕ್ಯಭಾಗದಲ್ಲಿ ಆ ಪದವನ್ನು ಪುಲ್ಲಿಂಗ*ವನ್ನಾಗಿ ಬಳಸಲಾಗಿದೆ. 1 ಕೊರಿಂಥ 11:5ರಲ್ಲಿ, ಪ್ರಕಟನೆ 2:20 – **"ಆ ಹೆಂಗಸು ತನ್ನನ್ನು ಪ್ರವಾದಿನಿ ಎಂದು ಹೇಳಿಕೊಂಡು ..."** ಮತ್ತು ಕೊರಿಂಥ 13:5 (Seeketh not her own)ರಲ್ಲಿ ಇದನ್ನು ಸ್ತ್ರೀ ಲಿಂಗವನ್ನಾಗಿಯೂ ಉಪಯೋಗಿಸಲಾಗಿದೆ 1 ಕೊರಿಂಥ 11:31 (if we would judge ourselves) ಅದೇ ರೀತಿ 1 ಕೊರಿಂಥ 16:15 (have addicted themselves), ಲೂಕ 22:17 ("ye divide it among yourselves), ಯೋಹಾನ 6:53 (ye have no life in you) ಇವುಗಳಲ್ಲಿ ಇದನ್ನು ಸಮಾನ ಲಿಂಗವನ್ನಾಗಿ ಉಪಯೋಗಿಸಲಾಗಿದೆ. ನಮ್ಮ ಸಾಮಾನ್ಯ ಭಾಷಾಂತರದಲ್ಲಿ heautou ಎಂಬ ಪದವನ್ನು ಈ ಕೆಳಗಣ ಉದಾಹರಣೆಗಳ ಪ್ರಕಾರ ನಪುಂಸಕ ಲಿಂಗವನ್ನಾಗಿಯೂ ಉಪಯೋಗಿಸಲಾಗಿದೆ :–

**"ನಾಳಿನ ದಿನವು ತನ್ನದನ್ನು ತಾನೇ ನೋಡಿಕೊಳ್ಳುವುದು"** (ಮತ್ತಾಯ 6:34)

**"ಒಂದು ಮನೆಯಲ್ಲಿ ಬೇಧ ಹುಟ್ಟಿದರೆ ಆ ಮನೆಯು ನಿಲ್ಲಲಾರದು"** (ಮಾರ್ಕ 3:25)

**"ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ...."** (ಯೋಹಾನ 15:4)

**"ಯಾವ ಪದಾರ್ಥವೂ ಸ್ವತಃ ಅಶುದ್ಧವಾದದಲ್ಲವೆಂದು ಬಲ್ಲೆನು"** (ಮತ್ತಾಯ 6:34)

**"ದೇಹವೆಲ್ಲಾ . . ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ"** (ಎಫೆಸ 4:16)

**"ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು"** (ಯಾಕೋಬ 2:17)

ಅದೇ ರೀತಿಯಲ್ಲಿ Ekinos ಎಂಬ ಪದವನ್ನು 'he' ಎಂಬುದಾಗಿ ನಾವೀಗ ಪರಿಗಣಿಸುತ್ತಿರುವ ವಾಕ್ಯಭಾಗದಲ್ಲಿ ಉಪಯೋಗಿಸಲಾಗಿದೆ. ಅದೇ ಔಚಿತ್ಯದಲ್ಲಿ ಅದನ್ನು 'ಅದು 'ಇದು' 'ಅವುಗಳು' 'ಅವಳು' 'ಇದು' ಇತ್ಯಾದಿಯಾಗಿಯೂ ನಮ್ಮ ಸಾಮಾನ್ಯ ಭಾಷಾಂತರದಲ್ಲಿ ತರ್ಜುಮೆ ಮಾಡಬಹುದಾಗಿದೆ. ನಮ್ಮ ಆಂಗ್ಲ ಭಾಷೆಯ ಸಾಧಾರಣ ಭಾಷಾಂತರದಲ್ಲಿ ಇದನ್ನು ಈ ಎಲ್ಲಾ ವಿವಿಧ ರೂಪಗಳಲ್ಲಿಯೂ ಮತ್ತು ಮೇಲಿಂದ ಮೇಲೆ ಪುಲ್ಲಿಂಗ (he, his, him ಮುಂತಾಗಿ)ವಾಗಿ ಉಪಯೋಗಿಸಲ್ಪಟ್ಟಿದೆ. ಈ ಪ್ರಸ್ತಾಪದ ಬಗ್ಗೆ ಅನುಮಾನವುಳ್ಳ ಯಾರೇ ಆದರೂ ಹೊಸಒಡಂಬಡಿಕೆಯ ಗ್ರೀಕ್–ಇಂಗ್ಲಿಷ್ ಹೊಂದಾಣಿಕೆ ಪುಸ್ತಕದ ಮೂಲಕ ಹೊಂದಾಣಿಕೆಮಾಡಿಕೊಳ್ಳಬಹುದು. (English concordance of New Testament).

ಇದರಲ್ಲಿ ಈ ಪದದ ವಿವಿಧ ಭಾಷಾಂತರಗಳು ಲಭ್ಯವಾಗಲಿವೆ.

Ekinosಎಂಬ ಪದದ ವಿವಿಧ ಭಾಷಾಂತರಗಳ ಒಂದು ಉದಾಹರಣೆಯನ್ನು ನಾವು ನಿಮಗೆ ಕೊಡುವವರಾಗಿದ್ದೇವೆ:

"It shall be more tolerable in that day for Sodom than for that City" (Luke 10:12)

**"ಆ ದಿವಸದಲ್ಲಿ ಅಂಥ ಊರಿನ ಗತಿಯು ಸೊದೋಮೂರಿನ ಗತಿಗಿಂತಲೂ ಕಠಿಣವಾಗಿರುವುದು"**

"She, supposing him to be the Gardener, saith ..." (John 20:15)

ಆಕೆ ಆತನನ್ನು ತೋಟಗಾರನೆಂದು ನೆನಸಿ ಆತನಿಗೆ ... – ಯೊಹಾನ 20;15

"But know this, that the Goodman of the house . . . (Matt 24:43)

ಇದು ಮನೆ ಯಜಮಾನನಿಗೆ ತಿಳಿದಿದ್ದರೆ . . . . " – ಮತ್ತಾಯ 24:43

"I do not say that ye shall pray for it ..." (1 John : 5:16)

---

* ಇಲ್ಲಿ ಸರ್ವನಾಮವು (Pronoun) Comforter ಎಂಬ ನಾಮಪದವನ್ನು (Noun) ಅನುಸರಿಸುತ್ತದೆ (Comforter ಎಂಬುದು ವಾಸ್ತವವಾಗಿ ಪುಲ್ಲಿಂಗವಾಗಿದೆ. ಆದರೆ ನಿರ್ಣಾಯಕವಾಗಿ ಜರ್ಮನ್ ಭಾಷೆಯಲ್ಲಿರುವಂತೆ ಇದು ಯಾವುದೇ ಲಿಂಗವನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ಅಲ್ಲಿ stove, table ಅನ್ನು ಪುಲ್ಲಿಂಗವಾಗಿಯೂ fork ಸ್ತ್ರೀಲಿಂಗವಾಗಿಯೂ woman ನಪುಂಸಕ ಲಿಂಗವನ್ನಾಗಿಯೂ ಬಳಸಲಾಗುವುದು)

ಅದರ (ಪಾಪದ) ವಿಷಯವಾಗಿ ಬೇಡಿಕೊಳ್ಳಬೇಕೆಂದು ನಾನು ಹೇಳುವುದಿಲ್ಲ – 1 ಯೋಹಾನ 5:16

"On one of those days as he taught" (Luke 20:1)

ಆ ದಿವಸಗಳೊಳಗೆ ಒಂದು ದಿನ ಆತನು ದೇವಾಲಯದಲ್ಲಿ ಜನರಿಗೆ ಉಪದೇಶ ಮಾಡುತ್ತಾ ..." – ಲೂಕ 20:1.

" The same day was Sabbath (John 5:9)

"ಆ ದಿವಸ ಸಬ್ಬತ್ ದಿನವಾಗಿತ್ತು – ಯೋಹಾನ 5:10.

"The Child was cured from that very hour" (Mathew 17:18)

ಆ ದಿವಸವೇ (ಕ್ಷಣವೇ) ಆ ಹುಡುಗನಿಗೆ ಸ್ವಸ್ಥವಾಯಿತು – ಮತ್ತಾಯ 17:18.

ಒಬ್ಬ ವ್ಯಕ್ತಿಯ ಅಥವಾ ವಸ್ತುವಿಗೆ ಸೇರಿದ ಲಿಂಗವನ್ನು ಅದರ ಸದ್ಗುಣ ಅಥವಾ ಗುಣಕ್ಕೆ ಸೇರಿಸುವುದು ವಾಡಿಕೆಯಲ್ಲವಾದುದೇನೂ ಅಲ್ಲ; ಈ ರೀತಿಯಲ್ಲಿ ಒಂದು ನಿದರ್ಶನವಾಗಿ, ಪರಲೋಕದ ತಂದೆಯನ್ನು ನಾವು ಓರ್ವ ಪುರುಷನನ್ನಾಗಿ ನಿಶ್ಚಯಿಸಿರುವುದರಿಂದ, ಆತನ ಶಕ್ತಿ, ಆತನ ಆತ್ಮ, ಆತನ ಎಲ್ಲಾ ಪ್ರಭಾವಗಳು ಮತ್ತು ಗುಣಲಕ್ಷಣಗಳು ಇವೆಲ್ಲವುಗಳನ್ನೂ ಅದರಂತೆಯೇ ಪುಲ್ಲಿಂಗವಾಗಿಯೇ ನಿಶ್ಚಯಿಸಬೇಕಾಗುತ್ತದೆ. ನಪುಂಸಕ ಲಿಂಗದ್ದಾಗಿರುವವುಗಳನ್ನು ಪುಲ್ಲಿಂಗ ಅಥವಾ ಸ್ತ್ರೀಲಿಂಗದವುಗಳನ್ನಾಗಿ ನಿಶ್ಚಯಿಸುವುದು ಅಪರೂಪವಾದುದೇನಲ್ಲ. ಅದರಂತೆ ಅವುಗಳು ಚಟುವಟಿಕೆಯುಳ್ಳವುಗಳೂ, ಬಲಯುತವಾದವುಗಳೂ ಅಥವಾ ಸಹನೆಯುಳ್ಳವುಗಳು ಮತ್ತು ಕೋಮಲವಾದವುಗಳೂ ಆಗಿರುತ್ತವೆ. ಈ ರೀತಿಯ ಉದಾಹರಣೆಯಾಗಿ ಸೂರ್ಯನನ್ನು ವಿಶ್ವದಾದ್ಯಂತ 'ಆತನು' (ಪುಲ್ಲಿಂಗ) ಎಂಬುದಾಗಿ ಮತ್ತು ಚಂದ್ರನನ್ನು 'ಆಕೆ' (ಸ್ತ್ರೀಲಿಂಗ) ಎಂಬುದಾಗಿ ಗುರುತಿಸುತ್ತಾರೆ. ಆದುದರಿಂದ ಅದು ಪ್ರಸ್ತಾಪದ ಸಾಮಾನ್ಯವಾದ ತಪ್ಪು ತಿಳಿವಳಿಕೆಗೆ ಅಲ್ಲವಾದರೆ ಮತ್ತು ಪ್ರಚಲಿತದಲ್ಲಿರುವಂತೆ ಪವಿತ್ರಾತ್ಮನು ಓರ್ವ ವ್ಯಕ್ತಿಯಾಗಿದ್ದಾನೆ ಎಂಬ ಆಲೋಚನೆಯಂತೆ (ದೇವರ ಆತ್ಮನು, ಪ್ರಭಾವ ಮತ್ತು ಶಕ್ತಿಯು ಮಾತ್ರವಲ್ಲ – ಆತನು ತಂದೆಯ ಆತ್ಮನು) ದೇವರನ್ನು ಒಬ್ಬ ಪುರುಷನು, ಜೀವದ ಉತ್ಪಾದಕ, ಜೀವದ ಮತ್ತು ಆಶೀರ್ವಾದದ ಮೂಲವೂ ಎಂದು ಗುರುತಿಸಿರುವುದರಿಂದ ಪುಲ್ಲಿಂಗ ಸರ್ವನಾಮವನ್ನು ಆತನಿಗೆ ಅನ್ವಯಿಸುವುದರಲ್ಲಿ ಯಾವುದೇ ಟೀಕೆಗಳಿರಬಾರದು. ವ್ಯಕ್ತಿಗಳ ಸರ್ವನಾಮದ ಉಪಯೋಗವು ದೇವರ ಪವಿತ್ರಾತ್ಮವನ್ನು ದೇವರು ಮತ್ತು ಮಗನಿಗಿಂತ ಬೇರೊಬ್ಬ ವ್ಯಕ್ತಿಯೆಂದು – ಬೇರೊಬ್ಬ ದೇವರೆಂದು ಸಾಬೀತು ಪಡಿಸುವುದಿಲ್ಲ. ಪವಿತ್ರಾತ್ಮವು ದೇವರ ಪ್ರಭಾವ, ಆತನ ಆತ್ಮ ಮತ್ತು ಮಗನದೂ ಸಹಾ. ಯಾಕೆಂದರೆ, ಇವುಗಳು ತಮ್ಮ ಉದ್ದೇಶ ಮತ್ತು ಪ್ರಭಾವಗಳಲ್ಲಿ ಒಂದೇ ಆಗಿವೆ.

## 'ಆತ್ಮ' ಎಂಬ ಪದದ ಅರ್ಥ
## The Meaning of the Word "Spirit"

ಆಗ 'ಪವಿತ್ರಾತ್ಮ' ಎಂಬ ಪದಕ್ಕೆ ಪರಿಶುದ್ಧಗ್ರಂಥಗಳಲ್ಲಿ ಉಪಯೋಗಿಸುವಂತೆ ಇರುವ ಅರ್ಥವಾದರೂ ಏನು? ಎಂಬ ಪ್ರಶ್ನೆಯೊಂದು ಯಥೋಚಿತವಾಗಿ ಉದ್ಭವಿಸುತ್ತದೆ. – ದೈವಿಕ ಗುಣಲಕ್ಷಣಗಳನ್ನು ಅಥವಾ ಶಕ್ತಿಯ ಗುಣಗಳನ್ನು ಅಥವಾ ಅರ್ಹತೆಗಳನ್ನು 'ಆತ್ಮ'ಎಂಬ ಪದವು ಪ್ರತಿನಿಧಿಸುತ್ತದೆಯೇ? ಇದಕ್ಕೆ ಉತ್ತರವು ಮೊಟ್ಟಮೊದಲಲ್ಲಿ 'ಸ್ಪಿರಿಟ್' (ಆತ್ಮ) ಎಂಬ ಪದದ ಕಟ್ಟುನಿಟ್ಟಾದ ಅರ್ಥವೇನೆಂದು ಪರೀಕ್ಷಿಸುವಾಗ, ನಂತರದಲ್ಲಿ, ದೇವರವಾಕ್ಯಗಳಲ್ಲಿ ಅದರ ಉಪಯೋಗದ ವಿವಿಧ ರೀತಿಗಳನ್ನು ಪರೀಕ್ಷಿಸುವಾಗ ಕಂಡುಬರುತ್ತದೆ.

*(1)* ಹಳೆಯ ಒಡಂಬಡಿಕೆಯಲ್ಲಿ ಕಂಡುಬರುವ 'ಸ್ಪಿರಿಟ್'(ಆತ್ಮ) ಎಂಬ ಪದವು ಹಿಬ್ರೂ ಬಾಷೆಯ ruach ಎಂಬುದರ ಭಾಷಾಂತರವಾಗಿದೆ. ಇದರ ಪ್ರಾಥಮಿಕ ಮಹತ್ವ ಅಥವಾ ಮೂಲ ಅರ್ಥ Wind (ಗಾಳಿ) ಆಗಿದೆ. ಹೊಸ ಒಡಂಬಡಿಕೆಯಲ್ಲಿ ಕಂಡು ಬರುವ 'ಸ್ಪಿರಿಟ್'(ಆತ್ಮ) ಎಂಬ ಪದವು ಗ್ರೀಕ್ ಪದವಾದ Pneuma ಎಂಬುವದರಿಂದ ಬಂದುದು. ಇದರ ಪ್ರಾಥಮಿಕ ಮಹತ್ವ ಅಥವಾ ಮೂಲ ಅರ್ಥವೂ ಸಹಾ Wind (ಗಾಳಿ) ಆಗಿದೆ. ಆದರೆ ನಾವು 'ಪವಿತ್ರಾತ್ಮ'ವನ್ನು 'ಪವಿತ್ರ ಗಾಳಿ' ಎಂಬುದಾಗಿ ಸಾಬೀತು ಪಡಿಸಲು ಪ್ರಯತ್ನಿಸುತ್ತಿದ್ದೇವೆಂದು ಯಾರೊಬ್ಬರೂ ಅವಸರದಲ್ಲಿ ತೀರ್ಮಾನಿಸಕೂಡದು. ಈ ವಿಷಯವು ನಮ್ಮ ಆಲೋಚನೆಗೆ ಬಹಳ ದೂರವಾಗಿದೆ. ಆದರೆ ನಾವು ಈ ಅಸ್ಪಷ್ಟವಾದ ವಿಚಾರವನ್ನು ವಿಧ್ಯಾವಂತರು, ಅವಿಧ್ಯಾವಂಥರು ಇವರಿಬ್ಬರಿಗೂ ಸಹಾಯವಾಗುವ ರೀತಿಯಲ್ಲಿ ಪ್ರಸ್ತುತಿಪಡಿಸಲು ಪ್ರಯತ್ನಿಸುತ್ತಿದ್ದೇವೆ. ಆದುದರಿಂದ ನಾವು ಈ ಪದಗಳ ಮೂಲ ಅರ್ಥವನ್ನು ಅಂಗೀಕರಿಸುವ ಮೂಲಕ ಪ್ರಾರಂಭಿಸುತ್ತೇವೆ ಮತ್ತು ಯಾಕೆ ಮತ್ತು ಹೇಗೆ ಈ ಸಂಧರ್ಭದಲ್ಲಿ ಈ ಪದದ ಉಪಯೋಗವಾಯಿತೆಂದು ನಿಶ್ಚಯಪಡಿಸಿಕೊಳ್ಳಲಿದ್ದೇವೆ.

'ಗಾಳಿ'ಯು ಅದೃಶ್ಯವಾದುದು, ಶಕ್ತಿಯುಳ್ಳದ್ದೂ ಆಗಿರುವುದರಿಂದ ruach ಮತ್ತು pneuma ಎಂಬ ಈ

ಪದಗಳು ಕ್ರಮೇಣವಾಗಿ ಹೆಚ್ಚು ವಿಸ್ತಾರ ಅರ್ಥಗಳನ್ನು ನೀಡುವವುಗಳಾಗಿವೆ ಮತ್ತು ಯಾವುದೇ ಒಳ್ಳೆಯ ಅಥವಾ ಕೆಟ್ಟ ಅದೃಶ್ಯ ಶಕ್ತಿ, ಪ್ರಭಾವಗಳನ್ನು ಪ್ರತಿನಿಧಿಸುವವುಗಳಾಗಿವೆ. ದೈವಿಕ ಶಕ್ತಿಯು ಮಾನವನ ದೃಷ್ಟಿಗೆ ಮಿಗಿಲಾದ ವಿವಿಧ ವಾಹಿನಿಗಳ ಮೂಲಕ ಮತ್ತು ಪಾರುಪತ್ಯಗಳ ಮೂಲಕ ವ್ಯಕ್ತವಾಗುವುದರಿಂದ 'ಸ್ಪಿರಿಟ್' (ಆತ್ಮ) ಎಂಬ ಈ ಪದವು ಕರ್ತನ ಎಲ್ಲಾ ವ್ಯವಹಾರಗಳಿಗೂ ಅನ್ವಯಿಸೋಣವಾಯಿತು. ಸ್ವಾಭಾವಿಕವಾಗಿ ಸಹಾ ಇದು ಅದೃಶ್ಯವಾದ ಮಾನವ ಪ್ರಭಾವಗಳಲ್ಲಿಯೂ ಸಾಮಾನ್ಯವಾಗಿ ಉಪಯೋಗಕ್ಕೆ ಬಂತು. ಉದಾಹರಣೆಗೆ, ಮಾನವರ ಜೀವನ ಶಕ್ತಿಯಾದ 'ಜೀವ ಶ್ವಾಸ'. ಇದು ಅದೃಶ್ಯವಾದುದು. ಮತ್ತು ಇದಕ್ಕೆ 'ಜೀವಾತ್ಮ' ಅಥವಾ 'ಜೀವಶ್ವಾಸ' ಎಂದು ಹೆಸರಿಸಲಾಗಿದೆ. ಇದನ್ನು ಮನಸ್ಸಿನ ಶಕ್ತಿಗೂ ಪ್ರಯೋಗಿಸಲಾಗುತ್ತದೆ. 'ಜೀವ' ಎಂಬುದೇ ಒಂದು ಶಕ್ತಿಯಾಗಿದ್ದು ಅದು ಅದೃಶ್ಯವಾದುದಾಗಿದೆ. ಆದುದರಿಂದ ಅದನ್ನು ಸಹಾ ಪುರಾತನ ಕಾಲದವರು 'ಆತ್ಮ' ಎಂಬುದಾಗಿ ಕರೆಯತೊಡಗಿದರು. ಇಬ್ರಿಯ ಪದವಾದ ruach ಮತ್ತು ಗ್ರೀಕ್ ಪದ pneuma ಎಂಬುದರ ವಿವಿಧ ಉಪಯೋಗಗಳ ಕೆಳಗಣ ಕೆಲವೊಂದು ಉದಾಹರಣೆಗಳನ್ನು ಸಹಾಯಕವಾಗಿ ನೀಡಲಾಗಿವೆ :–

Ruach ಎಂಬ ಪದವನ್ನು ಹಳೆ ಒಡಂಬಡಿಕೆಯಲ್ಲಿ 'blast' (ಸ್ಫೋಟ/ಬಿರುಗಾಳಿ) ಎಂಬುದಾಗಿ 4 ಬಾರಿ, 'breath' (ಪ್ರಾಣ/ಉಸಿರು) ಎಂಬುದಾಗಿ 28 ಬಾರಿ, 'mind' (ಮನಸ್ಸು/ಚಿತ್ತ) ಎಂಬುದಾಗಿ 6 ಬಾರಿ, 'smell' (ವಾಸನೆ) ಎಂಬುದಾಗಿ 8 ಬಾರಿ, 'wind' and 'windy' (ಗಾಳಿ/ಬಿರುಗಾಳಿ) ಎಂಬುದಾಗಿ 91 ಬಾರಿ ತರ್ಜುಮೆಗೊಳಿಸಲಾಗಿದೆ. ಈ ಎಲ್ಲಾ ಸಂದರ್ಭ ಗಳಲ್ಲಿಯೂ ಇದರ ಉಪಯೋಗದ ಉದ್ದೇಶ ಇದು **"ಅದೃಶವಾದ ಶಕ್ತಿ ಅಥವಾ ಪ್ರಭಾವ"** ವನ್ನು ಸೂಚಿಸುವ ಕಾರಣ. ಇದರ ಕೆಲವೊಂದು ನಮೂನೆಗಳು ಇಂತಿವೆ :–

"With blast of thy nostrils the waters were gathered together"(Exo 15:8)

ನೀನು ಸಿಟ್ಟಿನಿಂದ ಮುಸುಗೆರೆದಾಗ ಸಮುದ್ರದ ನೀರು ಒಡ್ಡಿನಂತಾಯಿತು.

"I destroy ..... All flesh wherein is the breath of life from under heaven" (Gen 6:17;7:15)

ಆಕಾಶದ ಕೆಳಗಿನಿಂದ ಸಕಲ ಪ್ರಾಣಿಗಳನ್ನು ಅಳಿಸಿ ಬಿಸುವೆನು.

"In whose hand is the …. breath of all mankind" (Job 12:10)

ಸಮಸ್ತ ಮನುಷ್ಯರ ಆತ್ಮಗಳೂ ಆತನ ಕೈಯಲ್ಲಿರುವವು.

"They have all one breath; so that a man hath no pre-eminence" (Eccl 3:19)

ಎಲ್ಲಕ್ಕೂ ಪ್ರಾಣ ಒಂದೇ; ಮನುಷ್ಯನು ಪಶುವಿಗಿಂತ ಶ್ರೇಷ್ಠನಲ್ಲ.

"Which was a grief of mind unto Issac" (Gen 26:35)

ಇಸಾಕನಿಗೂ ..... ಮನೋವ್ಯಥೆಯುಂಟಾಯಿತು.

"Jehova smelleth a sweet savor" (Gen 8:21)

ಅದರ ಸುವಾಸನೆಯು ಯೆಹೋವನ ಗಮನಿಸಲು.

"Noses have they but they smell not" (Psa 115:6)

ಮಾಗಿದ್ದರೂ ಮೂಸುವುದಿಲ್ಲ.

"God made a wind to pass over the earth" (Gen 8:1)

ಭೂಲೋಕದ ಮೇಲೆ ಗಾಳಿ ಬೀಸುವಂತೆ ಮಾಡಲಾಗಿ.

"Thou didst blow with thy wind" (Exod 15:10)

ನೀನು ಉಸುರುಗಾಳಿಯಿಂದ ಊದಲು.

"Stormy wind fulfilling his word" (Psa 148:8)

ಆತನ ಅಪ್ಪಣೆಯನ್ನು ನೆರವೇರಿಸುವ ಬಿರುಗಾಳಿಯೂ.

"The trees of the wood are moved with the wind" (Isa 7:2)

ಗಾಳಿಯಿಂದ ವನವೃಕ್ಷಗಳು ಅಲ್ಲಾಡುವಂತೆ ನಡುಗಿದವು.

ಹೊಸ ಒಡಂಬಡಿಕೆಯಲ್ಲಿ 'Pneuma' ಎಂಬ ಗ್ರೀಕ್ ಪದವನ್ನು 'Ghost', 'Spirit'ಗಳಲ್ಲದೆ 'Life' 'Spiritual' ಮತ್ತು 'Wind' ಮುಂತಾಗಿ ಈ ಕೆಳಗಣ ವಾಕ್ಯಗಳಲ್ಲಿ ಉಪಯೋಗಿಸಲಾಗಿದೆ :

"To give life to the image of the beast" (Rev 13:15)

ಆ ಮೃಗದ ವಿಗ್ರಹಕ್ಕೆ ಜೀವ ಕೊಡುವ ಸಾಮರ್ಥ್ಯವು ಇದಕ್ಕೆ ಕೊಡಲ್ಪಟ್ಟನು.

" Forasmuch as he are zealous of the spiritual gifts" (1 Cor 14:12)

ಆತ್ಮಪ್ರೇರಿತವಾದ ನುಡಿಗಳನ್ನಾಡುವುದಕ್ಕೆ ಅಪೇಕ್ಷಿಸುವವರಾಗಿರುವುದರಿಂದ

" The wind bloweth where it listeneth and yet ye hear the sound thereof" (John 3:8)

ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ.

ಈ ವಿವಿಧ ಭಾಷಾಂತರಗಳೆಲ್ಲವುಗಳೂ ತ್ರೈಯೇಕತ್ವವಾದಿಗಳಿಂದ ಮಾಡಲ್ಪಟ್ಟುದು ಎಂಬುದನ್ನು ನಾವು ಮರೆಯಬಾರದು. ನಾವು ಈ ಭಾಷಾಂತರಗಳನ್ನು ವಿರೋಧಿಸುವುದಿಲ್ಲ – ಅವುಗಳು ಸರಿಯಾಗಿಯೇ ಅವೆ; ಆದರೆ 'Ruach' ಮತ್ತು 'Pneuma' ಎಂಬ ಪದಗಳು 'Spirit' ಎಂಬುದಾಗಿ ಭಾಷಾಂತರಗೊಂಡಿರುವುದು ಯಾವುದೇ ವ್ಯಕ್ತಿತ್ವವನ್ನು ಸೂಚಿಸುವುದಿಲ್ಲ ಅವುಗಳು ಅದೃಶ್ಯವಾದ ಶಕ್ತಿ ಮತ್ತು ಪ್ರಭಾವಗಳನ್ನು ಸೂಚಿಸುವುದನ್ನು ಸಾಬೀತುಪಡಿಸುವುದಾಗಿವೆ ಎಂಬುದನ್ನು ನಾವು ಅವರ ಗಮನಕ್ಕ ತರಬಯಸುತ್ತೇವೆ.

## "ದೇವರು ಆತ್ಮಸ್ವರೂಪಿಯಾಗಿದ್ದಾನೆ"
## "God is Spirit"

(2) **"ದೇವರು ಆತ್ಮಸ್ವರೂಪಿ"** ಎಂದೆನ್ನುವಾಗ ಆತನು ಶಕ್ತಿಶಾಲಿ ಆದರೆ ಅದೃಶ್ಯನು ಎಂದು ಹೇಳಿದ ಹಾಗಾಯಿತು. ಅದರಂತೆ, ದೇವದೂತರುಗಳನ್ನು 'ಸ್ಪಿರಿಟ್ಸ್' (ಆತ್ಮಗಳು) ಎಂದು ಕರೆಯುತ್ತಾರೆ. ಯಾಕೆಂದರೆ, ಅವುಗಳು ಸಹಾ ತಮ್ಮ ನೈಜ ಸ್ಥಿತಿಯಲ್ಲಿ ಮಾನವರಿಗೆ ಅದೃಶ್ಯವಾಗಿವೆ. ಅವುಗಳು ಅದ್ಬುತ ಶಕ್ತಿಯ ಮೂಲಕ ಒಮ್ಮೊಮ್ಮೆ ಪ್ರತ್ಯಕ್ಷವಾಗುವುದೂ ಉಂಟು. ನಮ್ಮ ಕರ್ತನಾದ ಯೇಸುವು ಮಾನವನಾಗಿದ್ದಾಗ, ಒಬ್ಬ ಆತ್ಮ ಸ್ವರೂಪಿಯಾಗಿರಲಿಲ್ಲ. ಆದರೆ ಆತನು ಉನ್ನತ ಸ್ಥಿತಿಗೇರಿದಾಗಿನಿಂದ **"ಈಗ ಕರ್ತನು ಆತ್ಮಸ್ವರೂಪಿ ಯಾಗಿದ್ದಾನೆ"** ಎಂದು ಬರೆಯಲ್ಪಟ್ಟಿದೆ. – ಈಗ ಆತನು ಅದೃಶ್ಯನೂ, ಶಕ್ತಿಶಾಲಿಯೂ ಆಗಿದ್ದಾನೆ. ಈ ಸುವಾರ್ತಾ ಯುಗದ ಸಭೆಗೆ ಅದರ ಕರ್ತನ ರೀತಿಯಲ್ಲಿನ ಸ್ವಭಾವದ ಬದಲಾವಣೆಯೊಂದನ್ನು ವಾಗ್ದಾನಮಾಡಲಾಗಿದೆ. **"ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು"** (1 ಯೋಹಾನ 3:2) ಎಂದು ಬರೆದದೆ. ಸಭೆಯು ಆತ್ಮೀಕವಾಗಿದೆಯೆಂದು ಹೇಳಲಾಗುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಅದು ತನ್ನ ಕರ್ತನೊಂದಿಗೆ ಸಾಮರಸ್ಯದಲ್ಲಿರುತ್ತದೆ ಮತ್ತು ಆತ್ಮನಿಂದ ನೂತನ ಸ್ವಭಾವವನ್ನು ಪಡಕೊಳ್ಳುತ್ತದೆ ಅದುವೇ **ಆತ್ಮಿಕ ಸ್ವಭಾವ.** ಆತ್ಮನಿಂದ ಪಡಕೊಂಡದ್ದು ಪುನರುತ್ಥಾನದಲ್ಲಿ ಆತ್ಮನಿಂದ ಹುಟ್ಟಿದ್ದಾಗಿರುತ್ತದೆ ಎಂಬ ಭರವಸೆಯನ್ನು ಹೊಂದಿಕೊಳ್ಳುತ್ತದೆ. 'ಆತ್ಮ' ಎಂಬ ಪದದ ಈ ಉಪಯೋಗವನ್ನು ಗ್ರಹಿಸಿಕೊಳ್ಳಬಹುದಾಗಿದೆ, ಇದು ವ್ಯಕ್ತಿತ್ವಕ್ಕೆ – ಆತ್ಮೀಕ ಸಂಗತಿಗಳಿಗೆ ಸಂಬಂಧಿಸಿದೆ – 2 ಕೊರಿಂಥ 3:17, ಯೋಹಾನ 3:6.

(2) **"ಆತ್ಮ"** ಎಂಬ ಪದದ ಮತ್ತೊಂದು ಉಪಯೋಗವೆಂದರೆ ಅದು 'ಉತ್ಪಾಧನಾ ಶಕ್ತಿ' ಅಥವಾ 'ಫಲದಾಯಕತ್ವ'ಎಂಬ ಅರ್ಥದಲ್ಲಿ. ಆದಿ 1:2 ರಲ್ಲಿ ಹೇಳುವಂತೆ **"ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು"** – ಹಾಗಂದರೆ, ದೇವರ ಶಕ್ತಿಯು, ಆತನ ತೇಜಸ್ಸಿನ ವಾಹನವು ನೀರನ್ನು ಫಲವತ್ತಾಗಿಸಿತು ಅಥವಾ ಅವುಗಳನ್ನು ಫಲದಾಯಕಗೊಳಿಸಿತು ಅಥವಾ ಫಲಸಮೃದ್ಧಿಗೊಳಿಸಿತು ಎಂಬರ್ಥ. ಅದೇ ರೀತಿಯಲ್ಲಿ **"**ಪುರಾತನ ಪವಿತ್ರ ಜನರು ಪವಿತ್ರವಾದ ಪ್ರಭಾವ ಮತ್ತು ದೇವ ಶಕ್ತಿಯುಳ್ಳ ದೇವರಾತ್ಮನಿಂದ ನಡೆಸಲ್ಪಟ್ಟವರಾಗಿ ಮಾತನಾಡಿದರು ಮತ್ತು ಬರೆದರು**"**. ಅವರ ಮನಸ್ಸುಗಳು ಫಲವತ್ತಾಗಿ ದೇವರ ಆಲೋಚನೆಗಳನ್ನು ಅವರಲ್ಲಿ ತಂದು ಅವುಗಳನ್ನು ದೇವರು ತಾನೇ ವ್ಯಕ್ತಪಡಿಸಿದ ರೀತಿಯಲ್ಲಿ ಹೇಳಲು ಮತ್ತು ಬರೆಯಲು ಅವರಿಗೆ ಸಾಧ್ಯವಾಯಿತು – **"ಯಾಕೆಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯಚಿತ್ತದಿಂದ ಉಂಟಾದುದಲ್ಲ; ಮನುಷ್ಯರು ಪವಿತ್ರಾತ್ಮಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತನಾಡಿದರು"** (2 ಪೇತ್ರ 1:21). ಅದೇ ರೀತಿಯಲ್ಲಿ ದೇವದರ್ಶನ ಗುಡಾರದ ಉಪಕರಣಗಳನ್ನು ಸಿದ್ಧಪಡಿಸಲು ಮೋಶೆಯು ಆರಿಸಿಕೊಂಡ ನಿಪುಣ ಕೆಲಸಗಾರರು ದೇವರ ಪ್ರಭಾವಕ್ಕೆ ಒಳಗಾಗಿ ಹೇಗೆ ಆಳವಾದ ನೀರು ನೈತಿಕವಾಗಿ ಬಾಧಿತವಾಗಿರುವುದೋ ಅಂತೆಯೇ ತಮ್ಮ ನೈತಿಕ ಜ್ಞಾನಕ್ಕೆ ಯಾವುದೇ ಬಾಧೆಯಾಗದಂತೆ ತಮ್ಮ ಸ್ವಾಭಾವಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡರು. ಆ ಕಾರಣ ಈ ರೀತಿಯಾಗಿ ಬರೆಯಲ್ಪಟ್ಟಿದೆ :–

**"ಮತ್ತು ಮೋಶೆಯು ಇಸ್ರಾಯೇಲ್ಯರಿಗೆ ಹೀಗಂದನು – ವಿಚಿತ್ರವಾಗಿ ನಯವಾದ ಕೆಲಸಗಳನ್ನು ಕಲ್ಪಿಸುವುದಕ್ಕೂ ಚಿನ್ನ ಬೆಳ್ಳಿ ತಾಮ್ರಗಳಿಂದ ಕೆಲಸ ನಡೆಸುವುದಕ್ಕೂ ರತ್ನಗಳನ್ನು ಕೆತ್ತುವುದಕ್ಕೂ ಮರದಲ್ಲಿ ವಿಚಿತ್ರವಾಗಿ ಕೆತ್ತನೇ ಕೆಲಸವನ್ನು ಮಾಡುವುದಕ್ಕೂ ಕರ್ತನು ಯೆಹೂದಕುಲದವನಾದ ಹೂರನ ಮೊಮ್ಮಗನೂ ಊರಿಯ ಮಗನೂ ಆಗಿರುವ ಬೆಚಲೇಲನೆಂಬುವವನನ್ನು ಗೊತ್ತಾಗಿ ನೇಮಿಸಿ ಅವನಿಗೆ ದಿವ್ಯಾತ್ಮನನ್ನು ಕೊಟ್ಟು ಬೇಕಾದ ಜ್ಞಾನ ವಿದ್ಯಾ ವಿವೇಕಗಳನ್ನೂ ಸಕಲ ಶಿಲ್ಪಶಾಸ್ತ್ರ ಜ್ಞಾನವನ್ನೂ ಅನುಗ್ರಹಿಸಿದ್ದಾನೆ. ಅದಲ್ಲದೆ ಮತ್ತೊಬ್ಬರಿಗೆ ಕಲಿಸಿಕೊಡುವುದಕ್ಕೆ ಸಹಾ ಅವನಿಗೂ ದಾನ್**

**ಕುಲದ ಅಹೀಸಾಮಾಕನ ಮಗನಾದ ಒಹೊಲೀಯಾಬನಿಗೂ ವರಕೊಟ್ಟಿದ್ದಾನೆ. ಶಿಲ್ಪಿಗಳು ಚಮತ್ಕಾರವಾದ ಕೆಲಸಗಳನ್ನು ಕಲ್ಪಿಸುವರು, ನೀಲಿ ಧೂಮ್ರ ರಕ್ತವರ್ಣದ ದಾರದಿಂದಲೂ ನಾರು ಬಟ್ಟೆಯಿಂದಲೂ ಬೂಟೆದಾರಿ ಕೆಲಸಮಾಡುವವರು, ನೇಯುವವರು ಅಂತೂ ಎಲ್ಲಾ ಕಸುಬುದಾರರು ನಡಿಸುವ ಕೆಲಸಗಳನ್ನು ಕಲ್ಪಿಸುವುದಕ್ಕೂ ಮಾಡುವುದಕ್ಕೂ ಯೆಹೋವನಿಗೆ ಅವರಿಗೆ ಜ್ಞಾನವನ್ನು ಪರಿಪೂರ್ಣವಾಗಿ ಅನುಗ್ರಹಿಸಿದ್ದಾನೆ"** – ವಿಮೋ. 35:30–35; 28:3; 31:3,4.

ನಾವು ತಿಳಿದುಕೊಂಡಿರುವಂತೆ, ಯೆಹೋವ ದೇವರು ಮೋಶೆ ಮತ್ತು ಇಸ್ರಾಯೇಲ್ಯ ಹಿರಿಯರ ಮೇಲೆ ತನ್ನ ಆತ್ಮವನ್ನು ಸುರಿಸಿ ಅವರಿಗೆ ಇಸ್ರಾಯೇಲ್ಯರ ನ್ಯಾಯ ನಿರ್ಣಯಿಸುವ, ಮತ್ತು ಅವರಲ್ಲಿ ಕ್ರಮವನ್ನು ಕಾಪಾಡುವ ವಿಶೇಷ ಶಕ್ತಿಯನ್ನು ಅನುಗ್ರಹಿಸಿದನು (ಅರಣ್ಯ. 11:17–26). ನಂತರದಲ್ಲಿ ಅದೇ ರೀತಿಯಲ್ಲಿ ದೇವರಾತ್ಮನ ಶಕ್ತಿಯು ಇಸ್ರಾಯೇಲ್ಯರ ರಾಜರುಗಳ ಮೇಲೆಯೂ ಅವರುಗಳು ದೇವರಿಗೆ ನಿಷ್ಠೆಯುಳ್ಳವರಾಗಿರುವ ತನಕ ಇತ್ತು. ಉದಾಹರಣೆಯಾಗಿ ಸೌಲನ ಪ್ರಕರಣವನ್ನು ಗಮನಿಸಿರಿ. – **"ಆಗ ಕರ್ತನ ಆತ್ಮವು ಅವನ ಮೇಲೆ ಬಂದಿತು"** (1 ಸಮು. 11:6). ಅದರೆ, ಜ್ಞಾನ ಮತ್ತು ನೀತಿನಿರ್ಣಯದ ಈ ಆತ್ಮವು ಸೌಲನಿಂದ ಬಿಟ್ಟುಹೋಗಿ ದಾವೀದನಲ್ಲಿ ನೆಲಸಿತು – **"ಕೂಡಲೇ ಕರ್ತನ ಆತ್ಮವು ದಾವೀದನ ಮೇಲೆ ಬಂದು ನೆಲೆಗೊಂಡಿತು... ಕರ್ತನ ಆತ್ಮವು ಸೌಲನನ್ನು ಬಿಟ್ಟುಹೋಯಿತು"**. ಆನಂತರ ದಾವೀದನ ವಿಚಾರಶೀಲತೆಯನ್ನು ವಿಶೇಷವಾಗಿ ಕಾಣಬಹುದು. (1 ಸಮು. 16:13–14). ನಾವು ನಂತರದಲ್ಲಿ ಜ್ಞಾನ ಮತ್ತು ಧೈರ್ಯದಾಯಕ, ಭರವಸೆಯ ಆತ್ಮನ ಬದಲಾಗಿ ದೇವರ ಒಬ್ಬ ಸೇವಕನಾಗಿದ್ದ ಸೌಲನು ದುರಾತ್ಮ ಪೀಡಿತನಾದನು. ಆತನು ಇನ್ನು ಮುಂದೆ ಸಿಂಹಾಸನದ ಮೇಲೆ ದೇವರ ಪ್ರತಿನಿಧಿಯಾಗಿ ಮಾನ್ಯಹೊಂದಲಿಲ್ಲ ಎಂದು ಸೌಲನು ತಿಳಿದಾಗ ಆತನು ಅಕ್ಷರಶಃ ದುಃಖದ ಆತ್ಮ, ನಿರಾಕರಿಸಲ್ಪಟ್ಟವನಾಗಿ, ಭರವಸೆಯನ್ನು ಕಳೆದುಕೊಂಡನು. ತಿರಸ್ಕಾರದ ಈ ಆತ್ಮವು ಅನೇಕ ಸಂಕಟಗಳಿಗೆ ಎಡೆಮಾಡಿಕೊಟ್ಟಿತು. ಅದು ದೇವರಿಂದ ಉಂಟಾಗಿ, ಆತನ ನಡೆಸುವಿಕೆ ಸೌಲನನ್ನು ಇಸ್ರಾಯೇಲ್ಯರ ಸಂಗತಿಗಳಿಂದ ಪದ್ಯಚುತಿಗೊಳಿಸಿತು ಎಂದು ಹೇಳಲಾಗಿದೆ.

## ಪವಿತ್ರಾತ್ಮನನ್ನು ಇನ್ನೂ ನೀಡಲಾಗಿಲ್ಲ
## "The Holy Spirit was Not Yet Given"

ಕರ್ತನಾದ ಯೇಸುವಿನ ಪ್ರಥಮ ಆಗಮನ ಪೂರ್ವದಲ್ಲಿ ಪವಿತ್ರಾತ್ಮನು ಪ್ರಕಟಗೊಂಡಿರಲಿಲ್ಲ. ಇದು ಕರ್ತನ ಆತ್ಮನು ಕ್ರಿಸ್ತ ಯೇಸುವಿನಲ್ಲಿ ಆತನ ದೀಕ್ಷಾಸ್ನಾನದ ಸಮಯದಿಂದ ಆತನು ಶಿಲುಬೆಗೆ ಹಾಕಲ್ಪಡುವವರೆಗೂ ಪ್ರಕಟವಾಯಿತು ಹಾಗೂ ಕ್ರಿಸ್ತನ ಸಭೆಯ ಮೇಲೆ ಪಂಚಾಶತ್ತಮ ದಿನದಂದು ಇಳಿದು ಬಂದು ಸುವಾರ್ತಾ ಯುಗದ ಮುಕ್ತಾಯದ ದಿನಗಳಾದ ಇಂದಿನವರೆಗೂ ಕಾರ್ಯಪ್ರವೃತ್ತಿಗೊಂಡಿತ್ತು. ಸಭೆಯ ಅವಧಿ ಪ್ರಥಮ ಪುನರುತ್ಥಾನದಲ್ಲಿ ಮುಕ್ತಾಯವಾಗುವವರೆಗೂ ಇರುತ್ತದೆ. ಇದಕ್ಕೆ ಸಾಮರಸ್ಯವಾಗಿ ನಾವು **"ಆತನು (ಕ್ರಿಸ್ತನು) ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮ ವರವು ಇನ್ನೂ ಬಂದಿದ್ದಿಲ್ಲ"** (ಯೋಹಾನ 7:39) ಎಂದು ಓದುತ್ತೇವೆ.

ಈ ಸುವಾರ್ತಾ ಯುಗದಲ್ಲಿ ಕರ್ತನ ಆತ್ಮನ ಕಾರ್ಯಾಚರಣೆಯು ಹಿಂದಿನ ಸಮಯದಲ್ಲಿದ್ದ ಅದರ ಕಾರ್ಯಚರಣೆಗೆ ಬಲು ಭಿನ್ನವಾಗಿದೆ ; ಈ ಭಿನ್ನತೆಯನ್ನು 'ದತ್ತುಸ್ವೀಕಾರದ ಆತ್ಮ' 'ಕುಮಾರತ್ವದ ಆತ್ಮ' 'ಸತ್ಯದಆತ್ಮ' ಮುಂತಾದ ಇದರ ಸಂಬಂಧಿ ಪದಗಳಲ್ಲಿ ಕಂಡುಕೊಳ್ಳಬಹುದು. ನಾವೀಗಾಗಲೇ ಕಂಡು ಕೊಂಡಂತೆ, ಆದಾಮನ ಪತನದ ನಂತರ ಆತನ ಯಾವುದೇ ಸಂತಾನವನ್ನು ಕ್ರಿಸ್ತನ ಆಗಮನದ ಮುಂಚೆ ದೇವರ ಮಕ್ಕಳೆಂದು ಅಂಗೀಕರಿಸಲಿಲ್ಲ; ನಂಬಿಗಸ್ತರ ತಂದೆ ಎನಿಸಿಕೊಂಡ ಅಬ್ರಹಾಮನಿಗೆ ನೀಡಲ್ಪಟ್ಟ ಅತ್ಯಂತ ಶ್ರೇಷ್ಟವಾದ ಬಿರುದು ಎಂದರೆ 'ದೇವರ ಸ್ನೇಹಿತ' ಎಂಬುದು. ಆದರೆ ಅಪೋಸ್ತಲನಾದ ಯೋಹಾನನು ವಿವರಿಸುವಂತೆ. ವಾಕ್ಯವೆಂಬಾತನು (ಲೋಗೋಸ್) ಮಾಂಸ ದೇಹಧಾರಿಯಾದಾಗ, ಆತನು ತನ್ನನ್ನು ತನ್ನ ಸ್ವಂತ ಜನರಿಗೆ, ಇಸ್ರಾಯೇಲ್ಯರಿಗೆ ಮತ್ತು ತನ್ನನ್ನು ಸ್ವೀಕರಿಸಿದ (ಆಗ ಮತ್ತು ಅಂದಿನಿಂದ) ಇನ್ನೂ ಅನೇಕರಿಗೆ ಪ್ರಸ್ತುತಿಪಡಿಸಿಕೊಂಡವನಾಗಿ 'ಆತನ ಮಕ್ಕಳಾಗುವ ಅಧಿಕಾರವನ್ನು (ಸವಲತ್ತು ಮತ್ತು ಸದವಕಾಶಗಳನ್ನು) ಕೊಟ್ಟನು'.– **"ಯಾರಾರು ಆತನನ್ನು (ಯೇಸುವನ್ನು) ಅಂಗೀಕರಿಸಿದರೋ, ಅಂದರೆ ಆತನ ಮೇಲೆ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು"** (ಯೋಹಾನ 1:12) ಇವರೆಲ್ಲರೂ **"ದೇವರಿಂದಲೇ ಹುಟ್ಟಿದವರು"** (13ನೇ ವಚನ) ಅಥವಾ 'ಪಡಕೊಂಡವರು' – 'ಆತ್ಮನಿಂದ ಪಡಕೊಂಡವರು' ಎಂದು ಆತನು ಪ್ರಕಟಿಸುತ್ತಾನೆ. **"ದೇಹದಿಂದ ಹುಟ್ಟಿದ್ದು ದೇಹವೇ, ಆತ್ಮನಿಂದ ಹುಟ್ಟಿದ್ದು ಆತ್ಮವೇ"** – ಯೋಹಾನ 3:6.

ವಾಕ್ಯದ ಈ ಅರ್ಥದಲ್ಲಿ ಪವಿತ್ರಾತ್ಮನು ದೇವರ ಪುತ್ರರ ಮನೆಯವರಿಗೆ ಮಾತ್ರವೇ ನಿಶ್ಚಿತ. ಆತನ ಪ್ರಿಯ ಮಗನು ಮಾಂಸದೇಹಧಾರಿಯಾಗಿ ಪ್ರಕಟಗೊಂಡು ಈ ಲೋಕವನ್ನು ವಿಮೋಚಿಸಿ, ಆತನನ್ನು ಸ್ವೀಕರಿಸಿದವರಿಗೆ ಆತನ ಪುತ್ರರಾಗುವ ಅವಕಾಶವನ್ನು ನೀಡುವವರೆಗೆ ಈ ಮಕ್ಕಳ ಮನೆಯು ಅಪರಿಚಿತವಾಗಿತ್ತು – **"ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ**

**ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ, ಶಾಸ್ತ್ರಾಧೀನನಾಗಿಯೂ ಬಂದನು"** (ಗಲಾತ್ಯ 4:4–5). **"ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು"** (ಎಫೆಸ 1:5–6). ಅಪೋಸ್ತಲನು ನಮಗೆ ತಿಳಿಸುವಂತೆ ಈ ಪುತ್ರತ್ವವು ಪ್ರಾಥಮಿಕವಾಗಿ ಇಸ್ರಾಯೇಲ್ಯರ ಭಾಧ್ಯತೆ ಯಾಗಿತ್ತು. ಆದರೆ ಇಸ್ರಾಯೇಲ್ಯರಲ್ಲಿ ಈ ಪಡಕೊಳ್ಳುವಿಕೆಗೆ ಪೂರ್ವನಿರ್ಧಾರಿತ ಸಂಖ್ಯೆಯನ್ನು ಪೂರೈಸುವಷ್ಟು ಜನರಿರಲಿಲ್ಲ. ಆದುದರಿಂದ ಉಳಿದ ಇಸ್ರಾಯೇಲ್ಯರನ್ನು ಅಂಗೀಕರಿಸಿದ ನಂತರ **"ದೇವರು ಮೊದಲಲ್ಲಿ ಅನ್ಯಜರನ್ನು ಕಟಾಕ್ಷಿಸಿ ತನ್ನ ಹೆಸರಿಗಾಗಿ ಅವರೊಳಗಿಂದ ಒಂದು ಪ್ರಜೆಯನ್ನು ಆರಿಸಿಕೊಂಡನು"** ಅವರು ದೇವರ ಪುತ್ರರು, ಕ್ರಿಸ್ತನೊಡನೆ ಸಹಬಾಧ್ಯರು ಆಗಬೇಕೆಂಬುದಾಗಿ, ಇದು ಮುಂಚಿತವಾಗಿ ತಿಳಿದಿತ್ತು ಹಾಗೂ ಪ್ರವಾದಿಗಳಿಂದ ತಿಳಿಯಪಡಿಸಲಾಗಿದೆ – ರೋಮಾ. 9:4 ; 29–33, ಅ.ಕೃ 15:14.

ಆದರೆ, ದೇವರ ಶಕ್ತಿಯ, ಪ್ರಭಾವದ ಅಥವಾ ಆತ್ಮನ ಈ ಪ್ರಕಟನೆಯು ಯಾವರೀತಿಯಲ್ಲಿ ಈ ಸುವಾರ್ತಾಯುಗದಲ್ಲಿ ಇದರ ಹಿಂದಿನ ಪ್ರಕಟನೆಗಳಿಗಿಂತ ಭಿನ್ನವಾಗಿದೆ? ಅಪೋಸ್ತಲನಾದ ಪೇತ್ರನು ಈ ಪ್ರಶ್ನೆಗೆ ಉತ್ತರಿಸುತ್ತಾ ಪುರಾತನ ಪಿತೃಗಳು, ದೇವರಿಂದ ಬಹಳವಾಗಿ ಗೌರವಾನ್ವಿತರಾದವರೂ ಮತ್ತು ಆತನ ಪವಿತ್ರಾತ್ಮನಿಂದ ಪ್ರೇರಿತರಾದವರೂ ಆಗಿದ್ದು, ಅವರಿಗೆ ಅರ್ಥವಾಗದ ಸಂಗತಿಗಳನ್ನು ಬರೆದರೆಂಬ ಆಶ್ವಾಸನೆಯನ್ನು ನಮಗೆ ನೀಡುವವನಾಗಿದ್ದಾನೆ. ದೇವರು ಅವರಿಗೆ ಅರ್ಥ ಮಾಡಿಕೊಳ್ಳಲು ತಕ್ಕ ಸಮಯವಾಗಿರಲಿಲ್ಲದ ಸಂಗತಿಗಳನ್ನು ಬರೆಯುವುದಕ್ಕೆ ಅವರನ್ನು ತನ್ನ ಸೇವಕರುಗಳನ್ನಾಗಿ ಉಪಯೋಗಿಸಿ ಕೊಂಡನು. ಆದರೆ ತಕ್ಕ ಸಮಯದಲ್ಲಿ ದೇವರಾತ್ಮನಿಂದ ಪಡಕೊಂಡವರಾದ ಆತನ ಮನೆಯ ಮಕ್ಕಳಾದ ನಮಗೆ ಅದೇ ಪವಿತ್ರಾತ್ಮನ ಅಥವಾ ದೇವರ ಪವಿತ್ರ ಶಕ್ತಿಯ ಮೂಲಕ ಪ್ರೇರಣೆಯಿಂದ ಅವುಗಳು ಪ್ರಕಟವಾಯಿತು. ಈ ಹಿಂದೆ ಪವಿತ್ರಾತ್ಮನ ಕಾರ್ಯಾಚರಣೆಯು ಯಾಂತ್ರಿಕವಾಗಿತ್ತು; ಆದರೆ ನಮಗೆ ಅದರ ಕಾರ್ಯಾಚರಣೆಯು ವಿವರಾತ್ಮಕವಾಗಿದೆ ಮತ್ತು ಸಹಾನುಭೂತಿಯಿಂದ ಕೂಡಿದೆ. ಅಪೋಸ್ತಲರ ಮೂಲಕ ಮತ್ತು 'ಸಭೆಯಲ್ಲಿ ನೇಮಕಗೊಂಡ' ವಿಶೇಷ ಬೋಧಕರುಗಳ ಮೂಲಕ ದೇವರ ಯೋಜನೆಗಳನ್ನು ನಮಗೆ ಕಾಲಾನುಕಾಲಕ್ಕೆ ತಕ್ಕಂತೆ ವ್ಯಾಖ್ಯಾನಿಸುವುದಾಗಿದೆ. ಇದರ ಉದ್ದೇಶವು ದೇವರ ಪುತ್ರರ ಎಲ್ಲಾ ಸಂತರುಗಳೊಂದಿಗೆ ದೇವರ ಜ್ಞಾನದ ಉದ್ದ, ಅಗಲ, ಆಳಗಳನ್ನು ದೇವರ ಯೋಜನೆ ಮತ್ತು ಅವುಗಳ ಪ್ರಕಟನೆಯಲ್ಲಿ ಉದಾಹರಿಸಿರುವಂತೆಯೂ ಗ್ರಹಿಸಿಕೊಳ್ಳುವಂತೆಯೂ ಮಾಡುವುದು. ನಿಜವಾಗಿಯೂ ಅಪೋಸ್ತಲರ ಭಾಷೆಯಿಂದ ದೇವದೂತರುಗಳಿಗೆ ಸಹಾ (ಅವರುಗಳನ್ನು ಕೆಲವೊಮ್ಮೆ ಕರ್ತನು ಪವಿತ್ರಾತ್ಮನ ಮಧ್ಯಸ್ಥಿಕೆಯಲ್ಲಿ ಪ್ರವಾದಿಗಳೊಡನೆ ಸಂಪರ್ಕಿಸುವ ವಾಹಿನಿಗಳನ್ನಾಗಿ ಉಪಯೋಗಿಸಿಕೊಂಡಿದ್ದಾನೆ) ತಮ್ಮ ಸುದ್ದಿತಿಳಿಸೋಣದ ವಹಿವಾಟುಗಳನ್ನು ಅರ್ಥಮಾಡಿ ಕೊಳ್ಳುವ ಅನುಮತಿ ಅವರುಗಳಿಗೆ ಇರಲಿಲ್ಲ. ಪ್ರವಾದನೆಗಳನ್ನು ನಮಗಾಗಿ ಬರೆದ ಪ್ರವಾದಿಗಳು ಇದಕ್ಕಿಂತ ಹೆಚ್ಚಿನವರಾಗಿರಲಿಲ್ಲ. ಅಪೋಸ್ತಲನ ಈ ಮಾತುಗಳನ್ನು ಗಮನಿಸಿರಿ :–

**"ದೇವರು ನಿಮಗೆ ತೋರಿಸಿರುವ ಕೃಪೆಯನ್ನು ಕುರಿತು ಮುಂತಿಳಿಸಿದ ಪ್ರವಾದಿಗಳು ಈ ರಕ್ಷಣೆಯ ವಿಷಯದಲ್ಲಿ ಸೂಕ್ಷ್ಮವಾಗಿ ಪರಿಶೋಧನೆಮಾಡಿದರು. ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ ಆತನು ಯಾವ ಕಾಲವನ್ನು ಇಲ್ಲವೆ ಎಂಥ ಕಾಲವನ್ನು ಸೂಚಿಸುವನೆಂಬುದನ್ನು ಅವರು ಪರಿಶೋಧನೆ ಮಾಡಿದರು. ಈ ಸಂಗತಿಗಳನ್ನು ಮುಂತಿಳಿಸುವುದರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ ಸೇವೆ ಮಾಡುವವರಾಗಿದ್ದಾರೆಂಬುದು ಅವರಿಗೆ ಪ್ರಕಟವಾಯಿತು. ಅವರು ಮುಂದಾಗಿ ಹೇಳಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟ ಪವಿತ್ರಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿ ಮಾಡಲ್ಪಟ್ಟಿದೆ. ದೇವದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬ ಅಪೇಕ್ಷೆಯುಂಟು". "ಯಾಕೆಂದರೆ ಯಾವ ಪ್ರವಾದನೆಯು ಎಂದೂ ಮನುಷ್ಯನ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು"** – 1 ಪೇತ್ರ 1:10–12, 2 ಪೇತ್ರ 1:21.

## ಅದೇ ಆತ್ಮನ, ಅದೇ ಕರ್ತನ, ಅದೇ ದೇವರ ವರಗಳು

## Gifts of the Same Spirit, The Lord, The Same God

**"ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ದೇವರಾತ್ಮನು ಒಬ್ಬನೇ; ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು, ಕರ್ತನು ಒಬ್ಬನೇ; ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವ ಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ. ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ**

**ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ. ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನವಾಕ್ಯವು, ಒಬ್ಬನಿಗೆ ಆ ಆತ್ಮಕ್ಕೆ ಅನುಗುಣವಾಗಿ ವಿದ್ಯಾವಾಕ್ಯವು, ಒಬ್ಬನಿಗೆ ಆ ಆತ್ಮನಿಂದಲೇ ನಂಬಿಕೆಯು, ಒಬ್ಬನಿಗೆ ಆ ಒಬ್ಬ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿಮಾಡುವ ವರವು, ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು, ಒಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ಸತ್ಯಾ ಸತ್ಯಾತ್ಮಗಳನ್ನು ವಿವೇಚಿಸುವ ವರವು, ಒಬ್ಬನಿಗೆ ವಿವಿಧ ವಾಣಿಗಳನ್ನಾಡುವ ವರವು, ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ. ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ"** – 1 ಕೊರಿಂಥ 12: 4–11.

ಪವಿತಾತ್ಮನು ಸಭೆಗೆ ನೀಡುವ ಕೆಲವೊಂದು ವರಗಳು ಇಲ್ಲಿ ನಮೂದಿಸಲ್ಪಟ್ಟಿವೆ. ಆದರೆ ನಾವು ಸ್ವತಃ ಪವಿತ್ರಾತ್ಮನ ಮತ್ತು ಆತನ ಈ ವರಗಳ ಮತ್ತು ಆದಿ ಸಭೆಗೆ ಉಂಟಾದ ಪ್ರಕಟನೆಗಳ ವ್ಯತ್ಯಾಸಗಳನ್ನು ತಿಳಿದುಕೊಳ್ಳಬೇಕು. ಬೇರೆ ಬೇರೆ ವರಗಳಿರುವ ಕಾರಣ ಈ ವಿವಿಧ ವರಗಳು ಸಭೆಯ ವಿವಿಧ ಸದಸ್ಯರಲ್ಲಿ ಕಾರ್ಯಾಚರಣೆ ನಡೆಸುತ್ತಿದೆ ಎಂಬುದಾಗಿ ಇದನ್ನು ಅರ್ಥಮಾಡಿಕೊಳ್ಳಬಾರದು ಮತ್ತು ಇದರಿಂದ ಈ ವರಗಳನ್ನು ನೀಡುವಾತನು ಬೇರೆಯ ಕರ್ತ ಅಥವಾ ದೇವರು ಎಂದು ಸಹಾ ತಿಳಿಯಬಾರದು. ಎಲ್ಲವುಗಳೂ ಒಬ್ಬನೇ ದೇವರಾದ ಯೆಹೋವನ ಪ್ರತಿನಿಧಿಯಾದ ನಮ್ಮ ಒಬ್ಬನೇ ಕರ್ತನಿಂದ ಪವಿತ್ರವಾದ ರೀತಿಯಲ್ಲಿ ಎಲ್ಲರಿಗಾಗಿ ಸುರಿಸಲ್ಪಟ್ಟವುಗಳು ಎಂದು ಗುರುತಿಸಬೇಕು; ಮತ್ತು ಇದನ್ನು ಕಾರ್ಯನಿರ್ವಹಣೆಯ ಅಥವ ಕಾರ್ಯಾಚರಣೆಯ ವ್ಯತ್ಯಾಸಗಳು ಎಂಬುದಾಗಿ ವಿವರಿಸಬೇಕು. ಇದು ಮಾತ್ರವಲ್ಲ, ದೇವರ ಆತ್ಮನು, ಸಭೆಯಲ್ಲಿನ ತನ್ನ ಕಾರ್ಯನಿರ್ವಹಣೆಯಲ್ಲಿ ವ್ಯತ್ಯಾಸವುಳ್ಳವನಾಗಿದ್ದಾನೆ. ಹೀಗಿರುವುದರಿಂದ, ಇಲ್ಲಿ ನೀಡಿರುವ ವಿವಿಧ ರೀತಿಯ ವರಗಳು ಆದಿ ಸಭೆಯಲ್ಲಿ ಸರ್ವಸಾಮಾನ್ಯವಾಗಿದ್ದವು. **"ಪ್ರವಾದನೆಗಳದರೋ ಇಲ್ಲದಂತಾಗುವುದು, ವಾಣಿಗಳೋ ನಿಂತುಹೋಗುವುವು; ವಿದ್ಯೆಯೋ ಇಲ್ಲದಂತಾಗುವುದು"** (1 ಕೊರಿಂಥ 13:8) ಎಂದು ಅಪೋಸ್ತಲನು ಹೇಳುತ್ತಾನೆ. ಈ ಎಲ್ಲಾ ವರಗಳೂ ಸ್ಪಷ್ಟವಾಗಿ ಸಭೆಯ ಉದ್ಘಾಟನೆಯ ಸಂದರ್ಭದಲ್ಲಿ, ನೂತನ ಯುಗದ ಆರಂಭದಲ್ಲಿ ಅವಶ್ಯವಾಗಿದ್ದವು. ಸಭೆಯು ಸ್ಥಾಪಿತಗೊಂಡ ಮೇಲೆ ಮತ್ತು ಪವಿತ್ರ ಗ್ರಂಥದ ಆತ್ಮಸ್ಫೂರ್ತಿಯ ಬರೆಯೋಣಗಳ ಕಾರ್ಯ ಮುಕ್ತಾಯಗೊಂಡ ಮೇಲೆ ಇವುಗಳ ಅವಶ್ಯಕತೆ ಇನ್ನು ಇರುವುದಿಲ್ಲ. ಇವುಗಳು ಇನ್ನು ಸಾಕು, **"ಆದುದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸಿದ್ಧನಾಗುವನು"** (2 ತಿಮೋ. 3:17) ಎಂದು ಅಪೋಸ್ತಲನು ಪ್ರಕಟಿಸುತ್ತಾನೆ.

ನಿಜವಾಗಿಯೂ ಈ ಎಲ್ಲಾ ವರಗಳು ಕಣ್ಮರೆಯಾಗಿಲ್ಲ ಅಥವಾ ಸ್ಥಗಿತಗೊಂಡಿಲ್ಲ. ಇವುಗಳ ನಿಂತು ಹೋಗುವಿಕೆಯು ನಮ್ಮ ಕರ್ತನಿಗೆ ಹದಿನೆಂಟು ಶತಮಾನಗಳ ಹಿಂದೆ ಇದ್ದ ಶಕ್ತಿಗಿಂತ ಈಗ ಕಡಿಮೆಯಾಗಿದೆ ಎಂದು ಸಾಬೀತು ಪಡಿಸುವುದಿಲ್ಲ ಅಥವಾ ಕರ್ತನ ಜನರು ಈಗ ಕಡಿಮೆ ಅರ್ಹರು ಅಥವಾ ಕಡಿಮೆ ಕೃಪೆಗೆ ಪಾತ್ರರಾಗಿದ್ದರೆಂದು ಇದು ರುಜುವಾತುಪಡಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅವುಗಳ ಪ್ರಕಟನೆಯ ವೈವಿಧ್ಯತೆಗಳನ್ನು ಮತ್ತು ದೇವಜನರಿಗೆ ಇನ್ನುಮುಂದೆ ತಾವು ದೇವರಿಂದ ಅಂಗೀಕರಿಸಲ್ಪಟ್ಟಿದ್ದೇವೆಂಬುದನ್ನು ರುಜುವಾತುಪಡಿಸಲು ಅವರ ಪ್ರಾಕೃತ ಅಧ್ಯಾಪನ ರೀತಿಗಳ ಅವಶ್ಯಕತೆ ಇಲ್ಲ ಎಂಬ ಅರ್ಥವನ್ನು ಸೂಚಿಸುತ್ತವೆ. ಈಗ ಅಂಥಾಃ ವರಗಳು ಅದ್ಭುತವಾದ ರೀತಿಯಲ್ಲಿ ದಯಪಾಲಿಸಲ್ಪಟ್ಟು ಅವುಗಳನ್ನು ಹೊಂದಿರುವ ಬದಲಾಗಿ, ದೇವರ ಆತ್ಮನು ಆತನಲ್ಲಿ ಪ್ರತಿಷ್ಠೆ ಹೊಂದಿದವರ ಮೂಲಕ ಭಾಗಶಃ ಅವರ ಸ್ವಾಭಾವಿಕ ಅರ್ಹತೆಗಳಿಗನುಸಾರವಾಗಿ ಮತ್ತು ಭಾಗಶಃ ಆತನ ಸೇವೆಗಾಗಿ ಅವರಲ್ಲಿರುವ ಹುಮ್ಮಸ್ಸಿನ ಅನುಪಾತಕ್ಕನುಸಾರವಾಗಿ ತನ್ನ ಕಾರ್ಯಚರಣೆಗಳನ್ನು ನೆರವೇರಿಸುತ್ತಿರುತ್ತವೆ. ಈ ಕಾರಣದಿಂದ, ಅಪೋಸ್ತಲನು ಈ ಕುರಿತಾಗಿ ಮತ್ತು ತನ್ನ ನಂತರದ ಪತ್ರಿಕೆಗಳಲ್ಲಿ ಆತ್ಮೀಕ ವರಗಳನ್ನು, ಶಕ್ತಿ ಸಾಮರ್ಥ್ಯಗಳನ್ನು ದೇವರ ಮತ್ತು ಆತನ ಜನರಿಗಾಗಿ ಹಾಗೂ ಸತ್ಯಕ್ಕೆ ಸೇವೆ ಸಲ್ಲಿಸಲು ಅಭಿವೃದ್ಧಿ ಗೊಳಿಸಿಕೊಳ್ಳುವಂತೆ ಸಭೆಯನ್ನು ಪ್ರಚೋದಿಸುತ್ತಾನೆ.

ವ್ಯಕ್ತಿಗತವಾಗಿ ಅಭಿವೃದ್ಧಿ ಪಡಿಸಿಕೊಂಡ ಈ ವರಗಳನ್ನು ಅದ್ಭುತವಾಗಿ ದಯಪಾಲಿಸಲ್ಪಟ್ಟ ವರಗಳಿಗಿಂತ ಹೆಚ್ಚು ಗೌರವದಿಂದ ಕಾಣಬೇಕಾಗುತ್ತದೆ. ಆದುದರಿಂದ, ಅಪೋಸ್ತಲನು ಹೇಳುವುದೇನೆಂದರೆ **"ಇವುಗಳಲ್ಲಿ ಶ್ರೇಷ್ಠ ವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ. ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ. ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಿರಿ. ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು, ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ" (ಬಹಿರಂಗವಾಗಿ ವ್ಯಾಖ್ಯಾನಿಸುವಂತೆ)** (1 ಕೊರಿಂಥ 12:31; 14:1). ವಾಣಿಗಳನ್ನಾಡುವುದು ಅವಿಶ್ವಾಸಿಗಳ ಗಮನವನ್ನು ಸಭೆಗೆ ಮತ್ತು ಅದರ ಪದ್ಧತಿಗಳೆಡೆಗೆ ಸೆಳೆಯುವುದಾಗಿದೆ ಎಂದು ಅಪೋಸ್ತಲನು ಹೇಳುವವನಾಗಿ **"ವಾಣಿಗಳನ್ನಾಡುವುದು ನಂಬದವರಿಗೆ ಸೂಚನೆಯಾಗಿದೆಯೇ ಹೊರತು ನಂಬುವವರಿಗೆ ಸೂಚನೆಯಲ್ಲವೆಂದು ನಾವು ತಿಳಿದುಕೊಳ್ಳಬೇಕು"** (1 ಕೊರಿಂಥ 14:22) ಎಂದು ಬರೆಯುತ್ತಾನೆ. ಹೀಗಿರುವುದರಿಂದ ಕೆಲವು ಕೊರಿಂಥದವರಿಗೆ ಅತ್ಯುನ್ನತ ಗೌರವಕ್ಕೆ ಪಾತ್ರವಾಗಿದ್ದ ಈ ವರಗಳು ಆತ್ಮೀಕವಾಗಿ

ಅತ್ಯಲ್ಪವಾಗಿರುವವನಿಗೆ ಆತ್ಮೀಕ ಸಭೆಯ ಅಭಿವೃದ್ಧಿಗೆ ಹೊಂದಿಕೊಳ್ಳಲು ಕಡಿಮೆ ಪ್ರಮಾಣವಾಗಿರುತ್ತವೆಂದೂ ಹಾಗೂ ಇನ್ನೂ ಪುನರುಜ್ಜೀವನವಾಗದ ಲೋಕದವರಿಗೆ ಮುಖ್ಯವಾಗಿ ಉಪಯೋಗವಾಗುವಂಥಾದ್ದು ಎಂದು ಆತನು ಸೂಚಿಸುತ್ತಾನೆ. ಈ ವರಗಳು, ಮತ್ತು ಇದೇ ವರ್ಗಕ್ಕೆ ಸೇರಿದ ಬೇರೆ ಕೆಲವು ವರಗಳು ಸಭೆಯು ಈ ಲೋಕದಲ್ಲಿ ಕಾಲೂರಿ ಮಾನ್ಯತೆ ಪಡೆದ ಕ್ಷಣದಲ್ಲಿ ತ್ವರಿತವಾಗಿ ಅದೃಶ್ಯವಾಗಿವೆ.

ಇದಕ್ಕೆ ವ್ಯತಿರಿಕ್ತವಾಗಿ 'ಆತ್ಮನ ಫಲಗಳು' ಪ್ರೋತ್ಸಾಹಿಸಲ್ಪಡಬೇಕು, ಅವುಗಳು ಸಂಪೂರ್ಣವಾದ, ಸಮರ್ಪಕವಾದ ರೀತಿಯಲ್ಲಿ ದೇವರೆಡೆಗೆ, ಪರಸ್ಪರವಾಗಿ, ಮತ್ತು ಲೋಕದಮೇಲೆ ಅನುಕಂಪಭರಿತವಾದ ಪ್ರೀತಿಯ ಫಲಕೊಡುವಂತೆ ಅವುಗಳನ್ನು ಹೆಚ್ಚು ಹೆಚ್ಚಾಗಿ ಸಂಸ್ಕರಿಸಬೇಕು. ಈ ಆತ್ಮೀಕ ಫಲಗಳನ್ನು ಅಪೋಸ್ತಲನು **"ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ"** (ಗಲಾತ್ಯ 5:22) ಎಂಬುದಾಗಿ ಹೆಸರಿಸಿದ್ದಾನೆ. 'ಫಲ' ಎಂಬ ಪದವು ಎರಡು ವಿಧವಾದ ಆಲೋಚನೆಯನ್ನು ನೀಡುತ್ತದೆ ಎಂಬುದನ್ನು ಗಮನಿಸಬೇಕು. ಇದು ಒಂದು ಫಲ ಮಾತ್ರವಾಗಿದ್ದು, ಇದಕ್ಕೆ ಕ್ರಮೇಣವಾದ ಬೆಳವಣಿಗೆಯ ಮತ್ತು ಶ್ರಮೆಯ ಫಲಿತಾಂಶದ ಅಗತ್ಯವಿದೆ. ಹಾಗೆಯೇ ಆತ್ಮನ ಫಲಗಳೊಂದಿಗೆ: **"ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದು ಬರುತ್ತವೆ"** (ಯಾಕೋಬ 1:17). ಆದರೆ ಅಂತಹ ಫಲಗಳು ಅದ್ಭುತವಾದವುಗಳಲ್ಲ, ಅವುಗಳು ಅನುಕ್ರಮವಾದ, ಪರೋಕ್ಷವಾದ ವರಗಳಾಗಿವೆ. ಇವುಗಳು ನಮ್ಮ ತಂದೆಯ ವಾಗ್ದಾನಗಳಿಂದ ಮತ್ತು ನಮ್ಮ ಕರ್ತನ ಸೂಚನೆಗಳಿಂದ ಅಪೋಸ್ತಲರ ಮತ್ತು ಪ್ರವಾದಿಗಳ ಮೂಲಕ ಪ್ರೇರಿತವಾಗಿವೆ. ಅವುಗಳು ನಮ್ಮೊಳಗೆ ನಾವು ಉತ್ಪನ್ನಗೊಂಡಿರುವ ದೇವರ ವಾಕ್ಯ ಮತ್ತು ಕಾರ್ಯಗಳೊಂದಿಗೆ ನಮ್ಮ ಸಾಮರಸ್ಯ ಮತ್ತು ಆಲೋಚನೆಗಳ ವಿಧೇಯತ್ವಕ್ಕೆ ಅನುಪಾತವಾಗಿ ರೂಪಿತಗೊಂಡಿವೆ. ಅವುಗಳಿಂದ, ನಾವು ವಿಧೇಯರಾಗಿ ಪವಿತ್ರತೆಯ ಹೆಚ್ಚು ಹೆಚ್ಚಾದ ಫಲಗಳನ್ನು ಅಥವಾ ಪವಿತ್ರಾತ್ಮನ ಫಲಗಳ ಅಥವ ನಮ್ಮ ಕರ್ತನೂ ವಿಮೋಚಕನೂ, ದೇವರ ಏಕೈಕ ಕುಮಾರನ ರೀತಿಯಲ್ಲಿನ ಪ್ರವೃತ್ತಿಯನ್ನು ನಾವು ಬೆಳೆಸಿಕೊಳ್ಳಬಹುದು. ಪ್ರತಿಷ್ಠೆಯ ಸಮಯದಲ್ಲಿ ಅವರು ಆತ್ಮನಿಂದ ಪಡಕೊಂಡವರಾಗಿರುವುದರಿಂದ, ನಂಬಿಗಸ್ತರಾದ ಅವರು ಈ ರೀತಿಯಲ್ಲಿ ಸತ್ಯವೆಂಬ ಪವಿತ್ರಾತ್ಮನ ಧರ್ಮಬೋಧೆಯ ಸಹಾಯದಿಂದ ಪ್ರಥಮ ಪುನರುತ್ಥಾನದಲ್ಲಿ **'ಪವಿತ್ರಾತ್ಮನಿಂದ ಜನಿಸುವವರೂ ಆಗುವಂತೆ'** ಆತ್ಮೀಕವಾಗಿ ಸಜ್ಜುಗೊಳಿಸಲ್ಪಡುತ್ತಾರೆ. ಈ ರೀತಿಯಲ್ಲಿ ಆತ್ಮೀಕ ರೀತಿಯಲ್ಲಿ ಪರಿಪೂರ್ಣರಾದ ಸಭೆಯು ದೇವರ ಸ್ವತ್ತಾಗುತ್ತದೆ ಮತ್ತು ಎಲ್ಲಾ ಪ್ರಭುತ್ವಗಳ ಮತ್ತು ಅಧಿಕಾರಗಳ ಶಿರಸ್ಸಾಗಿರುವ ನಮ್ಮ ಕರ್ತನಾದ ಯೇಸು ಕ್ರಿಸ್ತನೊಂದಿಗೆ ದೇವರೊಂದಿಗೆ ಪೂರ್ಣ ಅನ್ಯೋನ್ಯತೆ ಮತ್ತು ಸಾಂಗತ್ಯದಲ್ಲಿ ಸಭೆಯುವರು ಅದರ ಜೊತೆ ಬಾಧ್ಯಸ್ಥರಾಗುತ್ತಾರೆ. ಆ ರಾಜ್ಯದಲ್ಲಿ ಪವಿತ್ರಾತ್ಮನು ದೇವರ ಮತ್ತು ಮಗನ ಸಂಪೂರ್ಣ ಆತ್ಮನಾಗಿ ಅವರ ಸಂಗಡಿಗನಾಗಿರುತ್ತಾನೆ.

ಈ ಪ್ರಸ್ತಾಪದ ಬಗ್ಗೆ ಹಿಂದಿನ ಸಾಮಾನ್ಯ ದೃಷ್ಟಿಕೋನದಲ್ಲಿ ಅದೇ ಆತ್ಮನು ಅಥವಾ ಪರಲೋಕದ ತಂದೆಯಾದ ಯೆಹೋವ ದೇವರ ಶಕ್ತಿಯು ಈ ಹಿಂದೆ ಲೋಕ ಸೃಷ್ಟಿಯಲ್ಲಿ ಕಾರ್ಯಾಚರಣೆ ನಡೆಸಿದ್ದು ಮತ್ತು ಆತನ ಸೇವಕರೊಂದಿಗೆ ಈ ಹಿಂದೆ ವಿವಿಧ ರೀತಿಯ ಕಾರ್ಯಾಚರಣೆಗಳನ್ನು ನಡೆಸಿದ್ದು, ಈ ಸುವಾರ್ತಾ ಯುಗದಲ್ಲಿ ಸಭೆಯ ಅಭಿವೃದ್ಧಿಗಾಗಿ, ಅದನ್ನು ದೇವರ ಸಾಮರಸ್ಯಕ್ಕೆ ತರುವಂತೆ, ಮತ್ತು ಆತನ ರಾಜ್ಯದಲ್ಲಿ ಜೊತೆ ಬಾಧ್ಯಸ್ಥವಾಗುವಂತೆ ಮತ್ತು ಅದನ್ನು ಕ್ರಿಸ್ತನ ದೇಹವನ್ನಾಗಿ ಸಜ್ಜುಗೊಳಿಸುವಂತೆ ಇನ್ನೂ ಭಿನ್ನ ರೀತಿಯ ಕಾರ್ಯಾಚರಣೆಗಳನ್ನು ನಡೆಸುವುದಾಗಿದೆ. ಇದೇ ಪವಿತ್ರಾತ್ಮನು ಅಥವಾ ದೇವರ ಪ್ರಭಾವವು ಮಿಲಿಯಾಂತರ ಯುಗದಲ್ಲಿ ಕ್ರಿಸ್ತನ ಮತ್ತು ಆತನ ಮಹಿಮೆಯುಳ್ಳ ಸಭೆಯ ಮೂಲಕ ಲೋಕವನ್ನು ರಾಜಾಧಿರಾಜನೂ, ಕರ್ತಾಧಿ ಕರ್ತನೂ ಆದಾತನ ನೈತಿಕ ತತ್ವಗಳೊಂದಿಗೆ ಸಾಮರಸ್ಯಕ್ಕೆ ತರುವಂತೆ ಇನ್ನೂ ವಿಭಿನ್ನವಾದ ರೀತಿಯಲ್ಲಿ ತನ್ನ ಕಾರ್ಯಾಚರಣೆಗಳನ್ನು ಕೈಗೊಳ್ಳುವುದಾಗಿದೆ. ಈ ಕಾರ್ಯದೊಂದಿಗೆ ಸಂಬಂಧಿಸಿದಂತೆ ಯಾವುದೇ ಅರ್ಥದಲ್ಲಿ ಅಥವಾ ಮಟ್ಟದಲ್ಲಿ ಬೇರೊಂದು ದೇವರ ಅಗತ್ಯತೆಯನ್ನು ಉಂಟುಮಾಡುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾದ ಸತ್ಯವೇನೆಂದರೆ ಒಬ್ಬನೇ ದೇವರು ವಿವಿಧ ಪರಿಸ್ಥಿತಿಗಳಲ್ಲಿ ತನ್ನ ಉದ್ದೇಶಗಳನ್ನು ನೆರವೇರಿಸುವ ನಿಮಿತ್ತ ಕಾರ್ಯ ಸಾಧಿಸುವವನಾಗಿದ್ದು ನಮಗೆ ಆತನ ಎಲ್ಲಾ ಒಳ್ಳೆಯ ಉದ್ದೇಶಗಳೂ ನೆರವೇರುತ್ತವೆ ಎಂಬ ಭರವಸೆಯನ್ನು ನೀಡುವವನಾಗಿದ್ದಾನೆ ಮತ್ತು **"ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂತಿರುಗುವುದಿಲ್ಲ"** (ಯೆಶಾಯ 55:11) ಎಂದು ಪ್ರಕಟಿಸುತ್ತಾನೆ.

## ದೈವಿಕ ಚಿತ್ತ, ಪ್ರಭಾವ, ಶಕ್ತಿ ಮತ್ತು ಆತ್ಮ
## Divine Will, Influence, Power, Spirit

ಮೇಲಿನವುಗಳಿಂದ 'ದೇವರ ಆತ್ಮನು' ಅಥವಾ 'ಪವಿತ್ರಾತ್ಮನು' ಎಂಬುದರ ವಿಶಾಲವಾದ ಅರ್ಥ

ವಿವರಣೆಯೆಂದರೆ – ದೇವರ ಚಿತ್ತ, ಪ್ರಭಾವ, ಶಕ್ತಿಯಾಗಿದೆ ಎಂದು ನಾವು ಗ್ರಹಿಸಬಹುದಾಗಿದೆ. ಇದು ದೇವರ ಚಿತ್ತಕ್ಕನುಸಾರವಾಗಿ ಎಲ್ಲೆಡೆಯಲ್ಲಿ ದೇವರ ಚಿತ್ತದ ಸಾಮರಸ್ಯಕ್ಕನುಸಾರವಾಗಿ ಪ್ರಯೋಗಿಸಲ್ಪಡುವ ಪವಿತ್ರವಾದ ಚಿತ್ತವಾಗಿದ್ದು, ಪವಿತ್ರಾತ್ಮನ ಹೆಜ್ಜೆ ಮತ್ತು ಕಾರ್ಯಾಚರಣೆಗಳು ಪವಿತ್ರತೆಯೊಂದಿಗೆ ಸಾಮರಸ್ಯದಲ್ಲಿರುತ್ತವೆ ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ದೇವರು ತನ್ನ ಆತ್ಮ ಅಥವಾ ತೇಜಸ್ಸನ್ನು ವಿವಿಧ ರೀತಿಯಲ್ಲಿ, ವಿವಿಧ ಪಾರುಪತ್ಯಗಳನ್ನು ಬಳಕೆ ಮಾಡಿಕೊಂಡು ಪ್ರಯೋಗಿಸುತ್ತಾ ವಿವಿಧ ರೀತಿಯ ಫಲಿತಾಂಶಗಳನ್ನು ಪಡಕೊಳ್ಳುವವನಾಗಿದ್ದಾನೆ. ಯಾಂತ್ರಿಕವಾಗಿಯೋ ಅಥವಾ ಬುದ್ಧಿವಂತಿಕೆಯ ಪಾರುಪತ್ಯೆಯ ಮೂಲಕ ದೇವರು ಯಾವುದನ್ನಾದರೂ ಹೊಂದಿಕೊಂಡಾಗ ಅವು ಆತನು ನೇರವಾಗಿ ಕಾರ್ಯ ಸಾಧಿಸಿದಷ್ಟೇ ಸತ್ಯವಾಗಿ ಇರುತ್ತದೆ. ಯಾಕೆಂದರೆ ಈ ಎಲ್ಲಾ ಪಾರುಪತ್ಯವೂ ಆತನ ಸೃಷ್ಟಿಯಾಗಿದೆ. ಜನರಲ್ಲಿರುವಂತೆ ಒಂದು ಕಟ್ಟಡದ ಗುತ್ತಿಗೆದಾರನಾದಾತನು ಕಟ್ಟಡದ ಕಟ್ಟುವಿಕೆಯ ಪ್ರತಿಯೊಂದು ಕಾರ್ಯದಲ್ಲಿಯೂ ನೇರವಾಗಿ ಭಾಗವಹಿಸದಿದ್ದರೂ ಅದರಲ್ಲಿ ಭಾಗವಹಿಸುವ ಪ್ರತಿಯೊಬ್ಬ ಕೆಲಸಗಾರನೂ ಆತನ ಪ್ರತಿನಿಧಿಗಳಾಗಿರುತ್ತಾರೆ ಮತ್ತು ಆತನ ನಿಯಂತ್ರಣದಲ್ಲಿರುತ್ತಾರೆ. ಆತನು ಒಂದು ವೇಳೆ ಒಂದೇ ಒಂದು ಸಲಕರಣೆಯನ್ನು ಕೂಡ ಎತ್ತದೇ ಇದ್ದಾಗ್ಯೂ ಕಟ್ಟಡ ಕಾರ್ಯವು ಸಂಪೂರ್ಣವಾಗಿ ಗುತ್ತಿಗೆದಾರನದೇ ಆಗಿರುತ್ತದೆ. ಆತನು ಅದನ್ನು ತನ್ನ ಪದಾರ್ಥಗಳ ಮೂಲಕ ಮತ್ತು ತನ್ನ ಪ್ರತಿನಿಧಿಗಳಾದ ಕೆಲಸಗಾರ ಮೂಲಕ ನೆರವೇರಿಸುವವನಾಗಿರುತ್ತಾನೆ.

ಅದರಂತೆ, ಉದಾಹರಣೆಯಾಗಿ ನಾವು **"ಯೆಹೋವನು ಭೂಮ್ಯಾಕಾಶಗಳನ್ನು ಉಂಟುಮಾಡಿದನು"** (ಆದಿ. 2:5) ಎಂದು ಓದುವಾಗ ಆತನು ವ್ಯಕ್ತಿಗತವಾಗಿ ಪ್ರತಿಯೊಂದನ್ನು ತನ್ನ ಕೈಗೆತ್ತಿಕೊಂಡು ಇದನ್ನು ನೆರವೇರಿಸಿದನು ಎಂದು ತಿಳಿಯಬಾರದು. ಆತನು ವಿವಿಧ ಪಾರುಪತ್ಯಗಳನ್ನು ಉಪಯೋಗಿಸಿದನು. **"ಆತನು ಉಂಟಾಗಲಿ ಎನ್ನಲು ಉಂಟಾಯಿತು"** (ಆತನು ಅಪ್ಪಣೆಕೊಡಲು ಎಲ್ಲವುಗಳೂ ಕೂಡಲೇ ಉಂಟಾದವು) **"ಕರ್ತನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು . . . ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು"** (ಕೀರ್ತನೆ 33:6,9). ಸೃಷ್ಟಿಯು ತನ್ನಷ್ಟಕ್ಕೆ ತಾನೇ ಕ್ರಮಬದ್ಧವಾಗಲಿಲ್ಲ. ನಾವು ಓದುವಂತೆ ಅದಕ್ಕೆ ಹಿಡಿದ ಕಾಲಾವಧಿ ಆರು ದಿನಗಳು ಅಥವಾ ಆರು ಯುಗಗಳು. ಎಲ್ಲಾ ವಸ್ತುಗಳೂ ತಂದೆ ದೇವರಿಗಾಗಿ ಮತ್ತು ಆತನ ಚೈತನ್ಯದ ಮೂಲಕ ಎಂಬುದನ್ನು ನಮಗೆ ನಿರ್ದಿಷ್ಟವಾಗಿ ತಿಳಿಸುವಾಗ, ಆತನ ಚಿತ್ತ, ಆತನ ಆತ್ಮ, ಮತ್ತು ಆತನ ಚೈತನ್ಯ ಇವುಗಳು ನಾವು ಈ ಹಿಂದೆ ಕಂಡುಕೊಂಡಂತೆ ಆತನ ಮಗನ ಅಂದರೆ ವಾಕ್ಯನ (ಲೊಗಾಸ್) ಮೂಲಕ ಕಾರ್ಯಗತವಾದವು.

ದೇವರ ಪವಿತ್ರಾತ್ಮನ ಪರಿವರ್ತನಾ ಶಕ್ತಿಯು ಈ ಸುವಾರ್ತ ಯುಗದಲ್ಲಿ ದೇವರ ಚಿತ್ತಾನುಸಾರ ಆತನ ಜನರನ್ನು ಆತನೊಂದಿಗೆ ಪೂರ್ಣ ಸಂಧಾನಕ್ಕೆ ತರುವ ಕಾರ್ಯವೆಸಗುವಾಗ ಅದು ಹೆಚ್ಚು ಕ್ಲಿಷ್ಟವಾಗಿರುವುದಲ್ಲದೆ ಆದಿಕಾಂಡ 1:2ರಲ್ಲಿ ತಿಳಿಸಿರುವ ಆತನ ಶಕ್ತಿಯ ಕಾರ್ಯಾಚರಣೆಗಿಂತಲೂ ಕಡಿಮೆಯಾದ ರೀತಿಯಲ್ಲಿ ಅರ್ಥವಾಗುವ ಕಾರ್ಯಾಚರಣೆಯಾಗಿದೆ. ಉನ್ನತ ಸಂಗತಿಗಳೊಂದಿಗೆ ಚಿತ್ತ ಮತ್ತು ಮುಕ್ತ ಮನಸ್ಸಿನ ವಿಷಯುವಾಗಿದೆಯೇ ಹೊರತು ಪ್ರಜ್ಞಾರಹಿತ ವಸ್ತುವಿನೊಂದಿಗೆ ಅಲ್ಲ.

ಪರಿಶುದ್ಧ ಗ್ರಂಥಗಳ ಬೆಳಕಿನಲ್ಲಿ ನಾವು ಪವಿತ್ರಾತ್ಮನನ್ನು ಈ ಕೆಳಕಂಡಂತೆ ಅರ್ಥಮಾಡಿಕೊಳ್ಳಬಹುದು :–

(ಅ) ದೇವರ ಶಕ್ತಿಯು ಯಾವ ರೀತಿಯಲ್ಲಿ ಬೇಕಾದರೂ ಕಾರ್ಯ ಸಾಧಿಸುತ್ತದೆ. ಆದರೆ, ಸದಾ ನ್ಯಾಯ ಮತ್ತು ಪ್ರೀತಿಯ ರೇಖೆಯಲ್ಲಿರುತ್ತದೆ. ಆದುದರಿಂದ ಇದೊಂದು ಪವಿತ್ರವಾದ ಶಕ್ತಿಯಾಗಿದೆ.

(ಆ) ಈ ಶಕ್ತಿಯು ಜೀವನದ ತೇಜಸ್ಸಾಗಿರಬಹುದು, ಇದು ಭೌತಿಕವಾದ ರಚನಾತ್ಮಕ ಅಥವಾ ಆಲೋಚನಾ ಶಕ್ತಿಯಾಗಿದೆ. ಇದರಲ್ಲಿ ರಚನಾತ್ಮಕವಾದ ಮತ್ತು ಸ್ಫೂರ್ತಿದಾಯಕವಾದ ಆಲೋಚನೆಗಳೂ ಮತ್ತು ಮಾತುಗಳೂ ಅಥವಾ ಚೈತನ್ಯಗೊಳಿಸುವ ಅಥವಾ ಜೀವದಾಯಕವಾದ ಶಕ್ತಿಯೂ ಅದೆ. ನಮ್ಮ ಕರ್ತನ ಪುನರುತ್ಥಾನದಲ್ಲಿ ಪ್ರಕಟಗೊಂಡಿತು ಹಾಗೂ ಮತ್ತೆ ಆತನ ಶರೀರವಾದ ಸಭೆಯ ಪುನರುತ್ಥಾನವು ಪ್ರಕಟಗೊಳ್ಳುವುದು.

(ಇ) ಇದು ಪಡಕೊಳ್ಳುವ, ಜನಿಸುವ ಅಥವಾ ಪರಿವರ್ತಿಸುವ ಶಕ್ತಿಯಾಗಿದೆ ಅಥವಾ ಸತ್ಯ ಜ್ಞಾನದ ಪ್ರಭಾವವಾಗಿದೆ. ಈ ವಿಷಯಾಂಶದಲ್ಲಿ ಇದನ್ನು "ಸತ್ಯದ ಆತ್ಮ" ಎಂದು ಕರೆಯಲಾಗುತ್ತದೆ. ದೇವರು ತನ್ನ ಸ್ವಂತ ಕಾರ್ಯಕ್ರಮವನ್ನು ಸತ್ಯ ಮತ್ತು ನೀತಿವಂತಿಕೆಗಳಿಗನುಸಾರವಾಗಿ ಆಳುತ್ತಾನೆ. ಅದಕಾರಣ ದೇವರ ವಾಕ್ಯವನ್ನು, ಆತನ ಕಾರ್ಯಕ್ರಮದ ಪ್ರಕಟನೆಯನ್ನು 'ಸತ್ಯ'ವೆಂದು ಕರೆಯಲಾಗುತ್ತದೆ – **"ನಿನ್ನ ವಾಕ್ಯವೇ ಸತ್ಯವು"**. ದೇವರ ಸತ್ಯ ಮತ್ತು ನೀತಿವಂತಿಕೆಯ ಯೋಜನೆಯ ಪ್ರಭಾವದಲ್ಲಿ ಬರುವವರೆಲ್ಲರೂ ಆತ್ಮನ ಪ್ರಭಾವಕ್ಕೆ ಅಥವಾ ಸತ್ಯದ ಮನೋಧರ್ಮಕ್ಕೆ ಒಳಗಾಗುವರು ಎಂದು ಯುಕ್ತವಾಗಿ ಹೇಳಲಾಗಿದೆ. ಅವರುಗಳು ನೂತನ ಜೀವಿತಕ್ಕೆ ಸತ್ಯದಿಂದ ಹುಟ್ಟಿದವರು ಎಂದು ಸೂಕ್ತವಾಗಿ ಹೇಳಲಾಗುವುದು.

ತಂದೆಯಾದ ದೇವರು ಪಾಪಿಗಳನ್ನು ಅವರ ಪಾಪದ ಮನವರಿಕೆ ಮತ್ತು ವಿಮೋಚಕನ ಅಗತ್ಯತೆಗಳನ್ನೊಳಗೊಂಡ ಮಾನಸಿಕವಾದ ಸಾಮಾನ್ಯ ಜ್ಞಾನೋದಯದ ಮೂಲಕ ಕ್ರಿಸ್ತನ ಬಳಿಗೆ ತರುತ್ತಾನೆ. ಯಾರೆಲ್ಲಾ ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕ ಮತ್ತು ಸಹಾಯಕನು (advocate) ಎಂಬುದಾಗಿ ಅಂಗೀಕರಿಸಿ ಆತನ ಮೂಲಕ ದೇವರ ಪೂರ್ಣ ಪ್ರತಿಷ್ಠೆಯ ಅಂಶಕ್ಕೆ ಬರುತ್ತಾರೋ ಅವರನ್ನು 'ದೇವರಿಂದ ಪಡಕೊಂಡವರು (ಅಥವಾ ಹುಟ್ಟಿದವರು)' ಎಂದು ಕರೆಯಲಾಗುವುದು. ಅವರೆಲ್ಲರೂ ಸತ್ಯದ ವಾಕ್ಯನಿಂದ ಹುಟ್ಟಿದವರೂ, ದೇವರ ಆತ್ಮನಿಂದ ನೂತನ ಜೀವಿತಕ್ಕೆ ಪಡಕೊಳ್ಳಲ್ಪಟ್ಟವರೂ ಆಗಿದ್ದಾರೆ. ಅಂದರೆ ದೇವರ ಶರತ್ತುಗಳು ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಆತನ ಸಾಮರಸ್ಯಕ್ಕೆ ಬಂದವರು ಎಂದರ್ಥ. ದೇವರು ಈ ರೀತಿಯ ಪ್ರತಿಷ್ಠೆಯ ಮನೋಧರ್ಮವನ್ನು ಸರಿಯಾದುದೆಂದು ಅಂಗೀಕರಿಸುತ್ತಾನೆ. ಅವರ ಎಲ್ಲಾ ಬಲಹೀನತೆಗಳನ್ನು ಪಕ್ಕದಲ್ಲಿಟ್ಟು ಅಥವಾ ಕ್ರಿಸ್ತನ ನೀತಿವಂತಿಕೆಯೆಂಬ ನಿಲುವಂಗಿಯಿಂದ ಮರೆಮಾಡಿ – ನಂಬಿಕೆಯ ಮೂಲಕ ನೀತಿನಿರ್ಣಯವನ್ನುಂಟು ಮಾಡಿ ಅವರನ್ನು 'ಯೇಸು ಕ್ರಿಸ್ತನ ಮೂಲಕ ನೂತನ ಸೃಷ್ಟಿ'ಗಳನ್ನಾಗಿ ಅಂಗೀಕರಿಸುತ್ತಾನೆ. ಅವರ ಎಲ್ಲಾ ಆಶೆ ಅಭಿಲಾಷೆಗಳೂ ಆತ್ಮನ ಮೂಲಕವಾಗಿ ಸತ್ಯಕ್ಕೆ ನಡೆಸಲ್ಪಡುತ್ತವೆ ಮತ್ತು ಪವಿತ್ರವಾದ ಪ್ರವೃತಿಯಿಂದ ಮಾರ್ಗದರ್ಶನ ಹೊಂದಿಕೊಂಡು ಸ್ವಯಂತ್ಯಾಗದ ವರೆಗೂ ಮರಣ ಪರ್ಯಂತರದ ಪೂರ್ಣ ವಿಧೇಯತ್ವಕ್ಕೆ ನಡೆಸುವುದಾಗಿದೆ. ಅಂಥವರು 'ಪುತ್ರತ್ವದ ಆತ್ಮವನ್ನು' ಹೊಂದಿದ್ದಾರೆಂದು ಹೇಳಲಾಗುತ್ತದೆ. ಯಾಕೆಂದರೆ, ಅಂದಿನಿಂದ ದೇವರು ತನ್ನ ಮಗನಾದ ಯೇಸುಕ್ರಿಸ್ತನಲ್ಲಿ ಈ ಪುತ್ರರಾದವರೊಡನೆ ವಿಶೇಷವಾದ ಒಡಂಬಡಿಕೆಯೊಳಗೆ ಪ್ರವೇಶಿಸುತ್ತಾನೆ. ಮತ್ತು ತಂದೆ ದೇವರು ಅವರುಗಳ ರಕ್ಷಣಾ ನಾಯಕನ ಮೂಲಕ ಅವರು ಸತ್ಯದ ಆತ್ಮನಲ್ಲಿ ನೆಲೆಗೊಂಡದ್ದೇ ಆದರೆ ಅವರ ಜೀವಿತದ ಎಲ್ಲಾ ಸಂಗತಿಗಳೂ ಘಟನೆಗಳು ಒಟ್ಟಾರೆಯಾಗಿ ಅವರ ಒಳತಿಗೆ ಉಂಟಾಗುವಂತೆ ಮಾಡುತ್ತಾನೆ. ಮತ್ತು ಅವು ಅವರಲ್ಲಿ ಹೆಚ್ಚು ಹೆಚ್ಚಾದ ನೈತಿಕತೆಯ, ಸತ್ಯದ ಮತ್ತು ಸಂತೋಷದ ಆತ್ಮೀಕ ಬೆಳವಣಿಗೆಗಳನ್ನು ಉಂಟು ಮಾಡುತ್ತದೆ. ಅವರು ಸತ್ಯದ ಆತ್ಮನಿಗೆ ವಿಧೇಯರಾಗಿ ಮುಂದುವರೆದಷ್ಟೂ ಪವಿತ್ರಾತ್ಮನನ್ನು ಹೆಚ್ಚುಹೆಚ್ಚಾಗಿ ಹೊಂದಿಕೊಳ್ಳುತ್ತಾರೆ. ಅಂಥವರಿಗೆ ನೀಡುವ ಬೋಧನೆಯೆಂದರೆ "ನೀವು ಪವಿತ್ರಾತ್ಮನಿಂದ ತುಂಬಿದವರಾಗಿರ್ರಿ" "ಆತ್ಮನನ್ನು ಅನುಸರಿಸಿ ನಡೆಯಿರಿ". "ಕಿಸ್ತನ ಆತ್ಮವು ನಿಮ್ಮಲ್ಲಿ ತುಂಬಿಕೊಂಡು ಸದಾ ನೆಲೆಸಲಿ ಮತ್ತು ಅದು ನಿಮ್ಮನ್ನು ಎಂದಿಗೂ ಆಲಸ್ಯಗಾರರೂ, ನಿಷ್ಫಲರೂ ಆಗದಂತೆ ಮಾಡುತ್ತದೆ.". ಅವರ ಪೂರ್ಣ ಪ್ರತಿಷ್ಠೆಯ ಸಮಯದಿಂದ ಅವರಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಪವಿತ್ರಾತ್ಮನು ಕ್ರಿಸ್ತ ಯೇಸುವಿನಲ್ಲಿ ಕಾರ್ಯ ಸಾಧಿಸಿದ ಅದೇ ಪವಿತ್ರಾತ್ಮನೂ, ದೇವರ ಮನೋಧರ್ಮವೂ ಆಗಿದ್ದಾನೆ. ಆದುದರಿಂದ ಇದನ್ನು "ಕ್ರಿಸ್ತನ ಆತ್ಮ"ವೆಂದು ವಿನ್ಯಾಸಗೊಳಿಸಿ **"ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ"** (ರೋಮಾ. 8:9) ಎಂದು ಬರೆಯಲಾಗಿದೆ.

## "ಅಳತೆಗನುಸಾರವಾದ ಆತ್ಮ" ಮತ್ತು "ಅಳತೆ ಮಾಡದೆ ಅನುಗ್ರಹಿಸಿರುವ ಆತ್ಮ"

## The Spirit by "Measure" and "Without Measure"

ನಮ್ಮ ಕರ್ತನಾದ ಯೇಸುವು ಆತನ ದೀಕ್ಷಾಸ್ನಾನದ ಪ್ರತಿಷ್ಠೆಯ ಸಮಯದಲ್ಲಿ, ಪವಿತ್ರಾತ್ಮನಿಂದ ಹುಟ್ಟಿದವನಾದನು; ಅದರಂತೆ ಆತನ ದೇಹವೆಂಬ ಸಭೆಯ ಅಂಗಗಳಾದವರು ಆತನ ಮರಣದಲ್ಲಿನ ತಮ್ಮ ದೀಕ್ಷಾಸ್ನಾನದಲ್ಲಿ, ತಮ್ಮ ಪೂರ್ಣಪ್ರತಿಷ್ಠೆಯ ಸಮಯದಲ್ಲಿ 'ಪಡಕೊಂಡವರು' ಆಗಿದ್ದಾರೆಂಬುದನ್ನು ನಾವು ನೋಡಿದ್ದೇವೆ. ಆದರೆ ಇವುಗಳ ನಡುವಿನ ಭಿನ್ನತೆಯನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಅದ್ಯಾವುದೆಂದರೆ, ಸಭೆಯ ಶಿರಸ್ಸಾಗಿರುವ ನಮ್ಮ ಕರ್ತನಾದ ಯೇಸುವು ಯಾವುದೇ ಅಳತೆ ಇಲ್ಲದ ರೀತಿಯಲ್ಲಿ ಆತ್ಮನನ್ನು ಹೊಂದಿಕೊಂಡನು – **"ದೇವರು ಯಾರನ್ನು ಕಳುಹಿಸಿದ್ದಾನೋ ಅವನಿಗೆ ಆತ್ಮವರವನ್ನು ಅಳತೆಮಾಡದೆ ಅನುಗ್ರಹಿಸಿರುವುದರಿಂದ...."** (ಯೋಹಾನ 3:34) ಎಂದು ಓದುತ್ತೇವೆ. ಆದರೆ, ಆತನ ಅನುಯಾಯಿಗಳು ಅದನ್ನು ಅಳತೆಗೆ ತಕ್ಕಂತೆ ಅಥವಾ ಮಿತಿಯಾದ ಅಳತೆಯಿಂದ ಪಡಕೊಂಡರು **"ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ನೀಡಲ್ಪಟ್ಟಿದೆ .... ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ"** (1 ಕೊರಿಂಥ 12:7–11 : ರೋಮಾ. 12:3 ಸಹಾ ನೋಡಿರಿ). ಈ ಭಿನ್ನತೆಗೆ ಕಾರಣವೇನೆಂದರೆ, ನಮ್ಮ ಕರ್ತನು ಸರ್ವ ಸಂಪೂರ್ಣನಾದ ವ್ಯಕ್ತಿಯಾಗಿದ್ದನು. ಆದರೆ, ಆತನ ಅನುಯಾಯಿಗಳಾದ ನಾವುಗಳು ಸಮರ್ಪಕರೆಂದು ಅಂಗೀಕರಿಸಲ್ಪಟ್ಟಿದ್ದರೂ (ನಂಬಿಕೆಯ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದರೂ) ವಾಸ್ತವವಾಗಿ ಬಹಳಷ್ಟು ಮಟ್ಟಿಗೆ ಅಸಮರ್ಪಕರಾಗಿಯೇ ಇದ್ದೇವೆ. ಪರಿಪೂರ್ಣನಾದ ಮನುಷ್ಯನು ದೇವರ ಸ್ವರೂಪದಲ್ಲಿರುವಾತನು ಆತನೊಂದಿಗೆ ಮತ್ತು ಆತನ ಆತ್ಮನ ಪರಿಶುದ್ಧತೆಯಲ್ಲಿ ಎಲ್ಲಾದರಲ್ಲಿಯೂ ಮತ್ತು ಪ್ರತಿಯೊಂದು ವೈಶಿಷ್ಟತೆಗಳಲ್ಲಿಯೂ ಸಂಪೂರ್ಣವಾದ

ಸಾಮರಸ್ಯದಲ್ಲಿರುತ್ತಾನೆ. ಆದರೆ, ಪತನದ ಕಾರಣ ಉಂಟಾಗಿರುವ ಅವನತಿಯು ಅನುಪಾತದಲ್ಲಿ ದೇವರೊಂದಿಗಿನ ಮತ್ತು ಆತನ ಪವಿತ್ರ ಆತ್ಮದೊಂದಿಗಿನ ನಮ್ಮ ಸಾಮರಸ್ಯವು ಹಾನಿಗೊಳಗಾಗಿದೆ. ಪ್ರತಿಯೊಬ್ಬರೂ ದೇವರ ಚಿತ್ತವನ್ನು ಬಯಸಿ ಅದನ್ನು ಚೆನ್ನಾಗಿ ಅರಿತುಕೊಂಡು ಜೀವಿಸುವುದು, ಆತನ ವಿರೋಧವಾದ ಯಾವ ಚಿತ್ತವೂ ಆತನಲ್ಲಿಲ್ಲದಿರುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಆದಾಗ್ಯೂ ಪತನಗೊಂಡ ಜನಾಂಗದ ಯಾವ ಸದಸ್ಯನೂ ಕರ್ತನ ಆತ್ಮವನ್ನು ಸಂಪೂರ್ಣವಾಗಿ ಅಂಗೀಕರಿಸುವ ಮತ್ತು ದೇವರೊಂದಿಗೆ ಪ್ರತಿಯೊಂದು ನಿರ್ಧಿಷ್ಟತೆಯಲ್ಲಿಯೂ ನಿರಪೇಕ್ಷವಾದ ಸಾಮರಸ್ಯವನ್ನು ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದುದರಿಂದ ನಂಬುವವರಲ್ಲಿ, ತಮ್ಮನ್ನು ಪ್ರತಿಷ್ಠೆಪಡಿಸಿಕೊಂಡವರಲ್ಲಿ, ಪುತ್ರ ಪದವಿಯನ್ನು ಪಡಕೊಳ್ಳುವ ಪವಿತ್ರಾತ್ಮನನ್ನು ಪಡಕೊಳ್ಳುವವರಲ್ಲಿ ಇದು ವಿವಿಧ ಅಳತೆಯಲ್ಲಿರುವುದನ್ನು ನಾವು ಕಾಣುತ್ತೇವೆ. ಈ ವಿವಿಧತೆಯು ನಾವು ದೇವ ಸ್ವರೂಪದಿಂದ ಪತನಗೊಂಡ ಮಟ್ಟ ಹಾಗೂ ನಾವು ಕ್ರಿಸ್ತನ ದೇಹದೊಳಗೆ ಬಂದಾಗಿನಿಂದ ಪಡಕೊಂಡ ಆತನ ಕೃಪೆ ಮತ್ತು ವಿಶ್ವಾಸದ ಮಟ್ಟಕ್ಕನುಸಾರವಾಗಿರುತ್ತದೆ. ನಾವು ಪವಿತ್ರಾತ್ಮನನ್ನು ಹೆಚ್ಚುಹೆಚ್ಚಾಗಿ ಹೊಂದಿಕೊಳ್ಳುವ ವೇಗವು ಮತ್ತು ದೇವರ ಯೋಜನೆಯ ಪ್ರತಿಯೊಂದು ಲಕ್ಷಣದ ಹೆಚ್ಚು ಹೆಚ್ಚಾದ ತಿಳಿವಳಿಕೆಯನ್ನೂ, ಹೊಂದಾಣಿಕೆಯನ್ನು ವಶಪಡಿಸಿಕೊಳ್ಳುವುದು ನಮ್ಮ ಅಸಮರ್ಪಕತೆಯನ್ನು ಮತ್ತು ಕರ್ತನಿಗೆ ನಾವು ಮಾಡಿಕೊಂಡಿರುವ ನಮ್ಮ ಪ್ರತಿಷ್ಠೆಯನ್ನು, ಆತನ ಚಿತ್ತದ ಅಧ್ಯಯನದಲ್ಲಿ, ಆತನ ವಾಕ್ಯದಲ್ಲಿ ನಮ್ಮ ಮಟ್ಟವನ್ನು ಗ್ರಹಿಸಿಕೊಳ್ಳುವುದರ ಮತ್ತು ಅದನ್ನು ನಮ್ಮ ಜೀವನದ ಎಲ್ಲಾ ವಿಷಯಗಳನ್ನು ಅನುಷ್ಠಾನಕ್ಕೆ ತರುವುದರ ಮೇಲೆ ಹೆಚ್ಚಾಗಿ ಅವಲಂಬಿಸಿದೆ.

ಪ್ರತಿಷ್ಠೆಗೊಂಡ ವಿಶ್ವಾಸಿಗಳು ತಮ್ಮನ್ನು ದೇವರಿಗೆ ಬಿಟ್ಟುಕೊಡುವ ಮತ್ತು ತಮ್ಮ ಸ್ವಂತ ಇಚ್ಛೆಗಳನ್ನು ಮತ್ತು ಆಯ್ಕೆಗಳನ್ನು ಕಡೆಗಣಿಸುವ, ಆತನ ಮಾರ್ಗದಲ್ಲಿ ನಡೆಯಲು ಬಯಸುವ ಅಳತೆಯಲ್ಲಿ ಅವರು "ದೇವರಾತ್ಮನಿಂದ ನಡೆಸಲ್ಪಡುವರು" "ದೇವರಾತ್ಮನಿಂದ ಉಪದೇಶಿಸಲ್ಪಟ್ಟವರು" ಮತ್ತು "ಪವಿತ್ರಾತ್ಮ ಪ್ರೇರಿತರಾಗಿ" ದೇವರನ್ನು ಹೊಸ ರೀತಿಯಲ್ಲಿ ಸೇವಿಸುವವರಾಗಿದ್ದಾರೆ. ಈ ದಾರಿಯಲ್ಲಿ ಮತ್ತು ಸೂಚನೆಯಲ್ಲಿ ಮುಂದುವರೆಯಲು ಅವರಲ್ಲಿ ಶಾಂತಭಾವದ ಆತ್ಮವಿರಬೇಕು (ಗಲಾತ್ಯ 5:22,23: 6:1 ಇವುಗಳನ್ನು ನೋಡಿರಿ). ಆದುದರಿಂದ **"ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬುದನ್ನೂ ದೇವಜನರಾದ ನಮ್ಮಲ್ಲಿ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬುದನ್ನು ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದುದೆಂಬುದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ"** (ಎಫೆಸ 1: 17–19) ಎಂದು ಪೌಲನು ಬರೆಯುತ್ತಾನೆ.

ಪವಿತ್ರಾತ್ಮನ ಕಾರ್ಯಗಳ ಈ ವಿವಿಧ ಪ್ರಸ್ತುತಿಗಳಲ್ಲಿ ಮತ್ತು ಸತ್ಯವೇದ ವಿದ್ಯಾರ್ಥಿಗಳ ಗಮನಕ್ಕೆ ಬರುವ ಬೇರೆಯವುಗಳಲ್ಲಿ ಬೇರೊಬ್ಬ ದೇವರ ಅಗತ್ಯತೆಯು ಕಂಡುಬರುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ಒಬ್ಬನೇ ದೇವರ ಯುಕ್ತವಾದ ಕಲ್ಪನೆಯು ಆತನ ಸರ್ವತ್ರಾಣವುಳ್ಳ ಶಕ್ತಿಯು ಮತ್ತು ಸಂಪನ್ಮೂಲಗಳು ಅಪಾರವಾಗಿದೆ ಎಂಬುದನ್ನು ತೋರಿಸುತ್ತದೆ ಮತ್ತು ಆತನು **"ಇಸ್ರಾಯೇಲ್ಯರೇ, ಕೇಳಿರಿ ನಿಮ್ಮ ಕರ್ತನಾದ ಯೆಹೋವನು ಒಬ್ಬನೇ ದೇವರು"** (ಧರ್ಮೋ 6:4) ಎಂಬ ಮಾತಿನಂತೆ ದೇವರಿಗೆ ಯಾವ ಸಹಾಯವೂ ಬೇಕಿಲ್ಲ. ನಿಜವಾಗಿಯೂ, ಇನ್ನೂ ಸಮಂಜಸವಾಗಿ ಹೇಳುವುದಾದರೆ, ಪವಿತ್ರಾತ್ಮನ ಕಾರ್ಯಚರಣೆಯ ಕುರಿತಾಗಿ ನೋಡಿಕೊಳ್ಳಲು ಮತ್ತೊಬ್ಬ ದೇವರ ಅಗತ್ಯವಿದೆ ಎಂದು ಹೇಳುವವರು ಅಷ್ಟೇ ಸಮಂಜಸವಾಗಿ ಅನೇಕ ಆತ್ಮೀಕ ದೇವರುಗಳು – ಪಡಕೊಳ್ಳುವ ಆತ್ಮ, ಸಾದುತ್ವದ ಆತ್ಮ, ಕ್ರಿಸ್ತನ ಆತ್ಮ, ತಂದೆಯ ಆತ್ಮ, ಪ್ರೀತಿಯ ಆತ್ಮ, ನ್ಯಾಯದ ಆತ್ಮ, ಕರುಣೆಯ ಆತ್ಮ, ಪವಿತ್ರತೆಯ ಆತ್ಮ, ಸತ್ಯದ ಆತ್ಮ, ತಾಳ್ಮೆಯ ಆತ್ಮ, ಮಹಿಮೆಯ ಆತ್ಮ, ಜ್ಞಾನದ ಆತ್ಮ, ಕೃಪೆಯ ಆತ್ಮ ಮುಂತಾಗಿ ಪ್ರತಿಯೊಂದು ವಿಭಾಗಕ್ಕೆ ಪ್ರತ್ಯೇಕ ದೇವರುಗಳಿದ್ದಾರೆಂದೂ ಹಕ್ಕಿನಿಂದ ಹೇಳಬಹುದು. ಆದರೆ, ಅಪೋಸ್ತಲನು ವಿವರಿಸಿ ಹೇಳಿರುವಂತೆ, ಈ ಎಲ್ಲಾ ವಿವಿಧತೆಯು ಕಾರ್ಯಾಚರಣೆಗಳೂ ಸರ್ವಶಕ್ತನಾದ ಒಬ್ಬನೇ ದೇವರ ಒಂದೇ ಆತ್ಮಕ್ಕೆ ಸೀಮಿತವಾಗಿವೆ.

## ಈ ಲೋಕದ ಆತ್ಮ – ಕ್ರಿಸ್ತ ವಿರೋಧಿಯ ಆತ್ಮ

### The Spirit of The World - The Spirit of Antichrist

ಈ ಲೋಕದ ಆತ್ಮನು ದೇವರ ಆತ್ಮಕ್ಕೆ ವಿರೋಧವಾದುದಾಗಿದೆ. ಸಮಸ್ತ ಲೋಕವು ಪತನದ ಸ್ಥಿತಿಯಲ್ಲಿರುವುದರಿಂದ ಮತ್ತು ವಿರೋಧಿಯು ಕುರುಡಾಗಿಸುವ ಮತ್ತು ಭಷ್ಟಗೊಳಿಸುವ ಪ್ರಭಾವಕ್ಕೆ ತುತ್ತಾಗಿರುವುದರಿಂದ ಅದರ ಆತ್ಮ ಮತ್ತು ಮನೋಪ್ರವೃತ್ತಿಯು ಅವಶ್ಯಕವಾಗಿ ಪವಿತ್ರವಾದ,

ಸತ್ಯವಾದ, ನ್ಯಾಯವಾದ, ಪ್ರೀತಿಯುಳ್ಳ ಆತ್ಮನೊಂದಿಗೆ ಅಥವಾ ದೇವರ ಪ್ರವೃತ್ತಿಯೊಂದಿಗೆ ನಿರಂತರವಾದ ತಿಕ್ಕಾಟದಲ್ಲಿ ಇರುತ್ತದೆ. ಆದುದರಿಂದ ದೇವರ ವಾಕ್ಯದ ಮೂಲಕ ಮತ್ತು ಆತನ ಎಲ್ಲಾ ಪವಿತ್ರ ಪ್ರಭಾವಗಳ ಮೂಲಕ ಆತನ ಜನರು ಪಡಕೊಂಡಿರುವ ಮತ್ತು ವಿವಿಧರೀತಿಯಲ್ಲಿ ಅವರಲ್ಲಿ ಕಾರ್ಯವೆಸಗುತ್ತಿರುವ ಪವಿತ್ರಾತ್ಮನೊಂದಿಗಿನ ತಿಕ್ಕಾಟ ಇದಾಗಿದೆ. ಸೈತಾನನ ಸ್ವಾರ್ಥದ ಆತ್ಮವು ಮತ್ಸರ, ಅಸೂಯೆ ಕಚ್ಚಾಟಗಳ ಮೂಲಕ ಈ ಲೋಕದ ಮಕ್ಕಳನ್ನು ನಿಯಂತ್ರಿಸುತ್ತಿರುತ್ತದೆ. ಆದುದರಿಂದ ದೇವರ ಪವಿತ್ರಾತ್ಮನು, ಪ್ರೀತಿಯ, ಸಾದುತ್ವ, ನಮ್ರತೆ, ತಾಳ್ಮೆ, ಒಳ್ಳೆಯತನ, ಸಹೋದರ ಕರುಣೆ ಇವುಗಳಿಂದ ಕೂಡಿದ ದೇವರ ಮಕ್ಕಳಲ್ಲಿ ತನ್ನ ಕಾರ್ಯ ಸಾಧಿಸುತ್ತಾ ಅವರನ್ನು ತನ್ನ ನಿಯಂತ್ರದಲ್ಲಿಟ್ಟುಕೊಳ್ಳುತ್ತಾನೆ. ಈ ಎರಡು ಆತ್ಮಗಳು ಅಥವಾ ಪ್ರವೃತ್ತಿಗಳು, ಒಂದು ಪ್ರೀತಿ ಮತ್ತು ಒಳ್ಳೆಯತನದ್ದು, ಮತ್ತೊಂದು ಸ್ವಾರ್ಥ ಮತ್ತು ಕೆಡಕುತನದ್ದು ಆಗಿದ್ದು ಇವುಗಳು ಸದಾ ತಿಕ್ಕಾಟದಲ್ಲಿರುತ್ತವೆ ಮತ್ತು ಇವುಗಳ ಸಂಧಾನವು ಪೂರ್ಣವಾಗಿ ಅಸಾಧ್ಯವಾಗಿದೆ.

ದೇವರ ವಾಕ್ಯಗಳು ಈ ಲೋಕದಲ್ಲಿ ಪರಿಶುದ್ಧಾತ್ಮನ ವಿರೋಧವಾಗಿ ಕಾರ್ಯವೆಸಗುತ್ತಿರುವ ಈ ಲೋಕದ ಆತ್ಮದ ಬಗ್ಗೆ ಮಾತನಾಡುತ್ತಾ ಅದನ್ನು 'ಕ್ರಿಸ್ತ ವಿರೋಧಿಯ ಆತ್ಮ'ಎಂದು ಕರೆಯುತ್ತದೆ. ಇದು ಕ್ರಿಸ್ತನಿಗೆ ವಿರುದ್ಧವಾದ ಆತ್ಮ ಅಥವಾ ಮನೋಪ್ರವೃತ್ತಿಯಾಗಿದೆ. ಮೊದಲಿಗೆ ಅದು ಆತನನ್ನು ಸಂಪೂರ್ಣವಾಗಿ ನಿರ್ಲಕ್ಷಿಸ ಬಯಸುತ್ತದೆ. ಮತ್ತು ಆತನು ಈ ಲೋಕಕ್ಕೆ ಎಂದಾದರೂ ಬಂದಿದ್ದನು ಎಂಬುದರ ಬಗ್ಗೆ ವಿವಾದವನ್ನುಂಟುಮಾಡುತ್ತದೆ. ನಂತರದಲ್ಲಿ, ಈ ವಿಷಯದಲ್ಲಿ ಜಯ ಹೊಂದದೇ ಇರುವಲ್ಲಿ ಅದು ನಮ್ಮ ಕರ್ತನಾದ ಯೇಸುವು ಕೇವಲ ಒಬ್ಬ ಮನುಷ್ಯನು, ಆತನು ಪಾಪಿಯಾಗಿದ್ದನು ಎಂದು ಹೇಳುತ್ತದೆ; ಇದನ್ನೂ ಸಹಾ ಒಪ್ಪದೇ ಹೋದಲ್ಲಿ, ಅದು ಆತನು ಏನನ್ನೂ ಸಾಧಿಸಲಿಲ್ಲ ಆತನು ಕೇವಲ ಒಬ್ಬ ಮಾದರಿಯಾಗಿದ್ದನೇ ಹೊರತು ವಿಮೋಚಕನಾಗಿರಲಿಲ್ಲ ಎಂದು ಹೇಳತೊಡಗುತ್ತದೆ. ಹೀಗಾಗಿ ನಾವು ದೇವರ ವಾಕ್ಯದ ಮೂಲಕ ಆತ್ಮವನ್ನು ಪರೀಕ್ಷಿಸಲು, ಪ್ರಯತ್ನಿಸಲು ಮತ್ತು (ನಮಗೆ ಪ್ರಸ್ತುತಿ ಪಡಿಸುವ ಸಿದ್ಧಾಂತಗಳು ಸತ್ಯದ ಆತ್ಮವೆಂದು ಹೇಳಿಕೊಳ್ಳುತ್ತದೆ) ಸಾಬೀತುಪಡಿಸಲು ಆದೇಶ ಹೊಂದಿದ್ದೇವೆ. ನಾವು ಅವನ್ನು ಪರೀಕ್ಷೆ ಮಾಡಬೇಕಾಗುತ್ತದೆ. ಆದರೆ ಕೇವಲ ಅವುಗಳ ಬಾಹ್ಯ ಗೋಚರಿಕೆಯಿಂದಲ್ಲ, ಅವುಗಳ ಹಕ್ಕಿನ ಹೇಳಿಕೆಗಳಿಂದಲ್ಲ, ದೇವರ ವಾಕ್ಯದ ಮೂಲಕ. – **"ಪ್ರಿಯರೇ, ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಕ್ಕೆ ಬಂದಿರುವುದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಪರೀಕ್ಷಿಸಬೇಕು"** (1 ಯೋಹಾನ 4:1). **"ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ; ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ; ದೇವರಿಂದ ಹುಟ್ಟದವನು ನಮ್ಮ ಮಾತನ್ನು ಕೇಳುವುದಿಲ್ಲ. ಇದು ಸತ್ಯವನ್ನು ಬೋಧಿಸುವ ಆತ್ಮ, ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ಇದರಿಂದಲೇ ತಿಳುಕೊಳ್ಳುತ್ತೇವೆ"** (1 ಯೋಹಾನ 4:6).

## ಯುದ್ಧ ಸ್ಥಿತಿಯಲ್ಲಿ ಪವಿತ್ರ ಮತ್ತು ಅಪವಿತ್ರ ಪ್ರಭಾವಗಳು

## Holy and Unholy Influences at Warfare

ದೇವರಿಂದ ಗುಣಲಕ್ಷಣಗಳ ಸಮರ್ಪಕತೆಯು ಆತನ ಎಲ್ಲಾ ಸೃಷ್ಟಿಗಳ ಪವಿತ್ರತೆಯ, ನೈತಿಕತೆಯ ಮತ್ತು ಸತ್ಯದ ನಿರ್ಧಿಷ್ಟಮಾನವಾಗಿದೆ. ಈ ನಿರ್ಧಿಷ್ಟ ಮಾನದಂಡಕ್ಕೆ ವಿರೋಧವಾದ ಅಥವಾ ತಕ್ಕುದಾಗಿರದ ಪ್ರತಿಯೊಂದು ವಸ್ತುವೂ ಮತ್ತು ಪ್ರತಿಯೊಂದು ಸೃಷ್ಟಿಯೂ ಅಪವಿತ್ರವೂ, ಅನೈತಿಕವೂ, ಅಸತ್ಯವೂ ಆಗಿದೆ. ಈ ಪ್ರತಿಕೂಲ ಪ್ರಭಾವವು ಕೆಲವೊಮ್ಮೆ ಸೈತಾನನಿಗೆ ಸಲ್ಲುತ್ತದೆ. ಯಾಕೆಂದರೆ, ಆತನೇ ದೇವರ ಪ್ರಮುಖ ವೈರಿಯಾಗಿದ್ದಾನೆ ಮತ್ತು ನೈತಿಕತೆಯ ವಿರುದ್ಧ ಪಿತೂರಿ ನಡೆಸಿದವರಲ್ಲಿ ಮೊದಲಿಗನು ಆತನೇ. ಆತನೇ ತಪ್ಪಿನ ಮೂಲ ಪ್ರವರ್ತಕನಾಗಿದ್ದಾನೆ ಹಾಗೂ "ಸುಳ್ಳಿನ ಮತ್ತು ವಂಚನೆಯ ತಂದೆ"ಯೂ ಆಗಿದ್ದಾನೆ. ಆದರೆ ನಾವು ಪವಿತ್ರಾತ್ಮವುಳ್ಳ ಜೀವಿಗಳ ಮತ್ತು ಪವಿತ್ರಾತ್ಮನ ಪ್ರಭಾವದ ನಡುವೆ ವ್ಯತ್ಯಾಸವನ್ನು ಕಂಡುಕೊಂಡಂತೆಯೇ ದುರಾತ್ಮವುಳ್ಳ ವ್ಯಕ್ತಿಗಳ ಮತ್ತು ದುರಾತ್ಮದ ಪ್ರಭಾವದ ನಡುವಿನ ವ್ಯತ್ಯಾಸಗಳನ್ನು ಕಂಡುಕೊಳ್ಳಬೇಕು. ಸತ್ಯವೇದವನ್ನು ಉಪೇಕ್ಷಿಸುವ (ಮಹಾ ವಿಮರ್ಶಕರೂ ಸೇರಿದಂತೆ) ಕೆಲವು ವಿದ್ಯಾವಂತ ಜನರಲ್ಲಿರುವ ವಿಕಾಸವಾದಿ ಆಲೋಚನೆಗಳ ಧೋರಣೆಯು ಸೈತಾನನ ವ್ಯಕ್ತಿತ್ವವನ್ನು ಮತ್ತು ಆತನ ಸಂಗಡಿಗರ ಆತ್ಮಗಳು ಉನ್ನತ ಸ್ಥಾನಗಳಲ್ಲಿವೆ ಎಂದು ನಿರ್ಲಕ್ಷಿಸುವುದು (ಎಫೆಸ 6:12) ಹಾಗೂ ವಾಸ್ತವಿಕವಾಗಿ ಯಾವುದೇ ರೀತಿಯ ದುಷ್ಟ ಪ್ರಭಾವಗಳೂ ಇಲ್ಲ. ಮಾನವನು ತನ್ನ ಸ್ವಂತ ತಿಳಿಗೇಡಿತನದೊಂದಿಗೆ ಮತ್ತು ತನ್ನ ಸ್ವಂತ ಒಳ್ಳೆಯ ಗುಣಗಳಿಂದ ತಪ್ಪು ಮಾರ್ಗದರ್ಶನದಲ್ಲಿ ಹೋರಾಡುತ್ತಿದ್ದಾನೆ ಎಂದು ಹೇಳುವುದು. ಅದೇ ರೀತಿಯಲ್ಲಿ, ಇನ್ನೂ ಮುಂದುವರೆದವರು (ತಪ್ಪುಗಳಲ್ಲಿ), ಉನ್ನತ ವಿದ್ಯಾಭ್ಯಾಸ ಮಾಡಿದವರು (ಅಸತ್ಯ ಸಂಗತಿಗಳ ಬಗ್ಗೆ) ಮತ್ತು ಸಂಪೂರ್ಣ ವೇದಾಂತದ (ಆ ರೀತಿಯಾಗಿ ತಪ್ಪಾಗಿ ಕರೆಯಲ್ಪಡುವ) ರಕ್ಷಾಕವಚ ಧರಿಸಿದವರು ಮತ್ತಷ್ಟು ಮುಂದುವರೆದು ಯಾವುದೇ ವ್ಯಕ್ತಿಗತವಾದ ದೇವರು ಇಲ್ಲ, ಆದರೆ, ಮಾನವನಲ್ಲಿದೆಯೆಂದು ಅವರು ಹೇಳುವ ಕೇವಲ ಒಳ್ಳೆಯ ಪ್ರಭಾವಗಳು ಕ್ರಮೇಣವಾಗಿ ಸಮರ್ಪಕತೆಗೆ ವಿಕಸಿತಗೊಳ್ಳುತ್ತದೆ ಎಂದು ಹೇಳುತ್ತಾರೆ.

ಆದರೆ ನಾವು ದೇವರ ವಾಕ್ಯವೆಂಬ ಆತನ ದಿವ್ಯವಾಣಿಗೆ ಗಮನಕೊಡುತ್ತೇವೆ. ಇವು ವಿವೇಕಿಗಳಿಗೆ ರಕ್ಷಣೆಯನ್ನುಂಟುಮಾಡುತ್ತದೆ ಎಂದು ಅಪೋಸ್ತಲನು ಭರವಸೆ ನೀಡುವವನಾಗಿದ್ದಾನೆ. ಇವು ಜೀವದ ಬುಗ್ಗೆಯನ್ನು, ಬೆಳಕನ್ನು ಮತ್ತು ಸತ್ಯದ ಆತ್ಮವನ್ನು ಒಳಗೊಂಡಿರುವುದನ್ನು ನಾವು ಕಂಡುಕೊಳ್ಳುತ್ತೇವೆ. ಇದರೊಂದಿಗೆ ಮಾನವ ವಿಚಾರಣ ಸರಣಿಗಳನ್ನು ಮತ್ತು ಬೆಳಕನ್ನು ಹೋಲಿಸಲಾಗದು. ದೇವರು 'ಪರಿಶುದ್ಧ ಆತ್ಮ'(ವ್ಯಕ್ತಿ)ವಾಗಿದ್ದಾನೆ ಮತ್ತು ಪವಿತ್ರ ಆತ್ಮ (ಪ್ರಭಾವ)ವು ಸದಾಕಾಲ ನೀತಿವಂತಿಕೆಯೊಂದಿಗಿನ ಸಾಮರಸ್ಯದಲ್ಲಿ ಕಾರ್ಯವೆಸಗುತ್ತದೆ. ದೇವರೊಂದಿಗೆ ಸಾಮರಸ್ಯ ದಲ್ಲಿರುವವರು ಮತ್ತು ಆತನೊಂದಿಗೆ ರಾಜಿ ಸಂಧಾನ ಮಾಡಿಕೊಂಡಿರುವವರು ಆತನ ಪವಿತ್ರ ಆತ್ಮನನ್ನು ಹೊಂದಿಕೊಂಡಿರಬೇಕು. – ದೇವರ ಆತ್ಮನ ಸಂಪೂರ್ಣತೆಯು ಆತನು ಪಡೆದ ಏಕೈಕ ಕುಮಾರನಲ್ಲಿ ಮಾತ್ರವೇ ವಾಸಿಸುತ್ತದೆ – ಪವಿತ್ರ ದೂತರುಗಳಿಗೆ ದೇವರ ಚಿತ್ತದ ಅಥವಾ ಆತ್ಮದ ಹೊರತಾಗಿ ಬೇರೆ ಯಾವುದೇ ಸ್ವಂತ ಚಿತ್ತ ಅಥವಾ ಆತ್ಮವಿರುವುದಿಲ್ಲ. ತಮ್ಮ ಶಿರಸ್ಸಿನ ಕೆಲಮಟ್ಟಿನ ಮನಸ್ಸು ಅಥವ ಆತ್ಮವನ್ನು ಹೊಂದಿದವರನ್ನೊಳಗೊಂಡ ಸಭೆಯು (ಅವುಗಳಿಲ್ಲ ವಾದಲ್ಲಿ ಅವರಲ್ಲಿ ಯಾರೂ ಆತನವರಲ್ಲ), ಪವಿತ್ರ ಆತ್ಮನನ್ನು ಹೆಚ್ಚು ಹೆಚ್ಚಾಗಿ ಹೊಂದಿಕೊಳ್ಳ ಬಯಸುವವರು ಮತ್ತು ಈ ಪವಿತ್ರಾತ್ಮನಿಂದ ತುಂಬಿಸಲ್ಪಟ್ಟವರು ಮತ್ತು ಎಲ್ಲಾ ಅಪವಿತ್ರ ಪ್ರವೃತ್ತಿಗಳನ್ನು, ಪ್ರಭಾವಗಳನ್ನು ಕಳಚಿಹಾಕಿಕೊಂಡಿರುವವರು ಆಗಿದ್ದಾರೆ. ಅದರಂತೆ ದೇವರ ವಾಕ್ಯವು ನಮಗೆ ಸೈತಾನನು ಸಹಾ ಒಂದು ಆತ್ಮ (ವ್ಯಕ್ತಿ)ವಾಗಿದ್ದಾನೆ ಮತ್ತು ಆತನಲ್ಲಿ ಅಶುದ್ಧವಾದ ಆತ್ಮ, ಮನಸ್ಸು ಮತ್ತು ಮನೋಪ್ರವೃತ್ತಿ ಇದೆ ಮತ್ತು ಆತನು ತನ್ನ ಈ ಅಪವಿತ್ರವಾದ ಆತ್ಮ ಮತ್ತು ಪ್ರಭಾವಗಳಿಂದ ಆತನ ವಿವಿಧ ವಾಹಿನಿ ಮತ್ತು ನಿಯೋಗಿಗಳ* ಮೂಲಕ ಕಾರ್ಯವೆಸಗುತ್ತಾನೆ ಎಂದು ಬೋಧಿಸುತ್ತದೆ. ಪತನಗೊಂಡು ಬಿದ್ದು ಹೋದ ದೇವದೂತರುಗಳು ಆತ್ಮಗಳಾದರೂ ತಮ್ಮ ಪವಿತ್ರವಾದ ಆತ್ಮವನ್ನು, ದೇವರಲ್ಲಿ ಮತ್ತು ಆತನ ನೈತಿಕ ಮಟ್ಟದಲ್ಲಿ ಭಕ್ತಿಯನ್ನು, ಧರ್ಮನಿಷ್ಠೆಯನ್ನು ಕಳಕೊಂಡವರಾಗಿ ಕೆಳಗೆ ತಳ್ಳಲ್ಪಟ್ಟ ವರಾಗಿದ್ದಾರೆ. ಈಗ ಅವರು ಅಪವಿತ್ರ ಆತ್ಮ ಮತ್ತು ಪ್ರವೃತ್ತಿಗಳನ್ನು ಹೊಂದಿಕೊಂಡವರಾಗಿ ಅವಕಾಶ ಸಿಕ್ಕಾಗ ತಮ್ಮ ದುಷ್ಟ ಪ್ರಭಾವ ಮತ್ತು ಆತ್ಮನನ್ನು ಪ್ರಯೋಗಿಸುತ್ತಿರುತ್ತಾರೆ**. ಆದಾಮನಿಂದ ಪತನಗೊಂಡ ಮಾನವ ಪ್ರಪಂಚವು ಪಾಪಕ್ಕೆ ದಾಸರಾಗಿದ್ದಾರೆ ; ಕೆಲವರು ಪಾಪದಲ್ಲಿ ಸಂತೋಷಿಸುವ ಸಲುವಾಗಿಯೇ ಪಾಪ ಮಾಡುತ್ತಾರೆ. ಮತ್ತೆ ಕೆಲವರು ಮನಸ್ಸಿಲ್ಲದೆ. ಅವರಲ್ಲಿ **"ದೇವರ ಮೇಲೆ ಭಾವನೆ"** ಇದ್ದರೂ ವಿರೋಧಿಯಿಂದ ಕಟ್ಟುಹಾಕಲ್ಪಟ್ಟವರೂ ಮತ್ತು ಕೆಡುಕಿನ ಆತ್ಮನಿಂದ ನಿಯಂತ್ರಿಸಲ್ಪಡುವವರೂ ಆಗಿದ್ದಾರೆ.

ಮಾನವ ಜಾತಿಯು – ಮಾನವರ ಮನಸ್ಸು ಅಥವಾ **"ಹೃದಯಗಳು"** ಒಂದು ರೀತಿಯ ರಣರಂಗವಾಗಿದ್ದು ಪ್ರಕಾಶ, ಪ್ರೀತಿ, ನ್ಯಾಯ, ಸತ್ಯ, ಪವಿತ್ರತೆ ಇವುಗಳಿಂದ ಒಡಗೂಡಿದ ಪವಿತ್ರಾತ್ಮನು, ಯೆಹೋವನ ಆತ್ಮವು, ವಿಮೋಚಕನಾದ ಆತನ ಮಗನ ಆತ್ಮವು, ಪಾಪ, ಅಂಧಕಾರ, ಅಸತ್ಯ, ಅಸೂಯೆ, ಹೊಟ್ಟೆಕಿಚ್ಚು ಇವುಗಳಿಂದೊಡಗೂಡಿದ ಸೈತಾನನ ದುರಾತ್ಮದೊಡನೆ ಕಾದಾಡುವುದು. ನಮ್ಮ ಆದಿ ತಂದೆತಾಯಿಗಳ ಪಾಪದಲ್ಲಿ ಮಾರಲ್ಪಟ್ಟವರಾದ ಮಾನವ ಕುಟುಂಬವು ತಮ್ಮ ದೌರ್ಬಲ್ಯಗಳ ಮೂಲಕ, ವಂಶಪಾರಂಪರ್ಯವಾದ ಬಲಹೀನತೆಗಳಿಂದ **"ಪಾಪದ ದಾಸ/ದಾಸಿ"**ಯರಾಗಿದ್ದಾರೆ. (ರೋಮಾ. 5:12, 21; 6:16–23; 7:14; 8:20,21 ಇವುಗಳನ್ನು ನೋಡಿರಿ). ಈ ರೀತಿಯ ವಶಪಡಿಸಿಕೊಂಡ ಸ್ಥಿತಿಯಲ್ಲಿ ಅವರುಗಳು ಪ್ರಸ್ತುತ ದುಷ್ಟ ಪ್ರಪಂಚದ (ಸ್ಥಿತಿಯು) ದೇವರಿಂದ (ಅಧಿಪತಿಯಿಂದ) ಬಂಧಿಸಲ್ಪಟ್ಟಿದ್ದಾರೆ.

ಆತನು ಅವರ ಮನಸ್ಸಿನಲ್ಲಿ **"ಕೆಟ್ಟದ್ದನ್ನು ಒಳ್ಳೆಯದೆಂದೂ, ಒಳ್ಳೇದ್ದನ್ನು ಕೆಟ್ಟವುಗಳೆಂದೂ ಬೋಧಿಸಿ, ಕತ್ತಲೆಯನ್ನು ಬೆಳಕೆಂದೂ, ಬೆಳಕನ್ನು ಕತ್ತಲೆಯೆಂದು ಸಾಧಿಸಿ, ಕಹಿಯು ಸಿಹಿ, ಸಿಹಿಯು ಕಹಿ ಎಂದು ಸ್ಥಾಪಿಸುತ್ತಾನೆ"** (ಯೆಶಾಯ 5:21 ; 2 ಕೊರಿಂಥ 4:4, ಎಫೆಸ 6:12; ಇವುಗಳನ್ನು ಸಹಾ ನೋಡಿರಿ), ಈ ರೀತಿಯಲ್ಲಿ ಆತನು ಹೆಚ್ಚಾದ ಜನರನ್ನು ಮಾರ್ಗ ತಪ್ಪಿಸಿ ಅವರುಗಳು ಸುಲಭವಾಗಿ ಕೆಟ್ಟವುಗಳನ್ನು ಮಾಡುವಂತೆಯೂ, ಒಳ್ಳೆಯವುಗಳನ್ನು ಮಾಡಲು ಅವರಿಗೆ ಕಷ್ಟವಾಗುವಂತೆಯೂ ಮಾಡಿಬಿಡುತ್ತಾನೆ. ಈ ರೀತಿಯಲ್ಲಿ ಆತನು ಪ್ರಸ್ತುತ ಕಾಲದ ಎಲ್ಲಾ ಅನುಕೂಲಗಳನ್ನು ಕೆಟ್ಟದರ ಕಡೆಗೆ ಓರಣವಾಗಿರಿಸಿ ಈ ಲೋಕದ ಆತ್ಮವಾಗಿರುವ ಆತನ ಅಪವಿತ್ರ ಆತ್ಮಕ್ಕೆ ಒಗ್ಗಿಕೊಳ್ಳದ ಹೊರತು ಅವುಗಳನ್ನು ಪಡಕೊಳ್ಳಲು ಅಸಾಧ್ಯವನ್ನಾಗಿ ಮಾಡುತ್ತಾನೆ. ಮೊದಲಿಗೆ ಆತನು ಜನಸಮೂಹದ ಸಾಮಾನ್ಯ ನಿಯಂತ್ರಣವನ್ನು ಅವರ ಅಜ್ಞಾನದ ದೆಸೆಯಿಂದ ಪಡಕೊಳ್ಳುತ್ತಾನೆ. ಮತ್ತು ಎರಡನೆಯದಾಗಿ ಹೆಚ್ಚು ಬುದ್ಧಿವಂತರನ್ನು ಅವರಲ್ಲಿ ಅಹಂಕಾರ, ಸ್ವಾರ್ಥತೆ ಮುಂತಾದವುಗಳನ್ನು ಉಂಟುಮಾಡುವುದರ ಮೂಲಕ ನಿಯಂತ್ರಿಸುತ್ತಾನೆ.

---

* Zion's Watch Tower, Aug 1 1894

** Spiritualism - Ancient and Modern ಎಂಬ ಅಧ್ಯಾಯವನ್ನು ನೋಡಿರಿ

ನಮ್ಮ ಕರ್ತನ ಮೊದಲನೆಯ ಬರೋಣದವರೆಗೆ ಕದನವು ಇನ್ನೂ ಪ್ರಾರಂಭವಾಗಲಿಲ್ಲ; ಸತ್ಯದ ಆತ್ಮನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲೆಯೂ, ನಂತರದಲ್ಲಿ ಪಂಚಾಶತ್ತಮ ದಿನದಂದು ಆತನ ಸಭೆಯ ಮೇಲೆಯೂ ಇಳಿದು ಬಂತು* ನಮ್ಮ ಕರ್ತನಾದ ಯೇಸುಕ್ರಿಸ್ತನು ದೇವರಾತ್ಮ ಭರಿತನಾಗಿ, **"ಈ ಲೋಕದ ಬೆಳಕನ್ನಾಗಿ"** ಆತನನ್ನು ಮಾಡಿದ ಸತ್ಯ ಪ್ರಕಾಶವೆಂಬ ಬೆಳಕನ್ನು ಚೆಲ್ಲುವವನಾಗಿ ಈ ಲೋಕದಲ್ಲಿ ಕಾಣಿಸಿಕೊಂಡಾಗ ಲೋಕವು ಅಂಧಕಾರಮಯವಾಗಿತ್ತು. ಆ ಕ್ಷಣದಲ್ಲಿಯೇ ಕದನವು ಆರಂಭವಾಯಿತು; ಪಂಚಾಶತ್ತಮ ಕಾಲದಿಂದ ಸತ್ಯವಾದ ಬೆಳಕು, ಪವಿತ್ರ ಆತ್ಮವು ಹೆಸರಿನ ಕ್ರೈಸ್ತ ಸಭೆಯವರಿಂದ ಪ್ರತಿನಿಧಿಸಲ್ಪಡಲಿಲ್ಲ. ಆದರೆ ಅದು ಕ್ರಿಸ್ತನ ದೇಹದ ನಿಜವಾದ ಅಂಗದವರಿಂದ ಮಾತ್ರವೇ ಪತಿನಿಧಿಸಲ್ಪಟ್ಟಿತು. ತಮ್ಮ ಶಿರಸ್ಸಿನ (ಮುಖ್ಯಸ್ಥನಾದ) ಕ್ರಿಸ್ತನಿಂದ ಪವಿತ್ರಾತ್ಮ ಹೊಂದಿದವರು. ಕದನವೂ ಕೂಡಲೇ ಆರಂಭಗೊಳ್ಳಲಿಲ್ಲ. ಯಾಕೆಂದರೆ, ಮಾನವ ಜಾತಿಯ (ಎಲ್ಲರೂ ಪಾಪಿಗಳಾಗಿದ್ದು) ಯಾರೊಬ್ಬರೂ ಪವಿತ್ರಾತ್ಮನ ವಾಹಿನಿಯೂ ಆತನ ಪ್ರತಿನಿಧಿಯೂ, ನೀತಿವಂತಿಕೆ ಮತ್ತು ಸತ್ಯದ ರಾಯಭಾರಿಯೂ, ಶಿಲುಬೆಯ ಸೈನಿಕನೂ ಆಗಲು ಸಾಧ್ಯವಿದ್ದಿಲ್ಲ. ಪವಿತ್ರಾತ್ಮನು ಯಾವುದಾದರೂ ನಿಯೋಗವನ್ನು ಕೈಗೊಳ್ಳಬೇಕಾದರೆ, ಕಾದಾಡಲು ಏನಾದರೂ ಇದ್ದಲ್ಲಿ ಮೊದಲಿಗೆ ಮಾನವ **ಪಾಪ ಪ್ರಾಯಶ್ಚಿತ್ತ**ವಾಗಲೇ ಬೇಕಿತ್ತು. ಮಾನವ ಜಾತಿಗೆ ಅವರು ನೀತಿವಂತಿಕೆಯ ಶತ್ರುಗಳಾಗಿ ಕಂಡುಬಂದುದರಿಂದ ಮರಣ ಶಿಕ್ಷೆಯು, ಶಾಶ್ವತವಾದ ನಾಶನವು ವಿಧಿಸಲ್ಪಟ್ಟಿದ್ದು; ದಂಡನೆಯಾದವರಿಗೆ ಕಾದಾಟವೇತಕೆ? ಅವರ ಪ್ರಯತ್ನಕ್ಕೆ ಯಾವುದೇ ಫಲ ನಿರೀಕ್ಷೆ ಇಲ್ಲವಾದರೆ ಅವರನ್ನು ನೀತಿವಂತಿಕೆಗೆ ಪ್ರೋತ್ಸಾಹಿಸುವುದಾದರೂ ಯಾಕೆ? ಆದಕಾರಣ ಯುಕ್ತವಾದ ರೀತಿಯಲ್ಲಿ ಈಡುಬಲಿಯು ಮೊದಲು ಬಂತು. ಈ **ಈಡುಬಲಿ**ಯು ತಂದೆಯಿಂದ ಅಂಗೀಕಾರವಾದುದರ ಫಲವಾಗಿ, ಕ್ರಿಸ್ತನ ಮೂಲಕ ದೇವರು ಆತನ ಮಕ್ಕಳನ್ನಾಗಿ ಪಡಕೊಂಡವರಿಗೆ ಪವಿತ್ರಾತ್ಮವು ದಯಪಾಲಿಸಲ್ಪಟ್ಟಿತು.

ಆದರೆ, ಒಬ್ಬರು ಗಮನಿಸಬಹುದಾದುದೇನೆಂದರೆ, ಕಾದಾಟವು ಪ್ರಾರಂಭವಾದಾಗಿನಿಂದ ಅದು ಪವಿತ್ರಾತ್ಮನ ವಿರುದ್ಧವಾಗಿದ್ದು ಮತ್ತು ಅವುಗಳು ದುರಾತ್ಮನ ಪರವಾಗಿಯೇ ಅವೆ; ಈ ಕದನವು ಹತ್ತೊಂಬತ್ತು ಶತಮಾನಗಳಿಗೂ ಹೆಚ್ಚುಕಾಲದಿಂದ ಪ್ರಗತಿಯಲ್ಲಿದ್ದು ಇಂದು ಜನಸಂಖ್ಯೆಯ ಸ್ವಾಭಾವಿಕ ಹೆಚ್ಚಳದ ಕಾರಣ ಪಾಪದ ದಾಸರುಗಳ ಸಂಖ್ಯೆಯಲ್ಲಿಯೂ ಕದನದ ಪ್ರಾರಂಭದಲ್ಲಿದ್ದುದಕ್ಕಿಂತ ಭಾರಿ ಹೆಚ್ಚಳವಾಗಿದ್ದು ಇದು ನಾಮಾಂಕಿತ ಕ್ರೈಸ್ತರಿಗಿಂತಲೂ ವಿಪರೀತವಾಗಿ ಹೆಚ್ಚುತ್ತಿದೆ.

ಇದಕ್ಕೂ ಹೆಚ್ಚಾಗಿ, ದುರಾತ್ಮನು, ದ್ವೇಷ ಹಾಗೂ ತಪ್ಪುಗಳು ನಮ್ಮ ಕರ್ತನಲ್ಲಿದ್ದ ಪವಿತ್ರಾತ್ಮನ ವಿರುದ್ಧವಾಗಿ ಆತನನ್ನು ಕ್ರೂಜೆಗೇರಿಸುವಷ್ಟರ ಮಟ್ಟಿಗೆ ತನ್ನ ಜಯಭೇರಿಗಳಿಸಿತು. ಅದೇ ರೀತಿಯಲ್ಲಿ ಅದು ಕ್ರಿಸ್ತನ ದೇಹದ ನಿಷ್ಠಾವಂತ ಅಂಗಗಳ ಮೇಲೆಯೂ ಅವರನ್ನು ತಪ್ಪಾಗಿ ನಿರೂಪಿಸಿ, ನಿಂದನೆ ಮಾಡಿ, ಅವರೊಂದಿಗೆ ಸಮಯ, ಸ್ಥಳ ಮತ್ತು ಪರಿಸ್ಥಿತಿಗಳಿಗನುಸಾರವಾಗಿ ವಿವಿಧ ರೀತಿಯಲ್ಲಿ ಕೆಟ್ಟದಾಗಿ ವರ್ತಿಸಿದೆ. ಪವಿತ್ರಾತ್ಮನ ಮತ್ತು ಆತನ ನಿಷ್ಠಾವಂತ ಸೇವಕರುಗಳ ಮೇಲೆ ದುರಾತ್ಮನ ಮತ್ತು ಆತನ ಸೇವಕರುಗಳ ಈ ರೀತಿಯ ಆಕ್ರಮಣಗಳ ಉದ್ದೇಶವು ಯಾವಾಗಲೂ ಒಂದೇ ಆಗಿದೆ – ಸತ್ಯದ ಆತ್ಮನ ಪ್ರಭಾವವನ್ನು ಒಳಸಂಚಿನಿಂದ ಕೆಡಿಸುವುದು, ಪವಿತ್ರರನ್ನು ಅಪವಿತ್ರರಂತೆ ಕಾಣುವಂತೆ ಮಾಡುವುದು. ನಿಷ್ಕಲ್ಮಷರೂ ಮತ್ತು ನಿಸ್ವಾರ್ಥಿಗಳನ್ನು ಕಲ್ಮಷಿಗಳೂ, ಸ್ವಾರ್ಥಿಗಳೂ ಆಗಿ ಕಾಣುವಂತೆ ಮಾಡುವುದು, ಬೆಳಕಿನ ಬದಲು ಕತ್ತಲೆಯನ್ನುಂಟು ಮಾಡುವುದು. ಅಪವಿತ್ರರಾದ ದಾಸರುಗಳು ತಾವು ಏನು ಮಾಡುತ್ತಿದ್ದೇವೆಂಬುದನ್ನು ಎಂದಿಗೂ ಅರಿಯರು ; ಅವರುಗಳು ದುರಾತ್ಮನೊಂದಿಗೆ, ದ್ವೇಷ ಮತ್ತು ಹೊಟ್ಟೆಕಿಚ್ಚಿನ, ಕಚ್ಚಾಟದ ಆತ್ಮದೊಂದಿಗೆ ಪ್ರೇರೇಪಿಸಲ್ಪಟ್ಟವರಾಗಿದ್ದಾರೆ. ಇವುಗಳು ಅವರನ್ನು ಕುರುಡರನ್ನಾಗಿ ಮಾಡಿಬಿಡುತ್ತವೆ. ಹೀಗಾಗಿ ಅವರು **"ತಾವು ಏನು ಮಾಡುತ್ತೇವೆಂಬುದನ್ನು ಅರಿಯರು"**. ಹೀಗಾಗಿ ಅವರು ಅಗಾಗ್ಗೆ ನಿಶ್ಚಯವಾಗಿ ತಾವು **"ದೇವರ ಸೇವೆ"**ಯನ್ನೇ ಮಾಡುತ್ತಿದ್ದೇವೆಂದು ತಪ್ಪಾಗಿ ಭಾವಿಸಿಕೊಳ್ಳುತ್ತಾರೆ. ಪವಿತ್ರ ಆತ್ಮನಿಗೆ ಈ ರೀತಿಯ ಸೋಲು ಏತಕ್ಕಾಗಿ? ಇದು ಯಾವಾಗಲೂ ಇದೇ ರೀತಿಯಲ್ಲಿ ಇರುತ್ತದೆಯೋ?.

ನಾವು ಉತ್ತರಿಸುವುದೇನೆಂದರೆ, ಪವಿತ್ರಾತ್ಮನ ಈ ಸೋಲು ಕೇವಲ ಸೋಲಿನಂತೆ ತೋರುತ್ತದೆಯೇ ಹೊರತು ಅದು ನಿಜವಾದ ಸೋಲಲ್ಲ. ನಿಜವಾಗಿಯೂ ಪವಿತ್ರಾತ್ಮನು ಕದನವು ಪ್ರಾರಂಭವಾದಾಗಿನಿಂದಲೂ ತನ್ನ ಜಯಭೇರಿಯನ್ನು ಭಾರಿಸುತ್ತಲೇ ಇದ್ದಾನೆ. ಈ ಸುವಾರ್ತಾ ಯುಗದಲ್ಲಿ ಅದರ ದ್ವಿಮುಖ ನಿಯೋಗವು ಒಳ್ಳೆಯ ರೀತಿಯಲ್ಲಿ ನೆರವೇರಿವೆ.

* ನೀತಿವಂತಿಕೆ ಎಂಬ ನಿಯಮದ ಕದನವು ಪುಟ್ಟ ದೇಶವಾದ ಇಸ್ರೇಲಿಗೆ ಸೀಮಿತಗೊಂಡಿತ್ತು. "ಧರ್ಮಶಾಸ್ತ್ರವು ಯಾವುದನ್ನೂ ಸಮರ್ಪಕ ಗೊಳಿಸುವುದಿಲ್ಲ" ಎಂಬುದನ್ನು ತಿಳಿದಿದ್ದ ದೇವರು ಪತನಗೊಂಡ ಮಾನವ ಕುಲದವರಲ್ಲಿ ಯಾರೂ ಆ ಕದನದಲ್ಲಿ ಗೆಲ್ಲಲಾರರು ಮತ್ತು ಯಾರಾದರೂ ಗೆಲ್ಲುತ್ತಾರೆಂಬುದನ್ನು ನಿರೀಕ್ಷಿಸಲಾಗದು ಎಂಬುದನ್ನು ಸಹಾ ಮುಂಗಂಡಿದ್ದನು. ಧರ್ಮ ಶಾಸ್ತ್ರವನ್ನು ಯಥಾವತ್ತಾಗಿ ಪಾಲಿಸುವ ಏಕೈಕನಾದ ಯೇಸುಕ್ರಿಸ್ತನನ್ನು ಪ್ರಕಟಿಸಿ ಆತನು ಮಾತ್ರವೇ, ದೇವರ ಕೃಪೆಯ ವಾಹಿನಿಯಂತೆ ಸಂಭವನೀಯವಾಗಿ ಜನರನ್ನು ಶಿಸ್ತುಗೊಳಿಸಬೇಕು ಮತ್ತು ಅವರಲ್ಲಿ "ಜನಶೇಷವನ್ನು" ಕ್ರಿಸ್ತನ ಕಡೆಗೆ ಗುರಿಯಿಟ್ಟು ದೈವೇಚ್ಛೆಯ ಮತ್ತು ಅದರ ತಿಕ್ಕಾಟಗಳನ್ನು ಎದುರಿಸಲು ಸಿದ್ಧರಾಗುತ್ತಾರೆ ಎಂಬುದನ್ನು ಆತನು ಮೊದಲೇ ತಿಳಿದದ್ದನು.

(1) ಪ್ರತಿಷ್ಠಿತೆಯ ಬಗ್ಗೆ ಮತ್ತು ದೇವರ ಬಗ್ಗೆ ಹಾಗೂ ಆತನ ನೀತಿವಂತಿಕೆಗಳ ಬಗ್ಗೆ ಇರುವ ಉತ್ಕಂಠತೆಗಳಿಗೆ ಅನುಗುಣವಾಗಿ ಮತ್ತು ಈ ಲೋಕದಲ್ಲಿ ಅವರ ಬಗ್ಗೆ ದುರಾತ್ಮನ ಪ್ರಭುತ್ವ ಮತ್ತು ಶಕ್ತಿ ಇವುಗಳ ಕಾರಣ ದೇವಜನರಾಗಿರುವವರ ಗುಣಲಕ್ಷಣಗಳನ್ನು ಇವುಗಳು ಸಾಬೀತುಪಡಿಸುವವುಗಳಾಗಿವೆ. ಇವುಗಳು ಪ್ರಸ್ತುತ ಕಾಲದಲ್ಲಿ ಯಾರಾರು ದೇವರಿಗೆ ತಕ್ಕಂತೆ ಜೀವಿಸುತ್ತಾರೋ ಅವರು ಹಿಂಸೆಗೆ ತುತ್ತಾಗಲೇ ಬೇಕಾಗುತ್ತದೆಂದು ಹೇಳುತ್ತವೆ – ಅವರುಗಳು ತಮ್ಮ ವಿರುದ್ಧವಾಗಿ "ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೋರಿಸಿದರೆ" ಆಲಿಸಲು ಸಿದ್ಧರಿರಬೇಕು ಮತ್ತು ಅವುಗಳನ್ನು ಅವರ ಒಡೆಯನು ಮಾಡಿದಂತೆ ಶಾಂತರೀತಿಯಿಂದ ತೆಗೆದುಕೊಳ್ಳಬೇಕು ಮತ್ತು ಕರ್ತನಿಗೆ ಮತ್ತು ಆತನ ಉದ್ದೇಶಗಳಿಗೆ ಯಾವುದೇ ಬೆಲೆ ತೆತ್ತಾದರೂ ಪ್ರಾಮಾಣಿಕತೆಯಿಂದ ಮುಂದುವರೆಯಬೇಕು ಮತ್ತು ಅವರ ಈ ಲೋಕದ ಜೀವಿತವನ್ನು ಹೆಚ್ಚಾಗಿ ಲೆಖ್ಖಕ್ಕೆ ತೆಗೆದುಕೊಳ್ಳಬಾರದು – 2 ತಿಮೋ 3:12; ಮತ್ತಾಯ 5:11; 1 ಪೇತ್ರ 2:23; ಅ.ಕೃ. 20:24.

(2) ದೇವಜನರಲ್ಲಿ ಪವಿತ್ರತೆಯೆಂಬ ಆತ್ಮನ ಬೆಳಕು ಜನರ ಮುಂದೆ ಪ್ರಕಾಶಿಸಬೇಕು. ಇದು ವಿರೋಧಿಯ ಹಠಮಾರಿ ಸ್ವಭಾವದಿಂದ ಇನ್ನೂ ಸಂಪೂರ್ಣ ಕುರುಡರಾಗದಿರುವವರೆಲ್ಲರನ್ನೂ ಆಕರ್ಷಿಸುವುದಾಗಿದೆ. ಈ ಪ್ರಕಾಶವು ಪಾಪದ ಅಂಧ'ಕಾರದೊಳಗೆ ಆಕ್ಷೇಪಣಾಪೂರ್ವಕವಾಗಿ ಒಳನುಗ್ಗಿ ಬೆಳಗಿಸಬೇಕು ಮತ್ತು ಎಲ್ಲಾ ಅನೀತಿವಂತಿಕೆಯ ವಿರುದ್ಧವಾಗಿ ಸಾಕ್ಷಿ ಹೇಳುವಂತಾಗಬೇಕು. ಈ ರೀತಿಯಲ್ಲಿ ಅದು ಕುರುಡರಾಗಿರುವವರ ಮನಸ್ಸಾಕ್ಷಿಯನ್ನು ಸಹಾ ತಟ್ಟಿ ಅವರುಗಳು ದೇವರ ಬಗ್ಗೆ ಮತ್ತು ನಿರೀಕ್ಷಿತ ಮುಂಬರುವ ದಿನಗಳಲ್ಲಿ ತಮಗಿರುವ ಜವಾಬ್ದಾರಿಗಳನ್ನು ಗ್ರಹಿಸಿಕೊಳ್ಳುವಂತಾಗಬೇಕು. ಈ ರೀತಿಯಲ್ಲಿ ನಮ್ಮ ಕರ್ತನು ತನ್ನ ಅನುಯಾಯಿಗಳಿಗೆ ಅವರುಗಳು ಪವಿತ್ರಾತ್ಮನನ್ನು ಹೊಂದಿಕೊಂಡ ಮೇಲೆ ಎಲ್ಲಾ ಜನಾಂಗಗಳಲ್ಲಿ ಸತ್ಯಕ್ಕೆ ಸಾಕ್ಷಿಗಳಾಗಿರಬೇಕೆಂದು ಬೋಧಿಸಿದ್ದಾನೆ – ಜನರು ಇದನ್ನು ಕೇಳಲಿ ಇಲ್ಲವೆ ಸಹಿಸಿಕೊಳ್ಳಲಿ.

ಪವಿತ್ರಾತ್ಮವು ತಾನು ಕಳುಹಿಸಿಕೊಟ್ಟ ಎರಡು ಉದ್ದೇಶಗಳಲ್ಲಿಯೂ ಜಯಭೇರಿ ಭಾರಿಸಿದೆ. ಅದು ಒಂದು ನಿಷ್ಠಾವಂತ 'ಚಿಕ್ಕ ಹಿಂಡನ್ನು' ಆರಿಸಿಕೊಂಡಿದೆ. ಅವರುಗಳು ಜಯಶಾಲಿಗಳಾಗಿದ್ದು ನೀತಿವಂತಿಕೆಯನ್ನು ಹಿಂಬಾಲಿಸುವವರಾಗಿದ್ದಾರೆ. ಕ್ರಿಸ್ತ ಯೇಸುವು ಅವರ ನಾಯಕನಾಗಿದ್ದು ಅವರುಗಳು ಆತನ ಶಿಲುಬೆಯ ಪ್ರಮಾಣಿಕ ಸೈನಿಕ ತಂಡದವರಾಗಿದ್ದಾರೆ. ಅವರುಗಳೆಲ್ಲರೂ 'ಮರಣದ ಪರ್ಯಂತ'ದ ಪ್ರತಿಷ್ಠೆ ಹೊಂದಿದ್ದಾರೆ. ಅದರ ಕಡೆಯ ಸದಸ್ಯರುಗಳು ಪೂರ್ಣ ಪರೀಕ್ಷೆಗೆ ಒಳಪಟ್ಟು ನೀತಿವಂತಿಕೆಯ ಸಲುವಾಗಿ ಶ್ರಮೆಯನ್ನನ್ನುಭವಿಸಿದ ಕೂಡಲೇ ಅವರುಗಳಿಗೆ ದೇವರ ರಾಜ್ಯದ ಪ್ರತಿಫಲವನ್ನು ನೀಡಲಾಗುವುದು. ಅದು ಈ ಲೋಕಕ್ಕೆ ಸಾಕ್ಷಿ ಹೇಳುವುದರಲ್ಲಿಯೂ ಜಯಶೀಲವಾಗಿದೆ ಈ ಸಾಕ್ಷಿಯ ಪರಿಣಾಮವು ಪಾಪಮಯವಾದ ಈ ಲೋಕವನ್ನು ನೀತಿವಂತಿಕೆಯ ಬಗ್ಗೆ ಮತ್ತು ಬರಲಿರುವ ನೀತಿಯುತ ನ್ಯಾಯತೀರ್ಪಿನ ದಿನದ ಬಗ್ಗೆ ಮನದಟ್ಟು ಮಾಡುವುದಾಗಿದೆ ಎಂಬುದಾಗಿ ನಮ್ಮ ಕರ್ತನು ಮುಂತಿಳಿಸಿದ್ದಾನೆ. ಆ ದಿನದಲ್ಲಿ ಪ್ರಸ್ತುತ ಜೀವನದ ಕೆಟ್ಟ ಕಾರ್ಯಗಳು ಪಾಪಿಗಳು ಅನುಭವಿಸಿದ ಬೆಳಕಿನ ಮಟ್ಟಕ್ಕನುಸಾರವಾಗಿ ಪ್ರತೀಕಾರವನ್ನು ಹೊಂದಿಕೊಳ್ಳುತ್ತವೆ.

ಈ ಸಾಕ್ಷಿಯು ದೂರಕ್ಕೂ ಹತ್ತಿರಕ್ಕೂ ಹರಡಿದೆ. ಇಂದಿನ ದಿನದಲ್ಲಿ ಈ ಪ್ರಪಂಚವು ಸಮಗ್ರವಾಗಿ ಮೂರು ಸಂಗತಿಗಳನ್ನು ಗ್ರಹಿಸುತ್ತದೆ. ಇವುಗಳನ್ನು ಪವಿತ್ರತೆಯ ಆತ್ಮನು ಅವರ ಮುಂದೆ ಇಟ್ಟಿರುತ್ತಾನೆ. ಅವುಗಳೆಂದರೆ – ಪಾಪ, ನೀತಿವಂತಿಕೆ ಮತ್ತು ನ್ಯಾಯತೀರ್ಪು. ನಿಜವಾಗಿಯೂ ಈ ಲೋಕಕ್ಕೆ ನೀತಿವಂತಿಕೆಯ ಬಗ್ಗೆಯಾಗಲೀ, ಪಾಪದ ಬಗ್ಗೆಯಾಗಲೀ ಸ್ಪಷ್ಟವಾದ ಮತ್ತು ಸರಿಯಾದ ಪರಿಕಲ್ಪನೆಗಳು ಇಲ್ಲ ಅಥವಾ ಅದು ಬರಲಿರುವ ನ್ಯಾಯತೀರ್ಪಿನ ದಿನದ ಅಥವಾ ಸಹಸ್ರ ವರ್ಷ ದಿನದ ಲಕ್ಷಣವನ್ನು ಅರ್ಥಮಾಡಿಕೊಂಡಿ ರುವುದೂ ಇಲ್ಲ; ಅಥವಾ ಈ ಲೋಕವು ಈ ಯುಗದಲ್ಲಿ ಸಭೆಯ ಕರೆ ಏನೆಂಬುದನ್ನೂ ಅರ್ಥಮಾಡಿ ಕೊಂಡಿರುವುದಿಲ್ಲ. ಇಂದು ಲೋಕದ ಹಿತಾಸಕ್ತಿಗಳನ್ನು ಇಚ್ಛಾಪೂರ್ವಕವಾಗಿ ತ್ಯಾಗ ಮಾಡುವುದರ ಮೂಲಕ ಮತ್ತು ವಿಮೋಚಕನ ಹೆಜ್ಜೆಜಾಡಿನಲ್ಲಿ ನಡೆಯುವುದರ ಮೂಲಕ ಈ ಲೋಕದೊಂದಿಗೆ ನ್ಯಾಯತೀರ್ಪಿನಿಂದ ತಪ್ಪಿಸಿಕೊಂಡು ಆ ತೀರ್ಪಿನ ದಿನದಲ್ಲಿ ಅದರ ನ್ಯಾಯಾಧಿಪತಿ ಗಳಾಗುವುದನ್ನಾದರೂ ಅದು ತಿಳಿದಿಲ್ಲ. ಲೋಕದವರು ಈ ನಿರ್ಧಿಷ್ಟವಾದವುಗಳನ್ನು ಅರಿತುಕೊಳ್ಳುವ ಅವಶ್ಯಕತೆ ಇರುವುದಿಲ್ಲ. – ಅವುಗಳ ಬಗ್ಗೆ ಅವರು ಚಿಂತಿಸುವುದೂ ಇಲ್ಲ. ಇವುಗಳು "ದೇವರ ಆಗಾಧವಾದ ಸಂಗತಿ"ಗಳಿಗೆ ಸೇರಿದವುಗಳಾಗಿವೆ. ನೀತಿವಂತರಿಗೆ ನೀಡಿದ ದೇವರ ಕರೆಗೆ ಹೃತ್ಪೂರ್ವಕವಾಗಿ ವಿಧೇಯರಾಗಿ ತಮ್ಮನ್ನು ಪ್ರತಿಷ್ಠೆಪಡಿಸಿ ಕೊಂಡವರಾಗಿ ತಂದೆಯ ಆತ್ಮವನ್ನು ಹೊಂದಿಕೊಳ್ಳದ ಹೊರತು ಯಾರೂ ಇದನ್ನು ಮೆಚ್ಚಿಕೊಳ್ಳುವುದಿಲ್ಲ. ದೇವರ ಪುತ್ರರಾಗಿ ಈ ರೀತಿಯಾಗಿ ದೇವರ ಯೋಜನೆಯ ನಿಖರವಾದ ವಿವರಗಳ ಬಗ್ಗೆ ಪರಿಚಿತರಾಗುತ್ತಾರೆ – 1 ಕೊರಿಂಥ 2:10,11.

ಇದು ಯಾವಾಗಲೂ ಇದೇ ರೀತಿಯುದಾಗಿರುತ್ತದೋ? ಎಂಬ ಪ್ರಶ್ನೆಗೆ ನಾವು 'ಇಲ್ಲ'ವೆಂದು ಉತ್ತರಿಸುತ್ತೇವೆ. ಈ ಲೋಕವು ಕ್ರಿಸ್ತನೊಂದಿಗೆ ಜೊತೆ

ವಾರಸುದಾರರೆಂದು ಕರೆಯಲ್ಪಡುವ "ಚಿಕ್ಕ ಹಿಂಡನ್ನು" ವಿಕಾಸಗೊಂಡ ಕೂಡಲೇ, ಅದು ಸ್ಥಗಿತಗೊಳ್ಳುತ್ತದೆ. ಯೆಹೋವನ ಪವಿತ್ರ ಆತ್ಮನ ಅಥವಾ ಶಕ್ತಿಯ ಮುಂದಿನ ಕಾರ್ಯಾಚರಣೆಯು ಆ ರಾಜ್ಯದ ಸ್ಥಾಪನೆಯಾಗಿದೆ : ಮತ್ತು ಅದರ ಸ್ಥಾಪನೆಯೊಂದಿಗೆ ಪವಿತ್ರಾತ್ಮನ ಕಾರ್ಯಾಚರಣೆಗಳು ಆ ರಾಜ್ಯದ ಆ ದೆಸೆಯಲ್ಲಿರುತ್ತವೆ – ಲೋಕದಲ್ಲಿ ನ್ಯಾಯತೀರ್ಪು ಮತ್ತು ನ್ಯಾಯವನ್ನು ಸ್ಥಾಪಿಸುವುದು. ಅದು ನ್ಯಾಯತೀರ್ಪನ್ನು ಒಂದೇ ಪಂಕ್ತಿಯಲ್ಲಿಯೂ ಮತ್ತು ನ್ಯಾಯವನ್ನು ಮಟ್ಟಗೋಲನ್ನಾಗಿಯೂ ಇಡುತ್ತದೆ. ಎಲ್ಲಾ ವಿಧವಾದ ಸುಳ್ಳುಗಾರಿಕೆ ಮತ್ತು ವಂಚನೆಗಳು ಸತ್ಯದ ಸ್ಪಷ್ಟವಾದ ಜ್ಞಾನಕ್ಕೆ ಎಡೆಮಾಡಿಕೊಡುತ್ತವೆ. "ಬರಲಿರುವ ನ್ಯಾಯತೀರ್ಪಿನ ಬಗ್ಗೆ" ದೀರ್ಘವಾದ ಸಾಕ್ಷ್ಯವನ್ನು ನೀಡುವ ಬದಲು ಅದೂ ಆ ನ್ಯಾಯತೀರ್ಪು ಈಗಾಗಲೇ ಪ್ರಾರಂಭವಾಗಿದೆ ಮತ್ತು ಪ್ರತಿಯೊಂದು ಪಾಪವೂ ದಂಡನೆಯ ನಷ್ಟಪರಿಹಾರವನ್ನು ಪಡಕೊಳ್ಳುತ್ತದೆ ಎಂಬ ಸಾಕ್ಷಿ ಹೇಳುವುದಾಗಿದೆ. **"ಕಾಲಕ್ಕೆ ಮುಂಚೆ ಯಾವುದನ್ನೂ ನಿರ್ಣಯಿಸಬೇಡಿರಿ"** ಎಂದು ಸಭೆಗೆ ಸಾಕ್ಷಿಹೇಳುವ ಬದಲಾಗಿ ಅದು ಅವರುಗಳು ದೇವರ ಸಾಧನಗಳಾಗಿದ್ದು ಲೋಕದ ನ್ಯಾಯ ತೀರಿಸಲು ಮತ್ತು ನೀತಿಯುತ ತೀರ್ಪುನೀಡಲು ಅರ್ಹರಾಗಿದ್ದಾರೆ ಎಂದು ಸಾಕ್ಷಿ ಹೇಳುವುದಾಗಿದೆ. ದೇವರೊಂದಿಗೆ ಸಾಮರಸ್ಯದಲ್ಲಿದ್ದು ಆತನ ನೀತಿಯುತ ಮತ್ತು ಸತ್ಯದ ಆತ್ಮನನ್ನು ಹೊಂದಿಕೊಂಡಿದ್ದು ನೀತಿವಂತಿಕೆ ಸಲುವಾಗಿ ಶ್ರಮೆಪಡಲು ಅಗತ್ಯವಾದವರು ಅದರ ಬದಲಾಗಿ ಅವರುಗಳು ಕಿರೀಟ ಧರಿಸಿದ ರಾಜರುಗಳಂತೆ ಮತ್ತು ನೀತಿವಂತಿಕೆಯುಳ್ಳ ಯಾಜಕರುಗಳಂತೆ ಲೋಕದ ಮೇಲೆ ಆಡಳಿತ ನಡೆಸಲು ನಿಯೋಜಿತಗೊಳ್ಳುತ್ತಾರೆ ಮತ್ತು ಅದನ್ನು ಸಮರ್ಪಕತೆಗೆ ಪುನಃಸಂಧಾನಗೊಳಿಸಲು. ಮತ್ತೂ ನಮ್ಮ ಕರ್ತನ ಈಡುಬಲಿಯ ಮೂಲಕ ಸಂಪಾದಿಸಲ್ಪಟ್ಟ ಆಶೀರ್ವಾದ ದಾಯಕವಾದ ನ್ಯಾಯತೀರ್ಪಿನ ದಿನದ ಎಲ್ಲಾ ಅವಕಾಶಗಳನ್ನು ಇಚ್ಛಾಪೂರ್ವಕವಾಗಿ ತಿರಸ್ಕರಿಸುವವರ ಜೀವವನ್ನು ತುಂಡರಿಸಿ ಅವರನ್ನು ನಿತ್ಯ ನಾಶನಕ್ಕೆ ಗುರಿಪಡಿಸುವರು. ಈ ರೀತಿಯಲ್ಲಿ ಮಹೋನ್ನತನಾದ ಯೆಹೋವನು ಮತ್ತು ಆತನ ಪವಿತ್ರ ಆತ್ಮವು ಮತ್ತು ಅಂತಿಮ ವಿಜಯಕ್ಕೆ ಆತನೊಂದಿಗೆ ಜೊತೆಗೂಡುವವರು ಹಾಗೂ ಪಾಪ, ಸೈತಾನ ಮತ್ತು ಕೆಡುಕಿನ ಆತ್ಮವು ಸದಾ ಕಾಲಕ್ಕೂ ಇಲ್ಲವಾಗುವುವು. **"ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವುದಿಲ್ಲ"** ಪ್ರಕಟನೆ 22:3 ; ಯೆಶಾಯ 28:17;1 ಕೊರಿಂಥ 4:5; 6:2 ; ಅ,ಕೃ. 3:23 ; 2 ಥೆಸ. 1:9.

## ಸಂತರ ಮನದೊಳಗಿರುವ ಮತ್ತು ಹೊರಗಿರುವ ಆತ್ಮೀಕ ಹೋರಾಟಗಳು

## Spirit Fightings Without and Within The Saints

ನಾವು ಕಾದಾಟದ ಬಗ್ಗೆ ಒಟ್ಟಾರೆಯಾಗಿ ಪರಿಗಣಿಸಿದ್ದೇವೆ; ನಾವೀಗ ಅದರ ಪ್ರಸ್ತುತ ಅವಸ್ಥೆಗಳ ಬಗ್ಗೆ ಕ್ಷಣದರ್ಶನ ಮಾಡೋಣ. ಇದನ್ನು ಸಭೆಯ ತಿಕ್ಕಾಟವೆಂದು ಪರಿಗಣಿಸುವಾಗಲೂ ಇದೂ ಹೇಗೂ ಪಾಪದೊಡನೆ ಯಾವುದೇ ವ್ಯಕ್ತಿಗತ ತಿಕ್ಕಾಟಕ್ಕಿಂತ ಕಡಿಮೆಯಾದುದಲ್ಲ. ಸಭೆಯು ವಿಜಯಶಾಲಿಗಳಾಗಿ ಬರುವುದರಿಂದ, ಅದರಲ್ಲಿ ಕೇವಲ ವಿಜಯಶಾಲಿ ವ್ಯಕ್ತಿಗಳು ಮಾತ್ರ ಇರುತ್ತಾರೆ. ಸಭೆಯಲ್ಲಿನ ವಿಜಯವು ದುರಾತ್ಮಗಳು, ಅನೀತಿಗೆ ವಿರುದ್ಧವಾಗಿರುತ್ತದೆ. ದೇವರ ಪವಿತ್ರಾತ್ಮನ, ಶಕ್ತಿಯ ಮತ್ತು ಪ್ರಭಾವದ ವಿಜಯವಾಗಿರುವುದರಿಂದ ಅದೇ ರೀತಿಯಲ್ಲಿ ಒಬ್ಬ ಸಂತ ವ್ಯಕ್ತಿಯ ಬಗ್ಗೆಯೂ ಹಾಗೆಯೇ ಆಗಿದೆ.

ಹೆಚ್ಚಾದ ಕ್ರೈಸ್ತರು (ಹೆಸರಿಗೆ ಮಾತ್ರದ ಕ್ರೈಸ್ತರು, ತಮ್ಮನ್ನು 'ಆತ್ಮನ ಕುಸ್ತಿಪಟುಗಳು' 'ಪುಣ್ಯ ಶೀಲತೆಯುಳ್ಳವರು' ಎಂದು ಹೇಳಿಕೊಳ್ಳುವವರು ಮುಂತಾದವರು) ನಿಜವಾದ ಆತ್ಮನ ಕಾದಾಟಗಳ ಮತ್ತು ಅವುಗಳ ಜಯದ ಬಗ್ಗೆ ಬಹಳ ಕಡಿಮೆಯಾಗಿ ತಿಳಿದಿರುತ್ತಾರೆ. ಯಾಕೆಂದರೆ ಅವರಲ್ಲಿ ಹೆಚ್ಚಿನವರು ಸರಿಯಾದ ರೀತಿಯಲ್ಲಿ ಪ್ರತಿಷ್ಠೆ ಹೊಂದಿಕೊಂಡಿರುವವರಲ್ಲ ಮತ್ತು ಸತ್ಯದ ಆತ್ಮನನ್ನು ಎಂದೂ ಪಡಕೊಂಡವರಲ್ಲ. ಕೆಲವರು ತಮ್ಮನ್ನು ಒಂದು ಪಂಗಡಕ್ಕಷ್ಟೆ ಪ್ರತಿಷ್ಟೆಪಡಿಸಿ ಕೊಂಡಿರುತ್ತಾರೆ ಮತ್ತು ಆ ಪಂಗಡೀಯವಾದ ಪ್ರೀತಿಯನ್ನು ಮಾತ್ರವೇ ಹೊಂದಿರುತ್ತಾರೆ ಮತ್ತು ಆ ಪಂಗಡಕ್ಕೆ ಮಾತ್ರವೇ ಭಯಭಕ್ತಿಯುಳ್ಳವರಾಗಿರುತ್ತಾರೆ. ತಮ್ಮ ಸೇವೆ ಮತ್ತು ಸಮರ್ಪಣೆಗಳನ್ನು ಆ ಪಂಗಡಕ್ಕೆ ಮಾತ್ರವೇ ಮಾಡುವವರಾಗಿರುತ್ತಾರೆ. ಇತರರು ಒಂದು ಅಥವಾ ಸ್ವಲ್ಪ ಹೆಚ್ಚು ನೈತಿಕ ತತ್ವಗಳನ್ನು ಗ್ರಹಿಸಿಕೊಂಡಿರುತ್ತಾರೆ ಮತ್ತು ಆ ನೈತಿಕತೆಗಳಿಗೆ ಮಾತ್ರವೇ ತಮ್ಮನ್ನು ಪ್ರತಿಷ್ಟಿಸಿ ಕೊಂಡಿರುತ್ತಾರೆ ಮತ್ತು ಅವುಗಳನ್ನು ಎಂದಿಗೂ ಉಲ್ಲಂಘಿಸುವುದಿಲ್ಲ. ಇವರುಗಳು ನೈತಿಕತೆಯ ಆತ್ಮನನ್ನು, ಸ್ವಯಂ ತೃಪ್ತವಾದ ಆತ್ಮನನ್ನು ಮತ್ತು ಸ್ವಯಂ– ನೈತಿಕತೆಯುಳ್ಳ ಆತ್ಮನನ್ನು ಪಡಕೊಳ್ಳುತ್ತಾರೆ. ಇತರರು ಕೆಲವೊಂದು ಸದ್ಗುಣಗಳನ್ನು ಆರಿಸಿಕೊಂಡು ಅವುಗಳನ್ನು ಆರಾಧಿಸುತ್ತಾರೆ ಮತ್ತು ಅವುಗಳ ಆತ್ಮನನ್ನು ಅವರು ಸ್ವೀಕರಿಸಿಕೊಳ್ಳುತ್ತಾರೆ – ಉದಾಹರಣೆಗೆ ತಾಳ್ಮೆ– ಉನ್ನತ ಮಟ್ಟದ ತಾಳ್ಮೆ ಮತ್ತು ಅದರ ಆತ್ಮನನ್ನು ಹೊಂದಿಕೊಂಡಾಗ ಅವರಿಗೆ ಪೂರ್ಣ ತೃಪ್ತಿಯಾಗುತ್ತದೆ. ಮತ್ತೆ ಕೆಲವರು ತಮ್ಮನ್ನು ಕ್ರಿಸ್ತನಿಗಾಗಿ ಕೆಲಸಮಾಡಲು ಪ್ರತಿಷ್ಟಿಸಿಕೊಳ್ಳುತ್ತಾರೆ ಮತ್ತು ಅವರು ತಮ್ಮ ಉದ್ರೇಕಿತ ಚಟುವಟಿಕೆಗಳ

ಗೊಂದಲದ ಮಧ್ಯೆಯೇ ತೃಪ್ತಿಹೊಂದಿಕೊಳ್ಳುತ್ತಾರೆ; ಕೆಲಸವು ಯಾವುದೇ ರೀತಿಯದ್ದಾಗಿರಲಿ, ಅದರ ಚಿಂತೆ ಅವರಿಗಿರುವುದಿಲ್ಲ, ಯಾಕೆಂದರೆ ಅದು ಮುಕ್ತವಾಗಿ ಸೈತಾನನ ಸೇವೆ ಎನಿಸುವುದಿಲ್ಲ. ಹೀಗಾಗಿ ಅದು ಬಹಳಷ್ಟಿರುತ್ತದೆ ಅದರಲ್ಲಿ ಅವರಿಗೆ ಪ್ರಮುಖವಾದ ಸ್ಥಾನವೂ ಇರುತ್ತದೆ. ಅವರು ಕೆಲಸಮಾಡುವಾಗ ಬಹಳಷ್ಟು ಫಲಗಳನ್ನು ಬಯಸುವುದಿಲ್ಲ ಆದುದರಿಂದ ಅವರು 'ಗಾಳಿಯಲ್ಲಿ ಗುದ್ದು'ವುದರಲ್ಲೇ ಬಹಳಷ್ಟು ತೃಪ್ತಿಪಟ್ಟುಕೊಳ್ಳುತ್ತಾರೆ ಮತ್ತು ಅಂತ್ಯದಲ್ಲಿ ತಾವೇನೂ ಹೆಚ್ಚಿನ ಹಾನಿಯನ್ನುಂಟುಮಾಡಿಲ್ಲ ಎಂಬುದನ್ನು ಅವರು ಕಂಡುಕೊಳ್ಳುತ್ತಾರೆ. ಇವರುಗಳಿಗೆ ದೇವರ ವಾಕ್ಯದ ಧ್ಯಾನದಲ್ಲಿ ಸಮಯ ಕಳೆಯುವುದಾಗಲೀ ಮತ್ತು ಅತನು ಬಯಸುವ ಕೆಲಸಗಾರಿಕೆ ಮತ್ತು ಆತನು ನಾವು ಮಾಡಬೇಕೆಂದು ಬಯಸುವ ಕೆಲಸದ ರೀತಿ ಏನೆಂದು ಖಚಿತಪಡಿಸಿಕೊಳ್ಳುವುದಾಗಲೀ, ಅವರ ಪ್ರತಿಷ್ಠೆಯ ಉಲ್ಲಂಘನೆ ಎನಿಸುತ್ತದೆ – ಯಾಕೆಂದರೆ ಅವರು ತಮ್ಮನ್ನು ಕೇವಲ ಕೆಲಸಮಾಡುವುದಕ್ಕಾಗಿಯೇ ಪ್ರತಿಷ್ಠಿಸಿ ಕೊಂಡಿದ್ದಾರೆ ಮತ್ತು ಅದರಿಂದುಂಟಾಗುವ ಉದ್ರೇಕವೆಂಬ ಜ್ವರದಿಂದ ಬಳಲುವಾಗ ಮಾತ್ರವೇ ಅವರಿಗೆ ಹೃತ್ಪೂರ್ವಕವಾದ ತೃಪ್ತಿ ಉಂಟಾಗುತ್ತದೆ. ಇತರರು ಇನ್ನೂ ಹೆಚ್ಚು ಬುದ್ಧಿವಂತರು, ಆದರೆ ನಿಜವಾಗಿಯೂ ಬುದ್ಧಿವಂತರಲ್ಲ. ಅವರು ದೇವರ ಮತ್ತು ಮಾನವರ ಒಂದು ನಿರ್ದಿಷ್ಟವಾದ ಸೇವೆಗೆ ತಮ್ಮನ್ನು ಪ್ರತಿಷ್ಠಿಸಿಕೊಳ್ಳುತ್ತಾರೆ. ಈ ಸೇವೆಯು ಅವರಿಗೆ ಬಹಳ ಅಗತ್ಯವೆಂದು ಭಾವಿಸುತ್ತಾರೆ. ಅವರು 'ಮಿತಾಚಾರ' (ಉದಾ: ಮಿತವಾದ ಕುಡಿತ) ಸೇವೆಗೆ ತಮ್ಮನ್ನು ಪ್ರತಿಷ್ಠಿಸಿಕೊಂಡರೆ ಅವರು ಆ ಸೇವೆಗೆ ಸಂಬಂಧಪಟ್ಟ ಆತ್ಮನನ್ನು ಹೊಂದಿಕೊಳ್ಳುತ್ತಾರೆ. ಮತ್ತು ಅದರೊಂದಿಗೆ ಬರುವ ಯಾವುದೇ ಆಶೀರ್ವಾದವನ್ನಾದರೂ ಪಡೆಕೊಳ್ಳುತ್ತಾರೆ. ಅಥವಾ ಅವರು ಸಮಾಜ ಸುಧಾರಣೆಯ ಬಗ್ಗೆ ತಮ್ಮನ್ನು ಪ್ರತಿಷ್ಠಿಸಿಕೊಂಡರೆ ಅವರು ಸಮಾಜ ಸುಧಾರಣೆಯ ಆತ್ಮನನ್ನು ಹೊಂದಿಕೊಂಡು ಅದರ ಆಶೀರ್ವಾದಗಳನ್ನು ಪಡೆಕೊಳ್ಳುತ್ತಾರೆ.

ಈ ಎಲ್ಲಾ ಪ್ರತಿಷ್ಠೆಗಳೂ ಮತ್ತು ಆತ್ಮಗಳೂ ಅಥವಾ ಅದರಿಂಟಾಗುವ ಪ್ರವೃತ್ತಿಗಳೂ ಒಳ್ಳೆಯ ಮತ್ತು ಕೆಟ್ಟ ಪ್ರಭಾವಗಳೆರಡನ್ನೂ ಹೊಂದಿವೆ. ಇವುಗಳಲ್ಲಿ ಯಾವುದಾದರೂ ಕೆಡುಕಿಗೆ ಮತ್ತು ಕೆಡುಕಿನ ಆತ್ಮಕ್ಕೆ ಪ್ರತಿಷ್ಠೆಪಡಿಸಿಕೊಳ್ಳುವುದಕ್ಕಿಂತ ಬಹಳಷ್ಟು ಉತ್ತಮ. ಇವುಗಳಲ್ಲಿ ಯಾವುದಾದರೂ ಸ್ವಂತಕ್ಕೆ ಇಲ್ಲವೇ ಅದರೊಂದಿಗಿರುವ ಸ್ವಾರ್ಥ ಸಾಧನೆಯ ಆತ್ಮಕ್ಕೆ ಪ್ರತಿಷ್ಠೆಪಡಿಸಿಕೊಳ್ಳುವುದಕ್ಕಿಂತ ಎಷ್ಟೋ ಉತ್ತಮವಾಗಿದೆ. ಯಾವುದೇ ಗೊತ್ತುಗುರಿಯಿಲ್ಲದ ಮತ್ತು ಯಾವುದಕ್ಕೂ ಪ್ರತಿಷ್ಠೆಪಡಿಸಿಕೊಳ್ಳದ ಜೀವನಕ್ಕಿಂತ ಇವುಗಳಲ್ಲಿ ಯಾವುದಾದರೂ ಉತ್ತಮ. ಆದರೆ ಇದರಲ್ಲಿ ಯಾವುದನ್ನೂ ದೇವರ ವಾಕ್ಯದಲ್ಲಿನ ಪ್ರತಿಷ್ಠೆಯ ಆಲೋಚನೆಗಳಿಗೆ ಮತ್ತು ಪ್ರಪಂಚದ ವಿಮೋಚಕನೂ ನಮ್ಮ ಕರ್ತನೂ, ಆತನ ದೇಹವೆಂಬ ಸಭೆಯ ಮಾದರಿಯೂ, ಆದರ್ಶವೂ ಆದ ಯೇಸು ಕ್ರಿಸ್ತನಲ್ಲಿ ಉದಹರಿಸಲ್ಪಟ್ಟವುಗಳಿಗೆ ಯಾವುದೇ ಅರ್ಥದಲ್ಲಿ ಹೋಲಿಸಲಾಗದು. ಈ ರೀತಿಯ ನಿಜವಾದ ಪ್ರತಿಷ್ಠೆಯು ಮಾತ್ರವೇ ಹೃದಯಕ್ಕೆ ಪವಿತ್ರಾತ್ಮನನ್ನು, ಸತ್ಯದ ಆತ್ಮನನ್ನು ತರುವುದಾಗಿದೆ. ಇದನ್ನು ಈ ಲೋಕವು ಸ್ವೀಕರಿಸಲಾಗದು.

ಸತ್ಯವೂ, ಯಥೋಚಿತವೂ ಆದ ಈ ಪ್ರತಿಷ್ಠೆಯು ಉಳಿದೆಲ್ಲವುಗಳಿಗಿಂತ ವಿಭಿನ್ನವಾಗಿದೆ. ಅದಕ್ಕೆ ಒಂದೇ ಒಂದು ಪವಿತ್ರ ಸ್ಥಳವಿದ್ದು ಅದಕ್ಕೆ ಮಾತ್ರವೇ ತಲೆಬಾಗುತ್ತದೆ; ಅದು ಯೆಹೋವನ ಚಿತ್ತಕ್ಕೆ ತಲೆಬಾಗುತ್ತದೆ, ತನ್ನ ಸ್ವಂತಿಕೆಯನ್ನು, ಸ್ವಂತ ಚಿತ್ತವನ್ನು ಜೀವಂತ ತ್ಯಾಗವಾಗಿ ಕರ್ತನ ಬಲಿಪೀಠದಲ್ಲಿ ಶರಣಾಗಿಸುತ್ತದೆ. ಇದೊಂದು ವಿವೇಚನಾಯುತವಾದ ಸೇವೆಯಾಗಿದೆ. ಇದು ಯಾವುದೇ ಕರಾರುಗಳನ್ನಾಗಲೀ, ಮೀಸಲಾತಿಗಳನ್ನಾಗಲೀ ಒಡ್ಡುವುದಿಲ್ಲ. ಮಹಾ ಯಾಜಕನ ಭಾಷೆಯು 'ರಾಜವಂಶಸ್ಥ ಯಾಜಕತ್ವದ' ಪ್ರತಿಯೊಂದು ಸದಸ್ಯರ ಭಾಷೆಯಾಗಿದೆ. – **"ನಾನು ನನ್ನ ಚಿತ್ತವನ್ನು ನೆರವೇರಿಸುವುದಕ್ಕಾಗಿ ಬರಲಿಲ್ಲ, ಆದರೆ ನನ್ನನ್ನು ಕಳುಹಿಸಿದಾತನ ಚಿತ್ತವನ್ನು ನೆರವೇರಿಸಲು ಬಂದಿದ್ದೇನೆ" "ಇಗೋ! ದೇವರೇ, ನಾನು ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ"** (ನನ್ನ ಕರ್ತವ್ಯವು ಗ್ರಂಥದ ಸುರುಳಿಯಲ್ಲಿ ಬರೆದದೆ) – ಇಂಥವರು ಪವಿತ್ರಾತ್ಮನ ಸಹ ಭಾಗಿಗಳಾಗಿ ಮಾಡಲ್ಪಡುತ್ತಾರೆ.

ಯಾರು ತಮ್ಮ ಚಿತ್ತವನ್ನು ಪ್ರತಿಷ್ಠೆಪಡಿಸಿಕೊಂಡು, ಯಾವುದೇ ಇತಿಮಿತಿಗಳಿಲ್ಲದೆ ಕ್ರಿಸ್ತನ ಮೂಲಕವಾಗಿ ದೇವರ ಮಾತುಗಳನ್ನು ಮತ್ತು ಆತನ ಚಿತ್ತವನ್ನು ಅಂಗೀಕರಿಸಿಕೊಂಡಿದ್ದಾರೋ ಅಂಥವರನ್ನು ಪರಲೋಕದ ಅಥವಾ ಆತ್ಮೀಕ ಮನಸ್ಸುಳ್ಳವರು ಎಂದು ಕರೆಯಲಾಗುವುದು. ಇಂಥವರು ತಮ್ಮ ಹಿಂದಿನ ಭೂಲೋಕದ ಸ್ಥಿತಿಗಿಂತ ಸಂಪೂರ್ಣವಾಗಿ ಪರಿವರ್ತನೆ ಹೊಂದಿದ್ದಾರೆ ಮತ್ತು ಅವರನ್ನು 'ನೂತನ ಸೃಷ್ಟಿ'ಗಳೆಂದು ಕರೆಯುತ್ತಾರೆ. ಅವರ ಹೃದಯದಲ್ಲಿ ಮತ್ತು ಚಿತ್ತದಲ್ಲಿ ಮೂಲಸ್ವರೂಪದ ಬದಲಾವಣೆಗಳನ್ನು ಅವರು ಅನುಭವಿಸುವುದೇ ಆದಲ್ಲಿ ಈ ಹೆಸರು ಅನುಚಿತವೆನಿಸದು. ಅದರೆ ಇದು ಅದಕ್ಕಿಂತ ಹೆಚ್ಚಾದದ್ದು; ಇದರ ಅರ್ಥ ಈಗ ಸತ್ಯದ ಆತ್ಮನ ಮೂಲಕ ಈ ಲೋಕದಿಂದ ಆಯ್ಕೆಗೊಂಡಿರುವ ಮತ್ತು ಈಗ ಪಾಪಗಳ ಸಲುವಾಗಿ ಅರ್ಪಿಸಿದ ಕರ್ತನ ಮಹಾತ್ಯಾಗದಿಂದ ತೆರೆಯಲ್ಪಟ್ಟ ನೂತನ ಜೀವನ ಮಾರ್ಗದ ಮೂಲಕ ದೇವರನ್ನು ಸಮೀಪಿಸುತ್ತಿರುವ ಇವರು ನಿಜವಾಗಿಯೂ ನೂತನ

ಸೃಷ್ಟಿಯ ಭ್ರೂಣದಂತಿರುತ್ತಾರೆ. ದೇವರ ಸ್ವಭಾವದಲ್ಲಿ ಅವರ ಸಂಪೂರ್ಣತೆಯು ಈ ಯುಗದ ಅಂತ್ಯದಲ್ಲಿ ಉಂಟಾಗಲಿರುವ ಪುನರುತ್ಥಾನದ ಬದಲಾವಣೆಗಾಗಿ ಮಾತ್ರವೇ ಕಾಯುತ್ತಿರುತ್ತದೆ ಮತ್ತು ಇದು ಪರಿಶುದ್ಧಾತ್ಮನ ನಡಿಸುವಿಕೆಯಲ್ಲಿ ನೂತನ ಸೃಷ್ಟಿಯಾಗಿ ನಂಬಿಗಸ್ತ ರಾಗಿರುವದರ ಮೇಲೆ ಸಂಪೂರ್ಣವಾಗಿ ಆತುಕೊಂಡಿದೆ.

ಹೀಗಿದ್ದಾಗ್ಯೂ, ಈ ನೂತನ ಮಾನಸಿಕ ಸೃಷ್ಟಿಯು ಅಥವಾ ರೂಪಾಂತರ ಹೊಂದಿದ ಮನಸ್ಸು, ನೂತನ ಸೃಷ್ಟಿಯ ಭ್ರೂಣವು ಪುನರುತ್ಥಾನದ ಸಮಯದಲ್ಲಿ ಪೂರ್ಣವಾಗಲಿದ್ದು ಈಗ ಇನ್ನೂ ಮಾನವ ಶರೀರರೊಂದಿಗೆ ಗುರುತಿಸಲ್ಪಡುತ್ತಿದೆ. ಆದುದರಿಂದ ಅಪೋಸ್ತಲನು ಹೇಳುವುದೇನೆಂದರೆ – **"ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವುದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ (ನೂತನ ಮನಸ್ಸು, ನೂತನ ಸ್ವಭಾವ) ನಮಗುಂಟು"** (2 ಕೊರಿಂಥ 4:7). ಇದೇ ವಿಷಯವಾಗಿ ಮಾತನಾಡುತ್ತಾ, ಅಪೋಸ್ತಲನು ನಮಗೆ ನೀಡುವ ಭರವಸೆ ಏನೆಂದರೆ ಈ ಲೋಕದ ಮನೆಯು ಕರಗಿಹೋದ ಮೇಲೆ, ತ್ಯಾಗಮಾಡಲ್ಪಟ್ಟ ಮೇಲೆ, ಕ್ರಿಸ್ತನಲ್ಲಿ ಮರಣಹೊಂದಿದ ಮೇಲೆ, ಆದಾಗ್ಯೂ ದೇವರ ಕಟ್ಟಡವೊಂದನ್ನು ಪಡೆಯಲಿದ್ದೇವೆ, ಅದು ನೂತನ ಮನೆ, ಮಹಿಮಾ ಶರೀರ. ನೂತನ ಮನಸ್ಸು ಮತ್ತು ಪವಿತ್ರ ಆತ್ಮನು ಅದರಲ್ಲಿ ವಾಸಮಾಡಲು ಸಾಮರಸ್ಯವಾದ ಮತ್ತು ಎಲ್ಲಾ ರೀತಿಯಲ್ಲಿಯೂ ಯೋಗ್ಯವಾದುದೂ ಆಗಿದೆ. – ನಾವು ಇಕ್ಕಟ್ಟಿನ ಹಾದಿಯಲ್ಲಿನ ನಮ್ಮ ಪ್ರವಾಸವನ್ನು ಅಂತ್ಯದವರೆಗೆ ನಿಷ್ಠಾವಂತರಾಗಿ ಕರ್ತನ ಹೆಜ್ಜೆಜಾಡಿನಲ್ಲಿ ನಡೆದು ಅದರಲ್ಲಿ ಜಯಶಾಲಿಗಳಾಗುವಾಗ **"ಭೂಮಿಯ ಮೇಲಿರುವ ನಮ್ಮ ಮನೆಯು ಅಂದರೆ ನಮ್ಮ ದೇಹವೆಂಬ ಗುಡಾರವು ಕಿತ್ತುಹಾಕಲ್ಪಟ್ಟರೂ ದೇವರಿಂದುಂಟಾದ ಒಂದು ಕಟ್ಟಡವು ಪರಲೋಕದಲ್ಲಿ ನಮಗುಂಟೆಂದು ಬಲ್ಲೆವು"** (2 ಕೊರಿಂಥ 5:1).

'Holy' ಎಂಬ ಪದವು 'Whole' ಎಂಬ ಪದದಿಂದ ಬಂದಿದೆ ಮತ್ತು ಇದು ಸಂಪೂರ್ಣತೆಯನ್ನು ಸೂಚಿಸುವುದಾಗಿದೆ; ಆದುದರಿಂದ ಪವಿತ್ರಾತ್ಮ (Holy Spirit) ಎಂಬುದು ಒಂದು ಸಂಪೂರ್ಣವಾದ ಆತ್ಮವಾಗಿದೆ. ಈ ರೀತಿಯಲ್ಲಿ ಪವಿತ್ರಾತ್ಮನನ್ನು ಅಥವಾ ಸಂಪೂರ್ಣವಾದ ಆತ್ಮನನ್ನು ಯಾವುದೇ ಒಳ್ಳೆಯ ಅಳತೆಯಲ್ಲಿ ಹೊಂದಿಕೊಂಡವರು ಎಲ್ಲಾ ಕಡೆಗಳಲ್ಲಿ ತಮ್ಮ ಗುಣಲಕ್ಷಣಗಳಿಂದ ತುಂಬಿಕೊಂಡಿರುತ್ತಾರೆಂದು ನಾವು ಯಾವುದೇ ಆಶ್ಚರ್ಯವಿಲ್ಲದೆ ಹೇಳಬಹುದಾಗಿದೆ – ಇದು ಈ ಹಿಂದಿನ ಅವರ ಎಲ್ಲಾ ನಿರ್ಣಯಗಳಿಗಿಂತ ಉತ್ತಮವಾದ ಸಮತೋಲನವುಳ್ಳದ್ದಾಗಿರುತ್ತದೆ – ಅವರಲ್ಲಿ **"ಸ್ವಸ್ಥವಾದ ಮನಸ್ಸಿನ ಆತ್ಮ"**ವುಂಟು. ಹೇಗೂ, ಈ ಲೋಕದ ದ್ವೇಷಪೂರಿತವಾದ ಕುರುಡತನದಿಂದ ಕೂಡಿದ ಆತ್ಮನು ಅವರ ಬಗ್ಗೆ **"ಇವರಿಗೆ ದೆವ್ವ ಹಿಡಿದಿದೆ, ಹುಚ್ಚು ಹಿಡಿದಿದೆ"** ಎಂದು ಹೇಳಬಹುದು. ಆದರೆ, ಅವರುಗಳು ಪರಲೋಕದಲ್ಲಿ ಸದಾಕಾಲ ಇರುವ ತಾವು ಕಾಣದ ಸಂಗತಿಗಳಿಗಾಗಿ ಕಷ್ಟಪಡುತ್ತಾರೆ, ಅವುಗಳಿಗಾಗಿ ಜೀವಿಸುತ್ತಾರೆ, ಮತ್ತು ಅವುಗಳಲ್ಲಿಯೇ ಆನಂದಿಸುತ್ತಾರೆ – **"ಅವರಲ್ಲಿ ಅನೇಕರು – ಅವನಿಗೆ ದೆವ್ವ ಹಿಡಿದದೆ, ಹುಚ್ಚು ಹಿಡಿದದೆ, ಯಾಕೆ ಅವನ ಮಾತು ಕೇಳುತ್ತೀರಿ? ಅಂದರು"** (ಯೋಹಾನ 10:20) **"ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ"** – 2 ತಿಮೋ. 1:7.

ವ್ಯಕ್ತಿಗತವಾಗಿ ಪರಿಗಣಿಸಿದಲ್ಲಿ, ದೈವಿಕ ಸಮಾಲೋಚಕತನ ಮತ್ತು ವಾಗ್ದಾನಗಳ ಮೂಲಕ ಪವಿತ್ರಾತ್ಮನಿಂದ ಪಡಕೊಂಡವರ ಗುರುತರವಾದ ಶತ್ರುವೆಂದರೆ ಅಂಜಿಕೆಯೆಂಬ ದುರಾತ್ಮ. ಯಾವುದೇ ಒಂದು ದೋಷವಿದೆ ಎಂದು ಅದು ನಮ್ಮನ್ನು ಪ್ರೇರೇಪಿಸುತ್ತದೆ – ಒಂದೋ ದೇವರು ಆತನ ಮಿಗಿಲಾದ ಬಹುಮೂಲ್ಯ ವಾಗ್ದಾನಗಳ ಮೂಲಕ ನಮ್ಮನ್ನು ಉತ್ತೇಜಿತಗೊಳಿಸಿಲ್ಲ, ಅಥವಾ ಅವುಗಳು ನಮಗಾಗಿ ಅಲ್ಲ ಅಥವಾ ಯಾವುದೋ ಒಂದು ಕಾರಣದಿಂದ ನಾವು ಅವುಗಳನ್ನು ಹೊಂದಿಕೊಳ್ಳಲಾಗುತ್ತಿಲ್ಲ ಎಂಬ ಅಂಜಿಕೆ. ಎಲ್ಲಾ ದೇವಜನರೂ ಅಂಜಿಕೆ ಎಂಬ ಈ ದೋಷಪೂರಿತ ದುರಾತ್ಮನ ಆಕ್ರಮಣಕ್ಕೆ ಒಳಗಾಗಿಯೇ ತೀರುತ್ತಾರೆ. – ಕೆಲವರಲ್ಲಿ ಹೆಚ್ಚು, ಕೆಲವರಲ್ಲಿ ಕಡಿಮೆ, ಕೆಲವರಲ್ಲಿ ನಿರಂತರವಾಗಿ ಇದು ಪಟ್ಟು ಹಿಡಿದು ಕೆಲಸ ಸಾಧಿಸುತ್ತದೆ. ಹಾಗಾಗಿ ಎಲ್ಲರೂ ಧೈರ್ಯದಿಂದ ಈ ದುರಾತ್ಮನ ಸಂಗಡ ಹೋರಾಡಿ ಅದನ್ನು ನಾಶಪಡಿಸ ಬೇಕಾಗಿದೆ. ಇಲ್ಲವಾದಲ್ಲಿ ಅದು ಪವಿತ್ರಾತ್ಮನ ಫಲಗಳನ್ನು ಕೊಂದುಹಾಕುತ್ತವೆ ಮತ್ತು ಅಂತ್ಯದಲ್ಲಿ ಅವುಗಳನ್ನು ಅಡಗಿಸಿಬಿಡುತ್ತವೆ. ನಾವು ಆ ಅಂಜಿಕೆಯ ದುರಾತ್ಮವನ್ನು ನಮ್ಮಿಂದ ಸಂಪೂರ್ಣವಾಗಿ ಹೊಡೆದೋಡಿಸಬೇಕಾಗಿದೆ.

ಆದಾಗ್ಯೂ 'ಅಂಜಿಕೆಯೆಂಬ ದುರಾತ್ಮ'ನು ನಮ್ಮ ಹೃದಯಗಳನ್ನು ಪ್ರವೇಶಿಸಿರುವ ಒಂದು 'ಆತ್ಮೀಕ ದೇವರಲ್ಲ' ಅಥವಾ 'ಆತ್ಮಿಕ ಪಿಶಾಚಿಯೂ' ಅಲ್ಲ; ಅದು ಕೇವಲ ಮಾನಸಿಕ ಪ್ರಭಾವವಾಗಿದ್ದು ದೀನತೆಯಿಂದೊಡಗೂಡಿದ ಪತನಗೊಂಡ ಪ್ರತಿಯೊಬ್ಬ ಮಾನವರಲ್ಲಿ ಇದು ಸ್ವಾಭಾವಿಕವಾಗಿದೆ. ದೇವರ ಕೃಪೆಗೆ ತಮ್ಮ ವೈಯಕ್ತಿಕ ಅಸಮರ್ಪಕತೆ ಮತ್ತು ಅಯೋಗ್ಯತೆಗಳ ಗ್ರಹಿಕೆಯಿಂದ ಇದು ಬಂದುದಾಗಿದೆ. ಈ ಅಂಜಿಕೆಯ ಆತ್ಮಕ್ಕೆ ಪ್ರತಿರೋಧಕವೆಂದರೆ ಸತ್ಯದ ಪವಿತ್ರಾತ್ಮನು ಮತ್ತು ಆತನ ಬೋಧನೆಗಳನ್ನು ಅಂಗೀಕರಿಸಿ ಅವುಗಳಲ್ಲಿ

ಪೂರ್ಣವಿಶ್ವಾಸದ ಭರವಸೆಯಿಂದ ದೃಢವಾಗಿ ನಿಲ್ಲುವುದು. ಸತ್ಯದ ಆತ್ಮನು ನಮಗೆ ಹೇಳುವುದೇನೆಂದರೆ, ಅಂಜಿಕೆಯ ಆತ್ಮಕ್ಕೆ ನಾವು ಎಡೆಗೊಡುವುದಕ್ಕೆ ಒಳ್ಳೇ ಕಾರಣಗಳಿವೆ; ಆದರೆ ನಾವು ನೂತನ ಸೃಷ್ಟಿಗಳಾಗಿ ಕ್ರಿಸ್ತನ ಬಳಿಗೆ ಬಂದ ಮೇಲೆ ಅವುಗಳು ಉಳಿದುಕೊಳ್ಳುವುದಿಲ್ಲ. ನಮ್ಮ ಉದ್ದೇಶ ರಹಿತವಾದ ಬಲಹೀನತೆಗಳಿಂದ ಅದು ನಮ್ಮನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನು ನೆರವೇರಿಸಿದ ಮಹಾ ಪಾಪ ಪ್ರಾಯಶ್ಚಿತ್ತ ಸಂಧಾನದಿಂದ ದೂರ ಸೆಳೆಯುತ್ತದೆ ಮತ್ತು ಅಪೋಸ್ತಲನ ಈ ಮಾತುಗಳನ್ನು ನಮಗೆ ಉದಾಹರಿಸುತ್ತದೆ :–

**"ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? ಸ್ವಂತ ಮಗನನ್ನು ಉಳಿಸಿ ಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; (ಮರಣಕ್ಕೆ) ಮಗನನ್ನು ಕೊಟ್ಟ ಮೇಲೆ ಸಮಸ್ತ ವನ್ನೂ ನಮಗೆ ದಯಪಾಲಿಸದೇ ಇರುವನೇ? ದೇವರು ಆದುಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು? ದೇವರೇ ನಮ್ಮನ್ನು ನಿರ್ಣಯಿಸುವವನಾಗಿದ್ದಾನೆ. ಅಪರಾದಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು (ಪರಿಹಾರವನ್ನು ನೀಡಿ – ಎಲ್ಲಾ ಕೊರತೆಗಳನ್ನು ನೀಗಿ) ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ" (ಮಹಿಮೆಹೊಂದಿ ಮೇಲಕ್ಕೇರಿರುವ ಕ್ರಿಸ್ತನು)** – ರೋಮಾ. 8:31–34.

"ನಂಬಿಕೆಯ ಆತ್ಮ" ಎಂಬ ಒಂದು ಪದ ಪ್ರಯೋಗ ಅಥವಾ ಕಾರ್ಯಾಚರಣೆ "ಪವಿತ್ರವಾದ ಆತ್ಮ", "ಸತ್ಯದ ಆತ್ಮ"ವಾಗಿದ್ದು ಆ ರೀತಿಯಲ್ಲಿ ಮುಂದೆ ಬಂದು ನೂತನ ಸೃಷ್ಟಿಯಿಂದ ಅಂಗೀಕರಿಸಲ್ಪಡುತ್ತದೆ ಮತ್ತು ಬೆಂಬಲಿಸಲ್ಪಡುತ್ತದೆ. 'ಭಯದ ಆತ್ಮ'ನ ಮೇಲಿನ ವಿಜಯವನ್ನು ತ್ವರಿತವಾಗಿ ಹೊಂದಿಕೊಳ್ಳಲಾಗುತ್ತದೆ. ವಿಶ್ವಾಸ ಮತ್ತು ಪ್ರೀತಿಯ ಪವಿತ್ರಾತ್ಮನಲ್ಲಿ ಶಾಂತಿ ಸಂತೋಷ ಮತ್ತು ಭರವಸಗಳು ದೇವರ ಫಲಿತಾಂಶಗಳಾಗಿವೆ. ಪರಂತು, ಈ ಕದನಗಳನ್ನು ಪ್ರತಿಯೊರ್ವ ಕ್ರೈಸ್ತನ ಅನುಭವದಲ್ಲಿ ಆಗಾಗ್ಗೆ ನಡಿಸುತ್ತಿರಬೇಕಾಗುತ್ತದೆ. ಮತ್ತು ನಿಜವಾಗಿಯೂ 'ಭಯದ ಆತ್ಮ'ವನ್ನು ಯಜಮಾನನ್ನಾಗಿ, ಅಥವಾ ಸ್ನೇಹಿತನನ್ನಾಗಿ ಅಥವಾ ಹೃದಯದಲ್ಲಿ ನೆಲಸಲು ಸಹಿಸದೇ ಅದನ್ನು ನೂತನ ಸೃಷ್ಟಿಯ ಅಮೂಲ್ಯ ಸೇವಕನನ್ನಾಗಿ ಮಾಡಿಕೊಳ್ಳಬಹುದು. ಅದನ್ನು ಕಾವಲು ನಾಯಿಯನ್ನಾಗಿ ಮಾಡಿಕೊಂಡು ಹೃದಯದ ಹೊರಗೆ ನಾಯಿಕೊಟ್ಟಿಗೆಯಲ್ಲಿ ಇಡಬಹುದು. ಆಗ ಅದನ್ನು ನಮ್ಮ ಪವಿತ್ರತೆ, ಸಂತೋಷ, ಪ್ರೀತಿ ಮತ್ತು ನಮ್ಮ ತಂದೆಯ ಮತ್ತು ನಮ್ಮ ಸಹೋದರರೊಡನಿರುವ ನಮ್ಮ ಸಾಂಗತ್ಯ ಮುಂತಾದ ಅಮೂಲ್ಯ ಸಂಪತ್ತನ್ನು ಕದಿಯಲು ಗೊತ್ತಿಲ್ಲದಂತೆ ಬರುವ ಕಳ್ಳರ ಮತ್ತು ದರೋಡೆಕೋರರ ಗಮನ ಸೆಳೆಯುವ ಉಪಯೋಗಕರ ಉದ್ದೇಶಕ್ಕೆ ಬಳಸಬಹುದು. ಅಪೋಸ್ತಲನು ಒತ್ತಿ ಹೇಳುವಂತೆ ನಾವು ನಮ್ಮೆಲ್ಲಾ ವಿರೋಧಗಳನ್ನು ಕಳಚಿಹಾಕಿ ತಂದೆ ದೇವರಿಂದ ಅಧಿಕಾರವನ್ನು ಪಡಕೊಂಡ ನಂತರ ಆತನು ನೀಡುವ ಆತ್ಮನನ್ನು ನಮ್ಮ ಹೃದಯದೊಳಗೆ ಸ್ವೀಕರಿಸಿಕೊಂಡವರಾಗಿ ನಂತರದಲ್ಲಿ ಬರುವ ಅಕ್ರಮಣಗಳಿಗೆ ಅಂಜೋಣ. ಮದಲಿಂಗನೊಡನೆ ಹೋಗಲು ಮುಂಜಾವಿನಲ್ಲಿ ಸಿದ್ಧರಾದ ನಮ್ಮಲ್ಲಿ ಯಾರಾದರೂ ಮೈಗಳ್ಳತನದ, ಉದಾಸೀನತೆಯ, ಜೊಂಪಿನ ಆತ್ಮವನ್ನು ಹೊಂದಿದ್ದರೆ ಆ ಮಹಾ ಸನ್ನಿವೇಶ–ವಿವಾಹಕ್ಕೆ ಸಿದ್ಧರಾಗದ ಆ ಮೂರ್ಖ ಕನ್ಯೆಯರಂತೆ ಇರದಿರಲು ಭಯಪಡೋಣ. ಇದಕ್ಕಾಗಿ ಎಲ್ಲಾ ಸಿದ್ಧತೆಗಳು ಮಾಡಲಾಗಿದೆ.

'ಭಯದ ಆತ್ಮವು' ಎಷ್ಟೇ ಉಪಯೋಗಕರ ಸೇವಕನಂತಿದ್ದರೂ ಅದು ದೇವರದ್ದಲ್ಲ. ಇದನ್ನು ಕ್ರೈಸ್ತರ ಹೃದಯವೆಂಬ ಅರಮನೆಗೆ ಎಂದಿಗೂ ಬಿಡಬಾರದು. ಆ ಹೃದಯವೆಂಬ ಅರಮನೆಗೆ ಪವಿತ್ರಾತ್ಮ ಕುಟುಂಬದ ವಿವಿಧ ಸದಸ್ಯರುಗಳಾದ ಪ್ರೀತಿ, ಸಂತೋಷ, ಶಾಂತಿ ಮುಂತಾದವುಗಳನ್ನು ಮಾತ್ರವೇ ಬಿಟ್ಟುಕೊಳ್ಳಬೇಕು. ಯಾಕೆಂದರೆ ಸಮರ್ಪಕವಾದ ಪ್ರೀತಿಯು ಅಂಜಿಕೆಯನ್ನು ಮತ್ತು ಅಪವಿತ್ರ ಆತ್ಮನ ಕುಟುಂಬ ಸದಸ್ಯರುಗಳಾದ ಕೋಪ, ಮತ್ಸರ, ಹೊಟ್ಟೆಕಿಚ್ಚು, ದ್ವೇಷ, ಅಂಜಿಕೆ, ಅತೃಪ್ತಿ, ಜಂಬ, ಲೌಕಿಕ ಅಭಿಲಾಷೆಗಳು ಮುಂತಾದವುಗಳನ್ನು ಹೊಡೆದೋಡಿಸುತ್ತದೆ. ಅಪೋಸ್ತಲನು ಹೇಳುವಂತೆ – **"ದೇವರು ನಮಗೆ ಕೊಟ್ಟಿರುವ ಆತ್ಮವು ಬಲ, ಪ್ರೀತಿ, ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ"** (2 ತಿಮೋಥಿ 1:7).

ಕೆಲವೊಮ್ಮೆ ಅಕ್ರಮಣವು ಹಿಂದಿನಿಂದ ಬರುತ್ತದೆ, ಮುಂದಿನಿಂದಲ್ಲ – ಸ್ನೇಹಿತರ ಅಂಜಿಕೆ, ಲೋಕದ ಅಂಜಿಕೆ ಇತ್ಯಾದಿಯಾಗಿ. ಒಬ್ಬರು ತಾನಾಗಿ ದೇವರನ್ನು ನಂಬುವವರಾದರೂ ಇತರರಿಗಾಗಿ ದೇವರನ್ನು ನಂಬದಿರುವುದು. ಇದೊಂದು ಘೋರವಾದ ಸಂಗತಿಯು ಸಹಾ ಆಗಿದೆ. ಯಾಕೆಂದರೆ ಇದು ಹೆಚ್ಚಾಗಿ ಶಾಂತಿ ಮತ್ತು ಸಂತೋಷದ ಆತ್ಮಗಳನ್ನು ಹೊರದೂಡುತ್ತದೆ ಮತ್ತು ಸಾಮರ್ಥ್ಯಗಳನ್ನು ತಪ್ಪು ಹಾದಿಗೆ ಎಳೆಯುತ್ತದೆ. 'ಕ್ರಿಸ್ತನು ಎಲ್ಲರಿಗಾಗಿ ಸತ್ತನು ಎಂದು ನೆನಸುವುದು ದೊಡ್ಡ ತಪ್ಪಾಗುತ್ತದೆ' ಎಂದು ಹೇಳುತ್ತದೆ; 'ಎಲ್ಲರೂ ಈಡುಬಲಿಯ ಕಾರಣ ನಿಶ್ಚಯವಾಗಿ ಜೀವನ ಅವಕಾಶಗಳ ಯಾವುದಾದರೂ ಆಶೀರ್ವಾದ ಹೊಂದಿಕೊಳ್ಳ ಬೇಕೆಂಬುದು ಮಹಾ ಊಹನೆಯಾಗಿದೆ' ಇವೇ ಮುಂತಾಗಿ **'ಅಂಜಿಕೆಯ ಆತ್ಮ'**ವು ನಮಗೆ ಹೇಳುತ್ತದೆ. ಅಥವಾ ಅಂಜಿಕೆಗೆ ನಮ್ಮನ್ನು ಗೆಲ್ಲಲಾಗದಿದ್ದರೆ ಅದರ ಮತ್ತೊಂದು ಕೇಡಿನ ಸಂಗಡಿಗನಾದ ಸುಳ್ಳು ಬೋಧಿಸುವ ಆತ್ಮ ನಮ್ಮನ್ನು ವಿರುದ್ಧ ದಿಕ್ಕಿನಲ್ಲಿ ನಡೆಸಲು ಪ್ರಯತ್ನಿಸಬಹುದು. ನಾವು

ನಿತ್ಯಜೀವದ ವಿಶ್ವ ರಕ್ಷಣೆಯನ್ನು ನಂಬುವಂತೆ ಅದು ಪ್ರಯತ್ನಿಸುತ್ತದೆ. ದೇವರ ಪ್ರತಿಷ್ಠೆಯು ಆತನನ್ನು ಇಚ್ಛಾಪೂರ್ವಕ ಕೆಡುಕರನ್ನು ನಾಶಗೊಳಿಸದಂತೆ ಅಡ್ಡಿಪಡಿಸುತ್ತದೆ ಎಂಬ ತಪ್ಪು ಸಲಹೆಯನ್ನು ನಮಗೆ ನೀಡುತ್ತದೆ.

**'ಸುಳ್ಳು ಬೋಧಿಸುವ ಆತ್ಮ'**ವು ತನ್ನನ್ನು ತಾನು ದೇವರ ವಾಕ್ಯಕ್ಕಿಂತಲೂ ಬುದ್ಧಿವಂತ ಎಂದೆಣಿಸಿ ಕೊಳ್ಳುತ್ತದೆ. ದೈವಿಕ ಪ್ರಕಟನೆಗಳಿಂದ ಸ್ವಂತ ಮಟ್ಟವನ್ನು ಸರಿಪಡಿಸಿಕೊಳ್ಳುವ ಬದಲಾಗಿ ನಾವು ದೇವರನ್ನು ಅದರ ಸ್ವಂತ ಮಟ್ಟಕ್ಕನುಸಾರವಾಗಿ ನಿರ್ಣಯಿಸಬೇಕೆಂಬ ತಪ್ಪು ಸಲಹೆಯನ್ನು ನೀಡುತ್ತದೆ. ಈ ರೀತಿಯಲ್ಲಿ ಅಪವಿತ್ರ ಆತ್ಮವಾದ ವಿರೋಧಿಯ ಆತ್ಮನ ವಿವಿಧ ಸಂಗತಿಗಳಾದ 'ಸುಳ್ಳು ಬೋಧಿಸುವ ಆತ್ಮ'ವು, 'ಭಯದ ಆತ್ಮ'ವು ಮತ್ತು 'ದಾಸತ್ವದ ಆತ್ಮ'ವು ವಿವಿಧ ರೀತಿಯಲ್ಲಿ 'ಕ್ರಿಸ್ತ ಯೇಸುವು ದೇವರ ಕೃಪೆಯಿಂದ ಎಲ್ಲಾ ಮಾನವರಿಗಾಗಿ ಮರಣವನ್ನು ಸವಿದನು" ಮತ್ತು 'ನೂತನ ಒಡಂಬಡಿಕೆಯ ಶರತ್ತಿಗನುಸಾರವಾಗಿ ದೇವರ ಸಾಂಗತ್ಯಕ್ಕೆ ಮರಳಿ ಬರುವ ಆಶೀರ್ವಾದದಾಯಕ ಅವಕಾಶವನ್ನು ಅಂತಿಮವಾಗಿ ಎಲ್ಲರಿಗೂ ದೊರೆಯುವಂತೆ ಒದಗಿಸಿದನು' ಎಂಬ ಸತ್ಯದ ಆತ್ಮನ ಹೇಳಿಕೆಗಳನ್ನು ಸುಳ್ಳಾಗಿಸುವಂತೆ ಪ್ರಯತ್ನಿಸುತ್ತದೆ. ಪ್ರತಿಯೊಬ್ಬರನ್ನೂ ಸತ್ಯದ ಜ್ಞಾನಕ್ಕೆ ತರುವಾಗ ಆತನು ಆ ಮೂಲಕ ನ್ಯಾಯತೀರ್ಪಿಗೆ ಒಳಗಾಗುತ್ತಾನೆ. ಆತನು ನಿತ್ಯಜೀವಕ್ಕೆ ಅಂಗೀಕರಿಸಲ್ಪಡುತ್ತಾನೆ ಅಥವಾ ನಿತ್ಯ ನಾಶನದ ಶಿಕ್ಷೆಯಾದ ಎರಡನೆಯ ಮರಣಕ್ಕೆ ತುತ್ತಾಗುತ್ತಾನೆ. – **"ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ; ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ; ದೇವರಿಂದ ಹುಟ್ಟದವನು ನಮ್ಮ ಮಾತನ್ನು ಕೇಳುವುದಿಲ್ಲ. ಇದು ಸತ್ಯವನ್ನು ಬೋಧಿಸುವ ಆತ್ಮ, ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ಇದರಿಂದಲೇ ತಿಳುಕೊಳ್ಳುತ್ತೇವೆ"** – 1 ಯೋಹಾನ 4:6. **"ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು ನಮ್ಮ ಜನರೊಳಗೆ ಸಂಪೂರ್ಣವಾಗಿ ನಾಶವಾಗುವನು"** – ಅ.ಕೃ. 3:23.

'ದೇವರ ಆತ್ಮ', 'ಪರಿಶುದ್ಧತೆಯ ಆತ್ಮ'ವು ಅದನ್ನು ಸ್ವೀಕರಿಸುವ ಎಲ್ಲರಲ್ಲಿ 'ಸಂತೋಷ' ಮತ್ತು 'ಶಾಂತಿ'ಯನ್ನು ನೀಡುವ ಆತ್ಮವಾಗಿದೆ. ಅವು ಅವರಿಗೆ ಅವರುಗಳು ಪರಲೋಕ ತಂದೆಯ ಮತ್ತು ಅದೇ ಮನಸ್ಸು ಮತ್ತು ಪ್ರವೃತ್ತಿಯುಳ್ಳ ವಿಮೋಚಕನ ಚಿತ್ತಕ್ಕನುಸಾರವಾಗಿ ಬರುವ ಅನುಪಾತದಲ್ಲಿ ದೊರೆಯುತ್ತವೆ. ದೇವರ ಆತ್ಮವು ದೇವರ ವಾಗ್ದಾನಗಳ ಬಗ್ಗೆ ನಂಬಿಕೆಗೆ ನಡೆಸುತ್ತದೆ; ಆದರೆ ಸುಳ್ಳು ಬೋಧಿಸುವ ಆತ್ಮವು ವಿರೋಧ ದಿಕ್ಕಿನಲ್ಲಿ ನಮ್ಮನ್ನು ನಡೆಸುತ್ತದೆ. ಅದು ದೇವರ ವಾಗ್ದಾನಗಳ ಬಗ್ಗೆ ನಮ್ಮಲ್ಲಿ ಅಪನಂಬಿಕೆಯನ್ನೂ, ಅನುಮಾನಗಳನ್ನೂ ಉಂಟು ಮಾಡುತ್ತದೆ ಮತ್ತು ಮಾನವ ಊಹಾಪೋಹಗಳಿಗೆ, ಸುಲಭವಾಗಿ ನಂಬುವ ಮತ್ತು ಮೂಢನಂಬಿಕೆಗಳೆಡೆಗೆ, ದೇವರು ನುಡಿಯದೇ ಇರುವ ಸಂಗತಿಗಳನ್ನು ನಂಬುವಂತೆ ಮತ್ತು ಸ್ವಸ್ಥ ಬುದ್ಧಿಯ 'ಪವಿತ್ರಾತ್ಮ'ನನ್ನು ಹೊಂದಿದವರಿಗೆ ಅಸಮಂಜಸವಾದ ಸಂಗತಿಗಳಿಗೆ ಎಡೆಮಾಡಿಕೊಡುತ್ತದೆ. ಸತ್ಯದ ಆತ್ಮನು ದೇವರ ಕಾರಣಕ್ಕಾಗಿ ಬೇಕಾದ ಚಟುವಟಿಕೆ ಮತ್ತು ಸಾಮರ್ಥ್ಯಗಳ ಕಡೆಗೆ ನಡೆಸುತ್ತದೆ. ಎಷ್ಟು ವ್ಯಾಪಕವಾಗಿಯಾದರೂ ದೇವರ ಜೊತೆಗಾರರಾಗಿರುವುದನ್ನು ಮೆಚ್ಚಿಕೊಳ್ಳುವಂತೆ ಮಾಡುತ್ತದೆ ; ಸುಳ್ಳು ಬೋಧನೆಯ ಆತ್ಮವು ಇದಕ್ಕೆ ವಿರೋಧವಾಗಿ ಜಡಭಾವದ ಆತ್ಮವಾಗಿದ್ದು, ಪರಲೋಕದ ಸಂಗತಿಗಳ ಬಗ್ಗೆ ಅಲಕ್ಷ್ಯವಾಗಿದ್ದು, ಅದೇ ಸಮಯದಲ್ಲಿ ಈ ಲೋಕದ ವಿಚಾರಗಳಲ್ಲಿ ಬಹು ಜಾಗರೂಕತೆಯುಳ್ಳದ್ದಾಗಿದೆ. ನಿಜವಾದ ಸಭೆಯ ಮತ್ತು ಆದರ ಪ್ರೀತಿಯ ಬಂಧನದ ಬಗ್ಗೆ ಅಸಡ್ಡೆಯುಳ್ಳದ್ದಾಗಿದ್ದು, ಮಾನವ ಸಂಸ್ಥೆಗಳ ಮತ್ತು ಅವುಗಳ ವಿಶ್ವಾಸ ಪಂಥವೆಂಬ ಬೇಡಿಯ ಬಗ್ಗೆ ಹೆಚ್ಚು ಆಸಕ್ತಿಯುಳ್ಳದ್ದಾಗಿದೆ – **"ದೇವರು ಅವರಿಗೆ ಜಡಭಾವವನ್ನು ಅಂದರೆ ಕಾಣದ ಕಣ್ಣುಗಳನ್ನೂ, ಕೇಳದ ಕಿವಿಗಳನ್ನೂ ಕೊಟ್ಟನು. ಈ ಭಾವವು ಈ ಹೊತ್ತಿನವರೆಗೂ ಹಾಗೆಯೇ ಅದೆ"** – ರೋಮಾ. 11:8.

## ಅಸೂಯೆಪಡಲು ಅತ್ಯಾಶಿಸುವ ಆತ್ಮ
## The Spirit that Lusteth to Envy

ನಾವೀಗಾಗಲೇ ಗಮನಿಸಿರುವಂತೆ ಪ್ರತಿಷ್ಠೆಗೊಂಡ ದೇವರಮಕ್ಕಳು, ಆತ್ಮನಿಂದ ಪಡಕೊಂಡವರು, ನೂತನ ಸೃಷ್ಟಿಗಳು ಪ್ರಸ್ತುತದಲ್ಲಿ ಇಬ್ಬಗೆಯ ವ್ಯಕ್ತಿತ್ವ ಹೊಂದಿದವರಾಗಿದ್ದಾರೆ. ಇನ್ನೂ ಪೂರ್ಣವಾಗಿ ಅಭಿವೃದ್ಧಿ ಹೊಂದದಿರುವ ನೂತನವಾದದ್ದು, ಇನ್ನೂ "ಹುಟ್ಟದೇ ಇರುವುದು", ಸೂಕ್ತವಾಗಿ ಒಪ್ಪುವ ದೇಹವಿಲ್ಲದ್ದು ಸತ್ತ ಎಣಿಕೆಯಲ್ಲಿರುವ ಹಳೆ ದೇಹದಲ್ಲಿ ಜೀವಿಸುತ್ತಿರುತ್ತದೆ – ಅದರ ಅಭಿವೃದ್ಧಿಯ ಕಾಲದಲ್ಲಿ ನವೀಕೃತ ಚಿತ್ತದ ಮೂಲಕ ಉಪಯೋಗ ಮತ್ತು ಸೇವೆಗಾಗಿ ಸ್ವಾಧೀನಪಡಿಸಿ ಕೊಂಡಿರುವುದಾಗಿದೆ. (ಕ್ರೈಸ್ತರು ಎರಡು ಸ್ವಭಾವದವರಾಗಿದ್ದಾರೆ ಎಂಬ ಅಭಿಪ್ರಾಯವನ್ನು ಇದು ಹೇಗೂ ನೀಡುವುದಿಲ್ಲ. ಯಾಕೆಂದರೆ, ಅಂಥಾಃ ಆಲೋಚನೆಯು ಸತ್ಯವೇದ ವಿಜ್ಞಾನಕ್ಕೆ ವಿರುದ್ಧವಾಗಿದೆ). ನೂತನ ಆತ್ಮವು, ಕ್ರಿಸ್ತನ ಮನಸ್ಸು, ಪವಿತ್ರವಾದ ಪ್ರವೃತ್ತಿ ಅಥವಾ ಚಿತ್ತ, ಇವುಗಳು ಮಾತ್ರವೇ ದೇವರಿಂದ ಮಾನ್ಯತೆ ಪಟ್ಟವುಗಳಾಗಿವೆ ಮತ್ತು ಇವುಗಳು ಮಾತ್ರವೇ "ಪವಿತ್ರ ಸಹೋದರರುಗಳಿಂದ, ದೇವರ ಕರೆಹೊಂದಿದ ಪಾಲುದಾರ"ರಿಂದಲೂ ಮಾನ್ಯತೆ ಪಟ್ಟವುಗಳಾಗಿವೆ. ಪರಂತು, ದೇವರ ವಾಕ್ಯನಿಂದ ಹುಟ್ಟಿದವರ ಪ್ರವೃತ್ತಿಗೂ,

ಹಳೆಯ ಮನಸ್ಸಿನ ಚಿತ್ತಕ್ಕೂ, ಆತ್ಮಕ್ಕೂ, ನಮ್ಮ ಪತನಗೊಂಡ ದೇಹದ ಪ್ರವೃತ್ತಿಗೂ ನಿರಂತರವಾದ ಕಾದಾಟದ ಸ್ಥಿತಿ ಉಂಟಾಗುತ್ತದೆ. ಕೆಲವೊಮ್ಮೆ ದೇವರ ವಾಕ್ಯದಲ್ಲಿ ವಿರುದ್ಧವಾದ ಚಿತ್ತ ಅಥವಾ ನಮ್ಮ ದೇಹದ ಪ್ರವೃತ್ತಿಯು ನಮ್ಮ ಆತ್ಮವಾಗಿದೆ ಎಂದು ಹೇಳಲಾಗುತ್ತದೆ. **"ದೇವರು ನಮ್ಮಲ್ಲಿ ಇರಿಸಿರುವ ಪವಿತ್ರಾತ್ಮನು** (ನಮ್ಮ ದೇಹದಲ್ಲಿ ಯಾವುದೇ ಸರ್ವಸಂಪೂರ್ಣವಾದುದು ವಾಸಿಸುವುದಿಲ್ಲ) **ಅಭಿಮಾನ ತಾಪದಿಂದಲೂ ನಮಗೋಸ್ಕರ ಹಂಬಲಿಸುತ್ತಾನೆ ಎಂಬ ಶಾಸ್ತ್ರೋಕ್ತಿ ಬರೀ ಮಾತೆಂದು ಭಾವಿಸುತ್ತೀರೋ?"** (ಯಾಕೋಬ 4:5) ಎಂದು ಬರೆದದೆ.

ನೂತನ ಆತ್ಮವು, ನೂತನ ಸೃಷ್ಟಿಯು, ಪ್ರೀತಿಯ ಆತ್ಮನಿಂದ ಪಡಕೊಳ್ಳಲ್ಪಟ್ಟದ್ದು ಹೊಟ್ಟೆಕಿಚ್ಚು ಪಡುವುದಿಲ್ಲ. ಯಾಕೆಂದರೆ **"ಪ್ರೀತಿಯು ಹೊಟ್ಟೆಕಿಚ್ಚು ಪಡುವುದಿಲ್ಲ, ಹೊಗಳಿಕೊಳ್ಳುವುದಿಲ್ಲ, ಉಬ್ಬಿಕೊಳ್ಳುವುದಿಲ್ಲ ..."** (1 ಕೊರಿಂಥ 13:4) ಎಂದು ಬರೆದದೆ. ಆದುದರಿಂದ, ನಾವು ಯಾವಾಗ ಹೊಟ್ಟೆಕಿಚ್ಚಿನ, ದ್ವೇಷದ, ಕಲಹ ಇಲ್ಲವೆ ಒಣಹೆಮ್ಮೆಯ ಆತ್ಮವು ನಮ್ಮ ಕ್ರಿಯೆಗಳನ್ನು, ಮಾತುಗಳನ್ನು ಅಥವಾ ಆಲೋಚನೆಗಳನ್ನು ಯಾವುದೇ ಮಟ್ಟದಲ್ಲಿ ನಿಯಂತ್ರಿಸುವಾಗ ನಮ್ಮ ಹಳೆಯ ಕೆಟ್ಟ ಆತ್ಮವು ನೂತನ ಸೃಷ್ಟಿಗಳಾದ ನಮ್ಮ ಮೇಲೆ ಇನ್ನೂ ತನ್ನ ವಿಜಯವನ್ನು ಸಾಧಿಸುತ್ತಿರುತ್ತದೆ ಎಂಬುದು ನಿಶ್ಚಯವಾಗುತ್ತದೆ. ಅದೇ ಅನುಪಾತದಲ್ಲಿ ನಾವು ಇವುಗಳನ್ನು ದೂರಮಾಡಿ, ವಿನಯ, ಒಳ್ಳೆಯತನ, ಸಾದುತ್ವ, ಸಹೋದರ ಕರುಣೆ ಮುಂತಾದ ಪವಿತ್ರಾತ್ಮನ ಸಂಗತಿಗಳಿಂದ ತುಂಬಿಕೊಳ್ಳುವಾಗ ನಾವು ದೇವರ ಸ್ವರೂಪಿಯಾದ ಕ್ರಿಸ್ತನ ಸ್ವರೂಪದಲ್ಲಿ ಬೆಳೆಯುವವರಾಗುತ್ತೇವೆ ಮತ್ತು ಅದೇ ಅನುಪಾತದಲ್ಲಿ ನಾವು ಪವಿತ್ರಾತ್ಮಭರಿತರಾಗುತ್ತೇವೆ. ಆತ್ಮೀಕ ವ್ಯಕ್ತಿಯಿಂದ ತುಂಬುಕೊಳ್ಳುವುದಲ್ಲ, ಆದರೆ ಆತ್ಮನ ಪ್ರಭಾವ ತುಂಬಿಕೊಳ್ಳುವುದು, ಒಬ್ಬ ವ್ಯಕ್ತಿಯ ಚಿತ್ತ ಅಥವಾ ಪ್ರಭಾವವು, ನಮ್ಮ ತಂದೆಯಾದ ಯೆಹೋವನದೇ – ಇದೇ ಆತ್ಮನು ಇನ್ನೂ ಸಹಾ ಆತನು ಪಡೆದ ಏಕೈಕ ಕುಮಾರನಲ್ಲಿಯೂ ಅದೆ.

ಅಪೋಸ್ತಲನು ನಮ್ಮ ಆತ್ಮ, ಮನಸ್ಸು ಮತ್ತು ಪ್ರವೃತ್ತಿ ಹಾಗೂ ನಾವು ಪುನರುಜ್ಜೀವಿತಗೊಳಿಸಿಕೊಂಡಿರುವ ನೂತನ ಆತ್ಮ ನಮ್ಮ ಶಾರೀರಿಕ ಆತ್ಮ, ಪ್ರವೃತ್ತಿ ಮತ್ತು ಮನಸ್ಸು ಇವುಗಳ ನಡುವೆ ನಡೆಯುವ ಹೋರಾಟದ ಬಗ್ಗೆ ಮತ್ತೂ ಬರೆಯುವವನಾಗಿದ್ದಾನೆ. ಆದರೆ ಆತನು ಈ ಪ್ರಸ್ತಾಪವನ್ನು ಎಣಿಕೆಯ ದೃಷ್ಟಿಕೋನದಲ್ಲಿ ವ್ಯವಹರಿಸುತ್ತಾನೆ. – ನಮ್ಮ ದೇಹವು ಇನ್ನು ಮುಂದೆ ನಮ್ಮದಾಗಿರದೆ ಅದು ನಮ್ಮ ಶತ್ರುವೇ ಎಂಬಂತೆ ಮತ್ತು ನಾವು ಕೇವಲ ನೂತನ ಸೃಷ್ಟಿಗಳು ಮಾತ್ರವೇ ಆಗಿ ಗ್ರಹಿಸಲ್ಪಟ್ಟಿದ್ದೇವೆ ಮತ್ತು ಪವಿತ್ರಾತ್ಮವು ಮಾತ್ರವೇ ನಮ್ಮ ಏಕೈಕ ಮನಸ್ಸು ಮತ್ತು ಪ್ರವೃತ್ತಿಯಾಗಿದೆ ಎಂಬಂತೆ ಆತನು ಹೇಳುವುದೇನೆಂದರೆ – **"ನಾವೋ ದೇವರಾತ್ಮನ ಮೂಲಕ ನಂಬಿಕೆಯಿಂದ ನೀತಿವಂತರಾಗುತ್ತೇವೆಂಬ ನಿರೀಕ್ಷೆ ಸಫಲವಾಗುವುದೆಂದು ಎದುರುನೋಡುತ್ತೇವೆ"... "ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ. ಯಾಕೆಂದರೆ ಶರೀರ ಭಾವವು ಅಭಿಲಾಷಿಸುವುದು ಆತ್ಮನಿಗೆ ವಿರುದ್ಧವಾಗಿದೆ. ಆತ್ಮನು ಅಭಿಲಾಷಿಸುವುದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವುದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ"** (ಗಲಾತ್ಯ 5:5, 16–17). ನಿರಂತರವಾದ ವಿರೋಧ ಮತ್ತು ದೇಹದ ಮೋಸಗಾರಿಕೆಯು ಪರಿಪೂರ್ಣವಾದ ಕಾರ್ಯಗಳಿಗೆ ತಡೆಯನ್ನುಂಟು ಮಾಡುವವುಗಳಾಗಿವೆ. ಆದರೆ ದೇವರ ಕೃಪೆಯಿಂದ ಇವು ನಮ್ಮನ್ನು ದೇವರಿಗೆ 'ನೂತನ ಸೃಷ್ಟಿ'ಗಳನ್ನಾಗಿ ಅಂಗೀಕರಿಸುವುದನ್ನು ಅಡ್ಡಿಪಡಿಸುವುದಿಲ್ಲ. ನೂತನ ಸೃಷ್ಟಿಗಳ ಹೃದಯಗಳು, ಆತ್ಮಗಳು, ಉದ್ದೇಶಗಳು ಪವಿತ್ರವಾಗಿರುತ್ತವೆ ಮತ್ತು ಇವುಗಳು ಆತನ ಪ್ರಿಯಕುಮಾರನ ಮೂಲಕ ತಂದೆಗೆ ಅಂಗೀಕೃತ ವಾದವುಗಳಾಗಿವೆ.

## ಆತ್ಮನ ಮೂಲಕ ದೇವರು ಬೋಧಿಸಿದ್ದಾನೆ
## Taught of God Through The Spirit

ನಾವು ಇದುವರೆಗೆ ಕರ್ತನ ಆತ್ಮನ ಬಗ್ಗೆ, ದೇವಜನರ ಮೇಲೆ ಅದರ ಕಾರ್ಯಾಚರಣೆ, ಅವರ ಮನಸ್ಸುಗಳ ಮೇಲೆ ಅದರ ಜ್ಞಾನೋದಯ ಪ್ರಭಾವ, ತಪ್ಪುದೋಷಗಳ ನಿವಾರಣೆ, ಜೀವವುಳ್ಳ ಸತ್ಯವನ್ನು ನೀಡುವಂತೆ ವಾಕ್ಯದ ಪ್ರಕಾಶ ಇತ್ಯಾದಿಗಳಿಂದ ನಾವು ಅಪೋಸ್ತಲನ ಈ ಮಾತುಗಳನ್ನು ಅರ್ಥಮಾಡಿಕೊಳ್ಳುವುದಕ್ಕೂ ಮತ್ತು ಅವುಗಳನ್ನು ಮೆಚ್ಚಿಕೊಳ್ಳುವುದಕ್ಕೂ ತೊಡಗುತ್ತೇವೆ – **"ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯುಗಳನ್ನು ಕೂಡಾ ಪರಿಶೋಧಿಸುವವನಾಗಿದ್ದಾನೆ."** (1 ಕೊರಿಂಥ 2:9,10). ನಮ್ಮ ಚಿತ್ತವನ್ನು ದೇವರಿಗೆ ಸಮರ್ಪಿಸಿಕೊಂಡ ಮೇಲೆ, ನಾವು ಆತನಿಂದ ಬೋಧಿಸಲ್ಪಟ್ಟು, ಆತನ ಮಾರ್ಗದಲ್ಲಿ ನಡೆಯುವೆವು, ನಾವು ಆತನ ಚಿತ್ತದ, ಮನಸ್ಸಿನ ಮತ್ತು ಆತ್ಮನ ಸಾಮರಸ್ಯಕ್ಕೆ ಬಂದಿದ್ದೇವೆ ಎಂದು ಇದರಿಂದ ಹೇಳಿದಂತಾಯಿತು. ನಾವು ಈ ನೂತನ ದೃಷ್ಟಿಕೋನದಿಂದ ನೂತನ ಬೆಳಕಿನಲ್ಲಿ ಎಲ್ಲವನ್ನು ಕಂಡುಕೊಳ್ಳುವಂತೆ ನೂತನ ಮನಸ್ಸಿನ ದೃಷ್ಟಿಕೋನವೊಂದನ್ನು ಸರಿಯಾದ

ಮಾರ್ಗದರ್ಶನದಲ್ಲಿ ಸಿದ್ಧಪಡಿಸುವುದರ ಮೂಲಕ ಎಲ್ಲವುಗಳೂ ನಮಗೆ ನೂತನವಾಗುತ್ತವೆ. ನೂತನ ಮನಸ್ಸು, ನೂತನ ಚಿತ್ತ ಇವುಗಳು ನಮ್ಮನ್ನು ದೇವರಲ್ಲಿನ ಅಗಾಧವಾದ ಸಂಗತಿಗಳನ್ನು ಹುಡುಕುವಂತೆ, ನಾವು ಆತನನ್ನು ತಿಳುಕೊಂಡು ವಿಧೇಯ ಮಕ್ಕಳಂತೆ ಆತನ ಚಿತ್ತದಂತೆ ನಡೆಯಲು ದೇವರ ವಾಕ್ಯವನ್ನು ಅಧ್ಯಯನ ಮಾಡುವಂತೆ ನಮ್ಮನ್ನು ಚುರುಕುಗೊಳಿಸುತ್ತವೆ. ನಮ್ಮ ತಂದೆಯ ಮನಸ್ಸು ಅಥವಾ ಆತ್ಮನನ್ನು ಹೊಂದಿದವರಾಗಿ, ನಾವು ಆತನ ಬೋಧನೆಗಳನ್ನು ವಿವರವಾಗಿ ಎಚ್ಚರಿಕೆಯಿಂದ ಗಮನಿಸುತ್ತೇವೆ ಮತ್ತು ಆತನೊಂದಿಗೆ ಸಾಮರಸ್ಯದಲ್ಲಿ ನಡೆಯಲು ಬಯಸುತ್ತೇವೆ – **"ಮನುಷ್ಯನ ಒಳಗಿನ ಆಲೋಚನೆಗಳು (ಆತನ ಮನಸ್ಸು, ಚಿತ್ತ ಮತ್ತು ಯೋಜನೆಗಳು) ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವುದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವುದಿಲ್ಲ"** (1 ಕೊರಿಂಥ 2:11). ಮತ್ತೊಬ್ಬರ ಮನಸ್ಸಿನಲ್ಲಿರುವುದನ್ನು, ಯೋಜನೆಗಳನ್ನು ಅವರು ಪ್ರಕಟಗೊಳಿಸದಿದ್ದರೆ ಅವನ್ನು ಯಾರೂ ತಿಳುಕೊಳ್ಳಲಾರರು ಎಂದು ಹೇಳಿದ ಹಾಗಾಯಿತು. ಅದರಂತೆ ದೇವರ ಮನಸ್ಸಿನೊಂದಿಗೆ ಸಾಮರಸ್ಯಕ್ಕೆ ಬಂದು ಪವಿತ್ರಾತ್ಮನನ್ನು ಹೊಂದಿಕೊಳ್ಳದ ಹೊರತು ಯಾರೂ ದೈವಿಕ ಮನಸ್ಸು ಮತ್ತು ಯೋಜನೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

ನಮಗೆ ದೇವರು ಮುಕ್ತವಾಗಿ ನೀಡಿರುವ ಸಂಗತಿಗಳನ್ನು ತಿಳಿದುಕೊಳ್ಳುವಂತೆ ನಾವು ಈಗ ದೇವರ ಆತ್ಮನನ್ನು (ಮನಸ್ಸು, ಪ್ರವೃತ್ತಿ ಅಥವಾ ಚಿತ್ತ) ಪಡಕೊಂಡಿದ್ದೇವೆ .... ಆದರೆ ಪ್ರಾಕೃತ ಮನುಷ್ಯನು ದೇವರ ವಿಷಯಗಳನ್ನು ಬೇಡವೆನ್ನುತ್ತಾನೆ, ಅವು ಅವನಿಗೆ ಹುಚ್ಚು ಮಾತಾಗಿದೆ. ಅವು ಅವನಿಗೆ ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. ಅವುಗಳು ದೇವರ ಆತ್ಮ ಅಥವಾ ಮನಸ್ಸನ್ನು, ಆತನ ಯೋಜನೆಯ ಆತ್ಮ, ಸತ್ಯದ ಆತ್ಮ ಇವುಗಳನ್ನು ಹೊಂದಿಕೊಂಡಿರುವವರಿಂದ ಮಾತ್ರವೇ ಅರ್ಥಮಾಡಿಕೊಳ್ಳಬಹುದಾಗಿವೆ. ಅಂಥವರೆಲ್ಲರೂ ಈ ತತ್ವಗಳನ್ನು ಅರ್ಥ ಮಾಡಿಕೊಳ್ಳುವವರೆಗೆ ನೀತಿವಂತಿಕೆ ಮತ್ತು ಸತ್ಯದೊಂದಿಗೆ ಸಾಮರಸ್ಯವಾದ ಮನೋಪ್ರವೃತ್ತಿಯನ್ನು ಹೊಂದಿಕೊಂಡಿರಬೇಕಾಗುತ್ತದೆ ಮತ್ತು ಪ್ರತಿನಿತ್ಯವೂ ದೇವರ ಮನಸ್ಸನ್ನು, ದೇವರ ಚಿತ್ತವನ್ನು ಇನ್ನೂ ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳ ಬಯಸಬೇಕು ಮತ್ತು ಆತ್ಮನನ್ನು, ಪ್ರವೃತ್ತಿಯನ್ನು ಹೆಚ್ಚಾಗಿ ಹೊಂದಿಕೊಳ್ಳ ಬೇಕು. ಇಂಥಾಃ ವಿಧೇಯ ಮಕ್ಕಳು ಹೆಚ್ಚು ಹೆಚ್ಚಾಗಿ 'ಸತ್ಯದ ಆತ್ಮ'ನನ್ನು ಹೊಂದಿಕೊಂಡು 'ವಿಧೇಯತೆಯ ಆತ್ಮ'ನನ್ನು ಅದರೊಂದಿಗೆ ಕೂಡಿಸಿಕೊಳ್ಳುತ್ತಾರೆ. ಆದರೆ, ಅವರು ಒಬ್ಬ ಪ್ರಾಕೃತಿಕ ಮನುಷ್ಯನು ಒಲವು ತೋರುವಂತೆ ಆತ್ಮೀಕ ಸಂಗತಿಗಳನ್ನು ಸ್ವಾಭಾವಿಕ ಸಂಗತಿಗಳೊಂದಿಗೆ ತುಲನೆ ಮಾಡುವುದರ ಮೂಲಕ ಈ ಸ್ಥಿತಿಯನ್ನು ಹೊಂದಿಕೊಳ್ಳುವುದಿಲ್ಲ. ಆದರೆ ದೈವಿಕ ಉಪದೇಶವನ್ನು ಅನುಸರಿಸುವುದರ ಮೂಲಕ ಮತ್ತು ಆತ್ಮೀಕ ಸಂಗತಿಗಳನ್ನು ಆತ್ಮೀಕವಾದವುಗಳೊಂದಿಗೆ ಹೋಲಿಸುವುದರ ಮೂಲಕ ಮಾತ್ರವೇ ಪಡಕೊಳ್ಳುತ್ತಾನೆ (1 ಕೊರಿಂಥ 2:13). ದೇವರಾತ್ಮನಿಂದ ನಡೆಸಿಕೊಳ್ಳುವವನು (ಯಾರು ಪವಿತ್ರಾತ್ಮ ಅಥವಾ ಪವಿತ್ರ ಮನಸ್ಸನ್ನು ಪಡಕೊಂಡಿರುವನೋ ಅವನು ಎಲ್ಲವನ್ನೂ ವಿಚಾರಿಸಿಕೊಳ್ಳುತ್ತಾನೆ. (ಈತನಿಗೆ ಪ್ರಾಕೃತ ಮತ್ತು ಆತ್ಮೀಕ ಸಂಗತಿಗಳು ದೈವಿಕ ಯೋಜನೆಯ ಮುಖಾಂತರ ನಡೆಯುವುದರ ಬಗ್ಗೆ ಸರಿಯಾಗಿ ಅರ್ಥಮಾಡಿಕೊಳ್ಳಲು ಮತ್ತು ಅಂದಾಜು ಹಾಕಲು ಆಗುವುದು). ಆದರೆ ಇವನನ್ನು ಯಾವನಾದರೂ ವಿಚಾರಿಸಿಕೊಳ್ಳುವುದಿಲ್ಲ". ಆತ್ಮೀಕ ಮನಸ್ಸಿರುವ ನೂತನ ಸೃಷ್ಟಿಯು ನಿರೀಕ್ಷೆ ಮತ್ತು ಪ್ರತೀಕ್ಷೆಗಳಿಗೋಸ್ಕರ ಸ್ವಇಚ್ಛೆಯಿಂದ ತ್ಯಾಗ ಮಾಡುವವನು ಪ್ರಾಕೃತ ಮನುಷ್ಯನಿಗೆ ಅರ್ಥವಾಗಲಾರದು ಅಥವಾ ನಿರ್ಣಯಿಸಲಾರನು. ಏಕೆಂದರೆ ಪ್ರಾಕೃತ ಮನುಷ್ಯನಿಗೆ ಈ ವಿಷಯಗಳು ಬೆಲೆಯುಳ್ಳದ್ದಾಗಿರುವುದರಿಂದ ಅವನಿಗೆ ಅಸಹಜ ವಾಗಿಯೂ ಅಸಮಂಜಸವಾಗಿಯೂ ತೋರಿಬರುತ್ತದೆ. ಆದುದರಿಂದ ಕರ್ತನ ಹಿಂಬಾಲಕರನ್ನು ಪ್ರಾಪಂಚಿಕ ಮನಸ್ಸುಳ್ಳ ಈ ಲೋಕದವರು **'ಮೂರ್ಖರು'** ಎಂದು ಎಣಿಸುತ್ತಾರೆ (1 ಕೊರಿಂಥ 2:–12–16 ನೋಡಿರಿ). **"ನಾವಂತೂ ಕ್ರಿಸ್ತನ ನಿಮಿತ್ತ ಹುಚ್ಚರಾಗಿದ್ದೇವೆ. ನೀವೋ ಕ್ರಿಸ್ತನಲ್ಲಿ ಬುದ್ಧಿವಂತರಾಗಿದ್ದೀರಿ; ನಾವು ಬಲಹೀನರು, ನೀವು ಬಲಿಷ್ಟರು; ನೀವು ಮಾನಶಾಲಿಗಳು ನಾವು ಮಾನಹೀನರು"** – 1 ಕೊರಿಂಥ 4:10).

## ಸಹಾಯಕನು

## The Parakletos, The Comforter

Parakletos ಎಂಬ ಪದವನ್ನು ಯೋಹಾನ 14:16,26 ರಲ್ಲಿ comforter ಎಂಬುದಾಗಿ ಭಾಷಾಂತರಿಸಲಾಗಿದೆ. ಆದರೆ comforter ಎಂಬ ಪದದ ಆಲೋಚನೆಯು ಸಮಾಧಾನಪಡಿಸು (soothe), ಶಾಂತಗೊಳಿಸು (pacify) ಎಂಬ ಪದಗಳಿಂದ ಬಂದುದಾಗಿದ್ದು ಇಲ್ಲಿ ಅದು ಸರಿ ಎನಿಸುವುದಿಲ್ಲ. ಸರಿಯಾದ ಆಲೋಚನೆಯೆಂದರೆ ಸಹಾಯಮಾಡುವುದು, ಪ್ರೋತ್ಸಾಹಿಸುವುದು, ನೆರವಾಗುವುದು, ಬಲಪಡಿಸುವುದು. ಆದುದರಿಂದ ನಮ್ಮ ಕರ್ತನ ವಾಗ್ದಾನದಂತೆ ತಂದೆಯು ಕ್ರಿಸ್ತನ ಹೆಸರಿನಲ್ಲಿ, ಕ್ರಿಸ್ತನ ಪ್ರತಿನಿಧಿಯಾಗಿ ಕಳುಹಿಸಿಕೊಡುವ ಪವಿತ್ರಾತ್ಮನು ಆತನ ಅನುಯಾಯಿಗಳ ಬಳಿ ಇದ್ದು ಅವರಿಗೆ

ಅಗತ್ಯಬಿದ್ದಾಗ ಸಹಾಯ ಮಾಡುವವನಾಗಿದ್ದಾನೆ. ಆತನು ಪವಿತ್ರ ಶಕ್ತಿಯನ್ನು ಹೊಂದಿದವನಾಗಿದ್ದು ಅದರ ಮೂಲಕವಾಗಿ ಆತನು ಆ ಜನರಿಗೆ ಮಾರ್ಗದರ್ಶನ ಮಾಡುವವನಾಗಿದ್ದಾನೆ ಮತ್ತು ಅವರುಗಳು ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯಲು ನಿರ್ದೇಶಿಸುವವನಾಗಿದ್ದಾನೆ. ನಿಜವಾಗಿಯೂ, ಆತ್ಮನ ಎಲ್ಲಾ ಸೇವೆಗಳೂ ಆತನ ಸ್ವಂತ ಸೇವೆಗಳಾಗಿವೆ ಎಂಬುದನ್ನು **"ನಾನು ನಿಮ್ಮನ್ನು ಅನಾಥರನ್ನಾಗಿ ಬಿಡುವುದಿಲ್ಲ, ನಿಮ್ಮ ಬಳಿಗೆ ಬರುತ್ತೇನೆ"** (ವಚನ 18) ಎಂದು ಹೇಳುವುದರ ಮೂಲಕ ನಾವು ಅರ್ಥಮಾಡಿಕೊಳ್ಳುವಂತೆ ಕರ್ತನು ಮಾಡುವವನಾಗಿದ್ದಾನೆ. ಈ ರೀತಿಯಲ್ಲಿ ಆತನು ತನ್ನನ್ನು ಪವಿತ್ರಾತ್ಮನೊಂದಿಗೆ ಗುರುತಿಸಿಕೊಳ್ಳುತ್ತಾನೆ. ಯಾವನಲ್ಲಿಯಾದರೂ ಕ್ರಿಸ್ತನ ಆತ್ಮನು ಇಲ್ಲವಾದರೆ ಆತನು ಕ್ರಿಸ್ತನವನಲ್ಲ. ಆತನಲ್ಲಿ ದೈವಿಕ ಸಹಾಯವಾದ ಆ ಸಹಾಯಕನೂ ಇಲ್ಲ.

ದೇವರ ಈ ಶಕ್ತಿಯು ಸಮಗ್ರ ಸಭೆಯಲ್ಲಿ ಅದೆ. ಆದಾಗ್ಯೂ ಪ್ರತಿಯೊಬ್ಬರೂ ಪವಿತ್ರ ಪ್ರಭಾವದಲ್ಲಿನ ತನ್ನ ಪಾಲನ್ನು ವ್ಯಕ್ತಿಗತವಾಗಿ ಆತ್ಮೀಕ ವಾಹಿನಿಯೊಂದಿಗೆ ತಮ್ಮ ವೈಯುಕ್ತಿಕ ಸಂಬಂಧದ ನೆಲೆಯಲ್ಲಿ ಹೊಂದಿಕೊಳ್ಳುತ್ತಾರೆ. ಸತ್ಯವು ತಾನೇ ಸತ್ಯದ ಆತ್ಮನಲ್ಲಿನ ಪ್ರಮುಖ ವಾಹಿನಿಯಾಗಿದೆ; ಆದರೆ ಸತ್ಯದೊಂದಿಗೆ ನಿಕಟವಾಗಿ ಸಂಬಂಧ ಹೊಂದಿರುವವರು ಮತ್ತು ಅದರ ಆತ್ಮವನ್ನು ಆ ಮಟ್ಟಕ್ಕೆ ಹೊಂದಿದವರು ಸಹಾ ಆತ್ಮನು ಸಹಾಯಮಾಡುವ ಮತ್ತು ಇತರರರನ್ನು ಪ್ರಭಾವಗೊಳಿಸುವ ವಾಹಿನಿಯ ಮೂಲಕವೇ ವರ್ತಿಸುತ್ತಾರೆ.

ದೇವರ ಶಕ್ತಿ ಅಥವಾ ಆತ್ಮವು ಮಾನವರಿಗೆ ಅದೃಶ್ಯವಾಗಿವೆ; ಆದರೆ ಅದರ ಪರಿಣಾಮಗಳು ಸುಸ್ಪಷ್ಟವೂ, ಗೋಚರವೂ ಆಗಿದೆ. ಇದನ್ನು ತಾಮ್ರದ ತಂತಿಯ ಮೂಲಕ ಹರಿಯುವ ವಿದ್ಯುಚ್ಛಕ್ತಿಗೆ ಉದಾಹರಿಸಬಹುದು; ಅದು ಅದೃಶ್ಯವಾಗಿದೆ, ಆದರೆ ಕಾರೊಂದಕ್ಕೆ ಮೋಟಾರನ್ನು ಅಳವಡಿಸಲಾಗಿದ್ದು, ಅದು ತನ್ನ ಬಾಹುಗಳಿಂದ ಅಥವಾ ಟ್ರಾಲಿಯಿಂದ ಆ ತಂತಿಯನ್ನು ಮುಟ್ಟಿದಾಕ್ಷಣ ಕಾರಿನ ಚಲನೆಯಲ್ಲಿ ಆ ಶಕ್ತಿಯು ಪ್ರಕಟಗೊಳ್ಳುತ್ತದೆ. ಅದೇ ವಿದ್ಯುಚ್ಛಕ್ತಿಯು ಬೇರೊಂದು ರೀತಿಯ ವ್ಯವಸ್ಥೆಯ ಮೂಲಕ ಕಾರಿನಲ್ಲಿ ಬೆಳಕನ್ನು ಉಂಟುಮಾಡುತ್ತದೆ. ಅದೇ ವಿದ್ಯುಚ್ಛಕ್ತಿಯ ಮತ್ತೊಂದು ರೀತಿಯ ವ್ಯವಸ್ಥೆಯಿಂದ ಶಾಖೋತ್ಪತ್ತಿ ಉಂಟಾಗುತ್ತದೆ ಮತ್ತು ಬೇರೊಂದು ತಂತ್ರದ ಮೂಲಕ ಟೆಲಿಗ್ರಾಫ್, ಮತ್ತು ಟೆಲಿಫೋನ್‌ಗಳ ಮೂಲಕ ಸಂಪರ್ಕ ಸಾಧಿಸ ಬಹುದಾಗಿದೆ. ಇವೆಲ್ಲವೂ ಅದರ ಅನುಕೂಲಕರ ವ್ಯವಸ್ಥೆಗಳ ಆಶೀರ್ವಾದವಾಗಿದೆ. ಮತ್ತೊಂದು ರೀತಿಯಲ್ಲಿ ಖುರ್ಚಿಗಳಿಗೆ ವಿದ್ಯುತ್ ಪ್ರವಹಿಸುವಂತೆ ಮಾಡಿ ಆ ಮೂಲಕ ಮರಣವನ್ನುಂಟು ಮಾಡಬಹುದಾದ ಸಾಧನವನ್ನಾಗಿಯೂ ಇದನ್ನು ಬಳಸಬಹುದು. ಆದುದರಿಂದ ಪವಿತ್ರ ಆತ್ಮನು ದೇವರ ಆತ್ಮಿಕ ಪ್ರಭಾವ ಅಥವಾ ಶಕ್ತಿಯಾಗಿದೆ – ಅದು ಚಲಿಸುತ್ತದೆ. ಅದು ಬೆಳಗಿಸುತ್ತದೆ. ಬಿಸಿಗೊಳಿಸುತ್ತದೆ ಮತ್ತು ತಮ್ಮಲ್ಲಿ ಯುಕ್ತವಾದ ಸ್ಥಿತಿಯುಳ್ಳವರಿಗೆ ಆದೇಶಿಸುತ್ತದೆ ಮತ್ತು ಸೂಕ್ತವಾದ ವಾಹಿನಿಯ ಮೂಲಕ ತನ್ನ ಸಂಬಂಧಕ್ಕೆ ಕರೆತರುತ್ತದೆ; ಅದು ಇಚ್ಛಾಪೂರ್ವಕವಾಗಿ ಪಾಪ ಮಾಡುವವರಿಗೆ ಮರಣವನ್ನೂ ಅಂದರೆ ಎರಡನೆಯ ಮರಣವನ್ನೂ ಉಂಟುಮಾಡಬಹುದಾಗಿದೆ. ದೇವಜನರಲ್ಲಿ ಪ್ರತಿಯೊಬ್ಬರೂ ಸೂಕ್ತವಾದ ಸಾಧನ ಸಲಕರಣೆಯನ್ನು ಹೊಂದಿರುವುದು ಎಷ್ಟೋ ಅವಶ್ಯವಾಗಿದೆ ಮತ್ತು ಇದರ ಸೂಕ್ತವಾದ ಜೋಡಣೆಗಳು ಆತ್ಮನಿಂದ ತುಂಬಿಕೊಂಡಿರಬೇಕು ಮತ್ತು ಎಲ್ಲಾ ಒಳ್ಳೆಯ ಕೆಲಸಗಳಲ್ಲಿ ಚಟುವಟಿಕೆಯಿಂದಿರುವಂತೆ ಮಾಡಬೇಕು.

ಈ ಉಲ್ಲೇಖಗಳಿಗೆ ಸಂಬಂಧಿಸಿದ ಯಾವುದೂ ಪವಿತ್ರಾತ್ಮನನ್ನು ಮತ್ತೊಬ್ಬ ಸಹಾಯಕ ಅಥವಾ ಸಮಾಧಾನದಾಯಕ ಅಥವಾ ಬಲಗೊಳಿಸುವಾತನೂ ಆಗಿದ್ದು ಆತನು ಮತ್ತೊಬ್ಬ ದೇವರು ಅಂದರೆ ತ್ರೈಯೇಕತ್ವದ ದೇವರುಗಳಲ್ಲಿ ಒಬ್ಬನು ಎಂಬ ಅರ್ಥವನ್ನು ಸೂಚಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಈ ಸಂಬಂಧಗಳು ಸಮಾಧಾನ ಪಡಿಸುವ ಅಥವಾ ಸಹಾಯಮಾಡುವ ಪವಿತ್ರಾತ್ಮನು ತಂದೆಯ ಆತ್ಮವಾಗಿದ್ದಾನೆ ಮತ್ತು ಮಗನ ಆತ್ಮವಾಗಿದ್ದಾನೆ ಎಂಬುದನ್ನು ತೋರಿಸುತ್ತವೆ. 18 ಮತ್ತು 23ನೇ ವಚನಗಳಲ್ಲಿ ತಂದೆ ಮತ್ತು ಮಗನು ಆತ್ಮನ ಮೂಲಕವಾಗಿ ಸಭೆಯನ್ನು ಬಲಪಡಿಸುವರು ಮತ್ತು ಅದಕ್ಕೆ ಮಾರ್ಗದರ್ಶನವನ್ನು ನೀಡುವರು, ಸಮಾಧಾನ ಪಡಿಸುವವರು ಎಂದು ಉಲ್ಲೇಖಿಸಲಾಗಿದೆ. ಆದುದರಿಂದ ನಮ್ಮ ಕರ್ತನು ಪುನಃ **"ನೋಡಿರಿ! ನಾನು ಯುಗದ ಸಮಾಪ್ತಿಯವರೆಗೆ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ"** (ಮತ್ತಾಯ 22:20) ಎಂದಿದ್ದಾನೆ. ಆದರೆ ಇದು ಪವಿತ್ರಾತ್ಮನ ರೂಪದಲ್ಲಿಯೇ ಹೊರತು ಶಾರೀರಕವಾದ ರೀತಿಯಲ್ಲಲ್ಲ.

He, Him, Himself ಇವೇ ಮುಂತಾದ ಪದಗಳು ಈ ಸಹಾಯಕನನ್ನು (Parakletos) ಸೂಚಿಸುವ ಪದಗಳಾಗಿವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇವುಗಳನ್ನು ಸಮಾನವಾದ ಅನುರೂಪತೆಯೊಂದಿಗೆ She, Her, Herself ಅಥವಾ it, itself ಎಂಬುದಾಗಿಯೂ ತರ್ಜುಮೆಗೊಳಿಸಬಹುದಾಗಿದೆ. ಈ ಸಂಬಂಧದಲ್ಲಿ, Himself ಎಂಬ ಅರ್ಥ ನೀಡುವ Heautou ಎಂಬ ಪದವನ್ನು itself ಎಂಬುದಾಗಿ ನಮ್ಮ ಸಾಮಾನ್ಯ ಭಾಷಾಂತರದ ಸತ್ಯವೇದಗಳಲ್ಲಿ ಒಂಬತ್ತು ಸಾರಿ ಉಪಯೋಗಿಸಲಾಗಿದೆ. ಈ ಸಂಬಂಧದಲ್ಲಿ He ಎಂಬ

ಅರ್ಥ ನೀಡುವ Ekinos ಎಂಬುದನ್ನು ಬಹಳ ಸಾರಿ ಅದು (that) ಮತ್ತು ಅವುಗಳು (those) ಎಂಬುದಾಗಿ ಉಪಯೋಗಿಸಲ್ಪಟ್ಟಿದೆ. Ekinos ಎಂಬ ಪದವು 1 ಯೋಹಾನ 5:16 ರಲ್ಲಿ it ಎಂಬುದಾಗಿ ಉಪಯೋಗಿಸಲ್ಪಟ್ಟಿದೆ – it "I do not say that ye shall pray for it" (the sin unto death) [ಆ ಪಾಪದ ವಿಷಯದಲ್ಲಿ ಬೇಡಿಕೊಳ್ಳಬೇಕೆಂದು ನಾನು ಹೇಳುವುದಿಲ್ಲ].

## ಆತನು ನಿಮ್ಮನ್ನು ಎಲ್ಲಾ ವಿಷಯಗಳಲ್ಲಿ ಸತ್ಯಕ್ಕೆ ಸೇರಿಸುತ್ತಾನೆ
## "He Shall Guide You into all Truth"

ದೇವರ ಶಕ್ತಿಯಾದ **"ಸತ್ಯದ ಆತ್ಮನು"** ತನ್ನ ಜನರ ಬಳಿಗೆ ಬರುವ ವಾಹಿನಿಯನ್ನು ಸೂಚಿಸುವವನಾಗಿ ನಮ್ಮ ಕರ್ತನು – **"ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ"** ಎಂದು ಹೇಳಿದ್ದಾನೆ. ಅಂದರೆ ನನ್ನ ಮಾತುಗಳು ದೇವರ ಮನಸ್ಸನ್ನು, ಚಿತ್ತವನ್ನು, ಆತ್ಮನನ್ನು ವ್ಯಕ್ತಪಡಿಸುತ್ತವೆ ಎಂದು ಹೇಳಿದ ಹಾಗಾಯಿತು. ಈ ರೀತಿಯಲ್ಲಿ ನಮ್ಮ ಮುಂದೆ ನಿರಂತರವಾಗಿ ನಮ್ಮ ಜಯಕ್ಕೆ ಬೇಕಾಗುವಷ್ಟು ಸತ್ಯವುಳ್ಳ ವಾಕ್ಯಗಳು ಅಧ್ಯಯನಕ್ಕಾಗಿ ಇಡಲ್ಪಟ್ಟಿವೆ. ನಾವು ನಮ್ಮ ಕರ್ತನ "ದೇವರ ವಾಕ್ಯದಲ್ಲಿ ಹುಡುಕಿರಿ" ಎಂಬ ಆಜ್ಞೆಯನ್ನು ಕೇಳಿಸಿಕೊಳ್ಳುತ್ತೇವೆ. ಅಪೋಸ್ತಲನಾದ ಪೌಲನು ಬೆರೋಯದ ಸಭೆಯವರ ಉದಾತ್ತ ಗುಣಗಳ ಬಗ್ಗೆ ಪ್ರಸ್ತಾಪಿಸುತ್ತಾ ಅವರು **"ದೇವರ ವಾಕ್ಯವನ್ನು ಸಿದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತುಗಳು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು"** (ಅ.ಕೃ. 17:11) ಎಂದಿದ್ದಾನೆ. ಮತ್ತೊಮ್ಮೆ ಆತನು **"ನಾವು ಕೇಳಿದ ಸಂಗತಿಗಳಿಗೆ ತಪ್ಪಿಹೋದೇವೆಂದು ಭಯಪಟ್ಟು ಅವುಗಳಿಗೆ ಹೆಚ್ಚಾಗಿ ಲಕ್ಷ್ಯಕೊಡುವವರಾಗಬೇಕು"** (ಇಬ್ರಿಯ 2:1) ಎನ್ನುತ್ತಾನೆ ಮತ್ತು ತಿಮೋಥೆಯನಿಗೆ ಆತನು ನೀಡಿದ **"ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವೂ ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿವೆ. ಆದುದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು"** (2 ತಿಮೋ. 3:16–17) ಎಂಬ ಬುದ್ಧಿಮಾತುಗಳು ನಮ್ಮಲ್ಲಿವೆ. ಅಪೋಸ್ತಲನಾದ ಪೇತ್ರನು ಕೂಡ ನಮ್ಮನ್ನು ಒತ್ತಾಯಪಡಿಸುತ್ತಾ ಹೇಳುತ್ತಾನೆ; "ಇದಲ್ಲದೆ ಪ್ರವಾದನ ವಾಕ್ಯವು ನಮಗೆ ಮತ್ತೂ ದೃಢವಾಗಿದೆ" (ದೈವಿಕ ಪ್ರಕಟಣೆ) – ಯೋಹಾನ 5:39, 2 ಪೇತ್ರ 1:19.

ದೇವರ ಆತ್ಮನಿಂದ ಅಥವಾ ಮನಸ್ಸಿನಿಂದ ತುಂಬಿಕೊಳ್ಳುವ ವಾಗ್ದಾನವು ಕೇವಲ ದೇವರ ವಾಕ್ಯಗಳನ್ನು ಹೊಂದಿರುವವರಿಗಾಗಿ ಅಥವಾ ಅದನ್ನು ಕೇವಲ ಓದುವವರಿಗಾಗಿ ಮಾತ್ರ ಅಲ್ಲ. ಆದರೆ ಅವುಗಳನ್ನು ಪ್ರಮಾಣಿಕವಾಗಿ ಶೋಧಿಸಿ ತಿಳುಕೊಳ್ಳ ಬಯಸುವವರಿಗೆ. ಅದನ್ನು ಅರ್ಥಮಾಡಿಕೊಳ್ಳುವವರು ಅದರ ಚಿತ್ತವನ್ನು ಒಪ್ಪಿಕೊಂಡು, ಅಷ್ಟೇಕೆ ಅದಕ್ಕೆ ವಿಧೇಯರಾಗಲು ಅಪೇಕ್ಷೆಯುಳ್ಳವರಿಗೆ ಮಾತ್ರ. ನಾವು ದೇವರಾತ್ಮನಿಂದ ತುಂಬಲ್ಪಟ್ಟವರಾಗಿ ಸತ್ಯವಾಕ್ಯವೆಂಬ ಬುಗ್ಗೆಯಲ್ಲಿ ಆಳವಾಗಿ ಕುಡಿಯುವವರಾಗಬೇಕು. ನಮ್ಮ ಪ್ರಾಪಂಚಿಕವಾದ ಪಾತ್ರೆಯು ಅಸಮರ್ಪಕವೂ, ಸೋರಿಹೋಗುವಂತಾದ್ದೂ ಆಗಿರುವುದರಿಂದ ಆತ್ಮೀಕವಾದ ಸಂಗತಿಗಳು ಜಾರಿಹೋಗುವುದು ಸುಲಭ (ಇಬ್ರಿಯ 2:1); ಇಂಥಾಃ ಪ್ರಕರಣದಲ್ಲಿ ನಮ್ಮನ್ನೂ ನಿರಂತರವಾಗಿ ಆವರಿಸಿರುವ ಈ ಲೋಕದ ಆತ್ಮವು ಖಾಲಿ ಸ್ಥಳವನ್ನು ತುಂಬಲು ತ್ವರಿತವಾಗಿ ನುಗ್ಗುತ್ತದೆ. ನಿಜವಾಗಿಯೂ, ನೂತನ ಆತ್ಮನನ್ನು, ನೂತನ ಮನಸ್ಸನ್ನು, ಪವಿತ್ರತೆಯ ಆತ್ಮ ಅಥವಾ ಮನೋ ಪ್ರವೃತ್ತಿಯನ್ನು ಪದಚ್ಯುತಿಗೊಳಿಸುವ ದೃಷ್ಟಿಯಿಂದ ಕರ್ತನ ಜನರ ಮೇಲೆ ಈ ಲೋಕದ ಆತ್ಮನ ನಿರಂತರವಾದ ಒತ್ತಡವಿರುತ್ತದೆ. ಆದಕಾರಣ ನಮ್ಮಲ್ಲಿನ ದೇವರ ಆತ್ಮವು ನಂದಿ ಹೋಗದಂತೆ, ಕರ್ತನ ಎಲ್ಲಾ ನಿಷ್ಠಾವಂತ ನೂತನ ಸೃಷ್ಟಿಗಳು ಈ ಲೋಕದ ಆತ್ಮನಿಂದ ತುಂಬಿಕೊಳ್ಳದಂತೆ ತಾವು ಸತ್ಯದ ಬುಗ್ಗೆಯ, ಕರ್ತನ ಮತ್ತು ಆತನ ವಾಕ್ಯದ ಹೆಚ್ಚು ಸಮೀಪದಲ್ಲಿ ಜೀವಿಸುವಂತೆ ನೋಡಿಕೊಳ್ಳ ಬೇಕಾಗುತ್ತದೆ.

ಸತ್ಯದ ಜ್ಞಾನವು, ದೇವರ ವಾಕ್ಯದ ಜ್ಞಾನವು ಮುಖ್ಯವಾದುದಾದರೂ ಸತ್ಯದ ಆತ್ಮನನ್ನು ಹೊಂದಿಕೊಳ್ಳುವುದಕ್ಕೆ ಅಗತ್ಯವಾದರೂ, ಪರಂತು ಒಬ್ಬರಲ್ಲಿ ದೇವರ ವಾಕ್ಯದ ಆತ್ಮವು ಇಲ್ಲದೇ ಕೇವಲ ಅದರ ಹೆಚ್ಚಾದ ಜ್ಞಾನವು ಇರಬಹುದೆಂದು ಎಚ್ಚರನೀಡುವುದು ಯಥೋಚಿತವೆಂದು ನಾವು ನೆನಸುತ್ತೇವೆ. ಸತ್ಯದ ಆತ್ಮನನ್ನು ಪಡಕೊಳ್ಳಬೇಕಾದಲ್ಲಿ ಹೃದಯದಲ್ಲಿ ಸತ್ಯದೊಂದಿಗಿನ ಸಾಮರಸ್ಯಕ್ಕೆ, ದೇವರವಾಕ್ಯಗಳಲ್ಲಿ ತಿಳಿಸಿರುವ ಆತನ ಚಿತ್ತದೊಂದಿಗೆ ಮಾನಸಿಕ ಒಪ್ಪಿಗೆ ಮತ್ತು ಸಹಕಾರಕ್ಕೆ ಬರಬೇಕಾಗುತ್ತದೆ. ಈ ಶರತ್ತನ್ನು ಒಂದು ರೀತಿಯಲ್ಲಿ ಮಾತ್ರವೇ ಸಾಧಿಸಲು ಸಾಧ್ಯ ; ಮೊದಲಿಗೆ ನಮ್ಮ ಕರ್ತನೂ ರಕ್ಷಕನೂ, ನೀತಿನಿರ್ಣಯಿಸುವವನೂ ಆದ ಯೇಸುಕ್ರಿಸ್ತನನ್ನು ಅಂಗೀಕರಿಸಿಕೊಳ್ಳಬೇಕು ಮತ್ತು ಎರಡನೆಯದಾಗಿ ನಮ್ಮನ್ನು ಯಾವ ರೀತಿಯಲ್ಲಿಯೂ ಕಾದಿರಿಸಿಕೊಳ್ಳದೆ ಆತನಿಗೆ ಪ್ರತಿಷ್ಠೆಪಡಿಸಿಕೊಂಡು ಆತನನ್ನು ತಿಳುಕೊಳ್ಳಲು ಮತ್ತು ಆತನ ಚಿತ್ತವನ್ನು ನೆರವೇರಿಸಲು ಬಯಸಬೇಕು.

ಆದರೆ ಈ "ಸತ್ಯದ ಆತ್ಮನು", "ಪವಿತ್ರ ಆತ್ಮ ಅಥವಾ ಮನಸ್ಸು" ದೇವರ ಮತ್ತು ಆತನ ನೀತಿವಂತಿಕೆಯೊಂದಿಗೆ ಸಾಮರಸ್ಯದಲ್ಲಿದ್ದು ದೇವರಾತ್ಮನ ವರಗಳು ನೀಡಬಹುದಾದ ವರಗಳೊಂದಿಗೆ ಅಥವಾ ಸಾಧುತ್ವ, ನಮ್ರತೆ ತಾಳ್ಮೆ, ಸಹೋದರ ಕರುಣೆ ಮತ್ತು ಪ್ರೀತಿಯಿಂದೊಡಗೂಡಿದ ಶಾಂತಿದಾಯಕವಾದ ನೀತಿವಂತಿಕೆಯೆಂಬ "ದೇವರಾತ್ಮನ ಫಲಗಳೊಂದಿಗೆ" ಸದಾ ಗೊಂದಲಕ್ಕೀಡಾಗಬಾರದು. ಹಾಗೆ ಮಣಿಯುವಂತೆ ಆದರೂ ಕೂಡ ಸತ್ಯದ ಆತ್ಮವು ಅಂಥಾಃ ಫಲಗಳನ್ನು ನಮ್ಮ ದಿನನಿತ್ಯದ ಜೀವಿತದಲ್ಲಿ ನೀಡುವ **ಮೊದಲೇ** ನಮ್ಮದಾಗಬೇಕು; ಕೆಲವರಲ್ಲಿ ಒಳ್ಳೆಯ ಗಾತ್ರದ, ಸವಿರುಚಿಯಿಂದೊಡಗೂಡಿದ ಪ್ರಬುದ್ಧ ಫಲದ ಬೆಳವಣಿಗೆ ಕಾಲವು ಉಳಿದವುಗಳಿಗಿಂಥ ದೀರ್ಘಾವಧಿಯ ದಾಗಿರುತ್ತದೆ. ಆದರೆ ಪ್ರತಿಯೊಬ್ಬರೂ ನಮ್ಮ ಕರ್ತನ ಮಾತುಗಳಾದ "ನನ್ನ ತಂದೆಯು ಮಹಿಮೆ ಹೊಂದಿಕೊಳ್ಳುವಂತೆ ನೀವು ಹೆಚ್ಚಿನ ಫಲಗಳನ್ನು ಕೊಡುವವರಾಗಬೇಕು – ಹೀಗಾದಲ್ಲಿ ನೀವು ನನ್ನ ಶಿಷ್ಯರಾಗುವಿರಿ"ಎಂಬ ಮಾತುಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಾವು ದ್ರಾಕ್ಷೆ ಬಳ್ಳಿಯ ಸಾಮ್ಯವನ್ನೂ ನೆನಪಿಸಿಕೊಳ್ಳಬೇಕು. ಅದರಲ್ಲಿ ಕೊಂಬೆಗಳು ಆತನ ಪ್ರತಿಷ್ಠೆ ಹೊಂದಿದ ಶಿಷ್ಯರನ್ನು ಪ್ರತಿನಿಧಿಸುತ್ತವೆ. ಈ ಬಗ್ಗೆ ಆತನು "ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯನ್ನು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ" (ಯೋಹಾನ 15:2) ಎಂದಿದ್ದಾನೆ.

ಕ್ರೈಸ್ತನಾದವನು ತನ್ನ ಪ್ರತಿಷ್ಠೆಯ ಕ್ಷಣದಿಂದ ಒಂದು ಕೊಂಬೆಯಾಗಿದ್ದಾನೆ ಮತ್ತು ಬೇರಿನಿಂದ ಸಸ್ಯದ ಅಂತಸ್ಸಾರ ಪಡೆಯುವುದರಲ್ಲಿ ಭಾಗಿದಾರನಾಗಿದ್ದಾನೆ. ಆತನು ಪವಿತ್ರಾತ್ಮನಲ್ಲಿ ಭಾಗಿದಾರನು. ಹಾಗಿದ್ದರೂ ಆತನು ತಾನೇ ತಾನಾಗಿ ಎಲ್ಲಾ ಆತ್ಮೀಕ ವರಗಳನ್ನು ಅಥವಾ ಅವುಗಳಲ್ಲಿ ಯಾವುದಾದರೊಂದನ್ನು ಸಮರ್ಪಕವಾಗಿ ಫಲಿಸುತ್ತಾನೆಂದು ನಿರೀಕ್ಷಿಸಲಾಗದು. ಸಭೆಯೆಂಬ ಬಳ್ಳಿಯ ಮೊದಲನೆಯ ನಿದರ್ಶನವು ಇತರ ಕೊಂಬೆಗಳೊಂದಿಗೆ ಇರುವ ಅದರ ಸಹವಾಸ, ಬೇರಿನೊಂದಿಗೆ ಇರುವ ಸಂಬಂಧ ಮತ್ತು ಜೀವನದ ಸಾಕ್ಷಿಗಳು. ನಂತರದಲ್ಲಿ ಸ್ಪರ್ಷಾಂಗಗಳು ಅಥವಾ ಕುಡಿಗಳಿರುತ್ತವೆ ಮತ್ತು ಆ ಮೂಲಕ ಪ್ರಗತಿಯನ್ನು ಬಯಸಲಾಗುವುದು ಮತ್ತು ಅದು ಉಂಟಾಗುತ್ತದೆ. ನಂತರದಲ್ಲಿ ಎಲೆಗಳು, ಕಾರ್ಯಾಂಗ, ನಂತರದಲ್ಲಿ ನಾವು ನೋಡಬೇಕಾದುದು ಪುಷ್ಪ ಮತ್ತು ಅದರ ನಂತರ ಫಲ (ಹಣ್ಣುಗಳು). ಆದರೆ ಈ ಹಣ್ಣುಗಳು ಮೊದಲಿಗೆ ಬಹಳ ಸಣ್ಣಗಾತ್ರದವುಗಳಾಗಿರುತ್ತವೆ ಮತ್ತು ಹುಳಿಯಾಗಿರುತ್ತವೆ. ಮಹಾತೋಟಗಾರನಿಗೆ ಮೆಚ್ಚಿಗೆಯಾಗುವ ಒಳ್ಳೆಯ ಗಾತ್ರದ ದ್ರಾಕ್ಷೆಹಣ್ಣು ಗಳುಂಟಾಗಲು ಸಮಯ ಹಿಡಿಯುತ್ತದೆ. ಅದರಂತೆ ಪ್ರತಿಯೊಂದು ಬಳ್ಳಿಯಲ್ಲಿಯೂ – ಕ್ರಿಸ್ತನ ದೇಹವಾದ ಸಭೆಯ ಪ್ರತಿಯೊಂದು ಅಂಗಗಳಲ್ಲಿಯೂ ನಿರೀಕ್ಷಿಸುವ ಕ್ರಿಸ್ತನ 'ಆತ್ಮನ ಫಲಗಳು' ಸಹಾ. – ತಕ್ಕ ಸಮಯದಲ್ಲಿ ಆತ್ಮೀಕ ಫಲಗಳಾದ ಸಾದುತ್ವ, ನಮ್ರತೆ, ತಾಳ್ಮೆ, ಸಹೋದರ ಕರುಣೆ, ನಂಬಿಕೆ, ನಿರೀಕ್ಷೆ, ಪ್ರೀತಿ ಇವುಗಳು ಕಂಡುಬಾರದಿದ್ದಲ್ಲಿ – ಆ ಕೊಂಬೆಯು ಕೊಂಬೆ ಎನಿಸಿಕೊಳ್ಳುವುದಿಲ್ಲ ಅದನ್ನು ಕೇವಲ ಸಾರವನ್ನು ಹೀರುವುದೆಂದು ಪರಿಗಣಿಸಿ ಎಲ್ಲಾ ಸಂಯೋಜನೆ ಮತ್ತು ಸೌಕರ್ಯಗಳಿಂದ ಕಡಿದು ಹಾಕಲಾಗುವುದು.

ಸುವಾರ್ತಾ ಯುಗದ ಆರಂಭದಲ್ಲಿ ದಯ ಪಾಲಿಸಲ್ಪಟ್ಟ 'ಆತ್ಮೀಕ ವರ'ಗಳ ಬಗ್ಗೆ ನಾವೀಗಾಗಲೇ ಕಂಡುಕೊಂಡಿದ್ದೇವೆ. ಇವುಗಳು ಸಭೆಯ ಸ್ಥಾಪನೆಗಾಗಿ ನೀಡಲ್ಪಟ್ಟವುಗಳಾಗಿದ್ದು 'ಆತ್ಮೀಕ ಫಲ'ಗಳಿಂದ ಬೇರೆಯಾಗಿವೆ. ಅಪೋಸ್ತಲರುಗಳು ತಮ್ಮ ಕೈಗಳನ್ನು ವಿಶ್ವಾಸಿಗಳ ತಲೆಯಮೇಲೆ ಇಡುವುದರ ಮೂಲಕ ಈ ವರಗಳು ಅನುಗ್ರಹಿಸಲ್ಪಟ್ಟಿವೆ. ಅವುಗಳು ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಮಾತ್ರವೇ ಸ್ವಯಂ ಪ್ರೇರಿತವಾಗಿ ನೀಡಲ್ಪಟ್ಟಿವೆ (ಅ.ಕೃ. 2:4, 10:45 ನೋಡಿರಿ). ಮಂತ್ರವಾದಿಯಾಗಿದ್ದ ಸಿಮೋನನೆಂಬುವವನು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಪವಿತ್ರಾತ್ಮವರವನ್ನು ತನ್ನ ಸ್ವಂತ ಉಪಯೋಗಕ್ಕಾಗಿ ಹೊಂದಿಕೊಂಡನು. ಆದರೆ, ಅದನ್ನು ಆತನು ಅನ್ಯಜನರಿಗೆ ನೀಡಲು ಅಸಾಧ್ಯವಾದಾಗ ಅಪೋಸ್ತಲರಿಗೆ ಮಾತ್ರವೇ ಮೀಸಲಾಗಿದ್ದ ಆ ವರವನ್ನು ತನಗೂ ದಯಪಾಲಿಸಬೇಕೆಂದು ಅದಕ್ಕಾಗಿ ಹಣವನ್ನು ನೀಡಲು ಮುಂದಾದಾಗ ಪೇತ್ರನು ಅವನನ್ನು ಗದರಿಸುತ್ತಾನೆ (ಅ.ಕೃ. 8:13–21 ನೋಡಿರಿ). ಇದೇ ಲೆಕ್ಕದಲ್ಲಿ ಸೌವಾರ್ತಿಕನಾದ ಫಿಲಿಪ್ಪನು ಸಹಾ ಸೂಚಕ ಕಾರ್ಯಗಳನ್ನೂ, ಮಹತ್ಕಾರ್ಯಗಳನ್ನೂ ನಿರ್ವಹಿಸಿದರೂ ತಾನೇ ನೇರವಾಗಿ ಈ ವರಗಳನ್ನು ತಾನು ಪರಿವರ್ತನೆಗೊಳಿಸಿದವರಿಗೆ ನೀಡಲು ಶಕ್ತನಾಗಿರಲಿಲ್ಲ. ಇದಕ್ಕಾಗಿ ಆತನು ಅವರುಗಳನ್ನು ಅಪೋಸ್ತಲರ ಬಳಿಗೆ ಕಳುಹಿಸುತ್ತಿದ್ದನು. ಈ ಎಲ್ಲವುಗಳೂ, ಅಪೋಸ್ತಲನಾದ ಪೌಲನು ಹೇಳಿದಂತೆ ಅನೇಕ ವರಗಳು ಇಲ್ಲವಾಗುವುವು ಅಥವಾ ವಿಫಲವಾಗುವುವು ಎಂಬ ಹೇಳಿಕೆಗೆ ಪೂರ್ಣವಾಗಿ ಒಪ್ಪಿಗೆಯಾಗುತ್ತವೆ. ಅಪೋಸ್ತಲರೆಲ್ಲರೂ ತೀರಿಕೊಂಡರು ಮತ್ತು ಅಪೋಸ್ತಲರು ಯಾರಿಗೆಲ್ಲಾ ಈ ವರಗಳನ್ನು ಅನುಗ್ರಹಿಸಿದರೋ ಅವರು ಸಹಾ ತೀರಿಕೊಂಡರು. ಅಪೋಸ್ತಲನು ಸದಾಕಾಲ ನಿಲ್ಲುತ್ತವೆ ಎಂದು ಹೇಳಿದ ನಂಬಿಕೆ, ನಿರೀಕ್ಷೆ ಮತ್ತು ಪ್ರೀತಿಯೆಂಬ ವರಗಳು (1 ಕೊರಿಂಥ 13:13) ಅದ್ಭುತ ವರಗಳಾಗಿರದೆ ಅವು ಬೆಳವಣಿಗೆಯ ಫಲಗಳಾಗಿವೆ ಎಂದು ಆತನು

ಮತ್ತೊಂದೆಡೆ ವಿವರಿಸಿದ್ದಾನೆ – 1 ಕೊರಿಂಥ 13:8; ಯೋಹಾನ 15:16.

ವರಗಳಲ್ಲಿ ಅಪೋಸ್ತಲನು ವಿಶೇಷಿಸುವವುಗಳೆಂದರೆ – (1) ಅಪೋಸ್ತಲರು (2) ಪ್ರವಾದಿಗಳು (3) ತುಂಬಿರುವ ಬೋಧಕರುಗಳು. ಅಪೋಸ್ತಲರ ವರಗಳು ನಮ್ಮ ಬಳಿ ಇನ್ನೂ ಅವೆ. ಅವುಗಳಲ್ಲಿ ನೂತನ ಒಡಂಬಡಿಕೆಯಲ್ಲಿ ತುಂಬಿರುವ ಬೋಧನೆಗಳು ಸಂಪೂರ್ಣವಾದವುಗಳೂ ಆಗಿದ್ದು ಅವುಗಳಿಗೆ ಇನ್ನು ಏನನ್ನೂ ಸೇರಿಸುವ ಅಗತ್ಯವಿಲ್ಲ. ಆದುದರಿಂದ ಹನ್ನೆರಡು ಮಂದಿ ಅಪೋಸ್ತಲರುಗಳಿಗೆ ಯಾವ ಉತ್ತರಾಧಿಕಾರಿಗಳೂ ಇಲ್ಲ ಮತ್ತು ಅವರುಗಳ ಅಗತ್ಯವೂ ಇಲ್ಲ. ದೇವರ ಕುರಿಮರಿಯ ಹನ್ನೆರಡು ಅಪೋಸ್ತಲರುಗಳು ಹನ್ನೆರಡು ನಕ್ಷತ್ರಗಳಂತಿದ್ದು ಸಭೆಯ ಮುಕುಟಗಳಂತಿದ್ದಾರೆ ಮತ್ತು ಅವರುಗಳು ನೂತನ ಯೆರೂಸಲೇಮ್ ಎನಿಸಿಕೊಳ್ಳುವ ಮಹಿಮೆಹೊಂದಿದ ಸಭೆಯ ಹನ್ನೆರಡು ಅಸ್ತಿವಾರಗಳಾಗಿದ್ದಾರೆ (ಯೋಹಾನ 6:70 ಮತ್ತು ಪ್ರಕಟನೆ 12:1; 21:14 ನೋಡಿರಿ). ಸಭೆಯಲ್ಲಿ ಪ್ರವಾದಿಗಳ ಅಥವಾ ವ್ಯಾಖ್ಯಾನಕಾರರ ಮತ್ತು ಬೋಧಕರುಗಳ, ದೇವರ ಸೇವಕರುಗಳ ಮತ್ತು ವಿವಿಧ ವಾಣಿಗಳನ್ನಾಡುವವರ ಸಭೆಯವರ ವರಗಳು ಇನ್ನೂ ಅವೆ; ಆದರೆ ಇವುಗಳನ್ನು ಇನ್ನುಮುಂದೆ ಆತ್ಮವು ತತ್ಕ್ಷಣದಲ್ಲಿ ಮತ್ತು ಚಮತ್ಕಾರಿಕವಾಗಿ ಯಾವುದೇ ಶಿಕ್ಷಣ ಮತ್ತು ತಲಾಂತುಗಳಿಲ್ಲದೆ ಕೇವಲ ಅಪೋಸ್ತೋಲಿಕ ಕೈಗಳನ್ನಿಡುವುದರಿಂದ ಒದಗಿಸುವುದಿಲ್ಲ. ಇಂಥಾಃ ಚಮತ್ಕಾರಗಳು ಇನ್ನು ಮುಂದೆ ಅಗತ್ಯವಿಲ್ಲ ಮತ್ತು ಇನ್ನು ಮುಂದೆ ಅವುಗಳನ್ನು ಖಚಿತವಾಗಿಯೂ ಮೊದಲಿನ ಮಟ್ಟದಲ್ಲಿ ಪ್ರಯೋಗಿಸುವುದಿಲ್ಲ. ಇದರ ಬದಲಾಗಿ ಕರ್ತನು ಯಾರನ್ನಾದರೂ ಸ್ವಾಭಾವಿಕ ಅರ್ಹತೆ ಮತ್ತು ಶಿಕ್ಷಣದ ಮೇರೆಗೆ ಆತನ ಸೇವೆಗೆ ಸಜ್ಜುಗೊಳಿಸುವನು: ಪರಂತು ನಮ್ಮ ಎಲ್ಲಾ ಅರ್ಹತೆಗಳನ್ನು ಒಟ್ಟುಗೂಡಿಸಿದರೂ ಅದಕ್ಕಿಂತ ನಮ್ಮ ಹೃದಯದ ಸ್ಥಿತಿಯು ಕರ್ತನ ದೃಷ್ಟಿಯಲ್ಲಿ ಎಷ್ಟೋ ಮುಖ್ಯವಾದುದು; ಆತನು ತಾನು ಆರಿಸಿಕೊಂಡವರನ್ನು (ಸಂಪೂರ್ಣವಾದ ಆತ್ಮನ ಕಾರಣ) ತನ್ನ ವಿಶೇಷ ಸೇವಕರುಗಳನ್ನಾಗಿಯೂ, ರಾಯಭಾರಿಗಳನ್ನಾಗಿಯೂ ಪೂರ್ಣವಾಗಿ ಉಪಯೋಗಿಸಲು ಶಕ್ತನಾಗಿದ್ದಾನೆ. ಆತನು ಅವರಿಗೆ ತಾನು ಬಯಸಿದಂತೆ ಯಾವುದೇ ರೀತಿಯ ಸಹಾಯಗಳನ್ನು ಅನುಗ್ರಹಿಸುತ್ತಾನೆ, ಉದಾಹರಣೆಗೆ ಆತನ ವಿಶೇಷ ಸೇವಕನಾದ ಮೋಶೆಯು ನಿಧಾನ ಮಾತಾಳಿ ಯಾದುದರಿಂದ ಆತನ ಪರವಾಗಿ ಮಾತನಾಡಲು ಆರೋನನ್ನು ಒದಗಿಸಿದನು.

ಈಗ ಕಾರ್ಯನಿರ್ವಹಣೆ ಅಥವಾ ಪದ್ಧತಿಯಲ್ಲಿ ಬದಲಾವಣೆಗಳು ಇರಬಹುದಾದರೂ ಅದೇ ಕರ್ತನು ಪವಿತ್ರಾತ್ಮನೆಂಬ ತನ್ನ ನಿಯೋಗಿಯ ಮೂಲಕ ಎಲ್ಲಾ ವ್ಯವಹಾರವನ್ನು ನಿರ್ವಹಿಸುತ್ತಿದ್ದಾನೆ. ತನ್ನನ್ನು ಹೆಚ್ಚಾಗಿ ಪ್ರಕಟಿಸಿಕೊಳ್ಳದೆ, ಬಾಹ್ಯ ರೀತಿಯಲ್ಲಿ ಹೆಚ್ಚಾಗಿ ಗ್ರಹಿಸಿಕೊಳ್ಳಲಾಗದಂತೆ ಅದರೆ ನಿಜವಾಗಿಯೂ ಯಾವುದಕ್ಕೂ ಕಡಿಮೆ ಇಲ್ಲದಂತೆ, ಜಾಗರೂಕತೆಯಲ್ಲಿ ಕಡಿಮೆಮಾಡದೆ ತನ್ನ ಸಭೆಯ ಎಲ್ಲಾ ವ್ಯವಹಾರಗಳನ್ನು ವಿವರವಾಗಿ ನಿರ್ದೇಶಿಸುತ್ತಿದ್ದಾನೆ. ಆತನ ಆತ್ಮನಿಂದ ನಡಿಸಲ್ಪಡುವ ಮತ್ತು ಆತನ ವಾಕ್ಯದಿಂದ ಬೋಧಿಸಲ್ಪಟ್ಟಿರುವ ಎಲ್ಲಾ ಕರ್ತನ ಜನರು ತಮ್ಮನ್ನು ಬೋಧಕರುಗಳು, ಸುವಾರ್ತಿಕರು ಎಂದು ಯಾರು ತೋರ್ಪಡಿಸಿಕೊಳ್ಳುತ್ತಾ ಪ್ರಸ್ತುತಿಪಡಿಸಿಕೊಳ್ಳುವರೋ ಅವರನ್ನು ವಿವೇಚನಾಪೂರ್ವಕವಾಗಿ ನಿರ್ಣಯಿಸಬೇಕು. ತಮ್ಮನ್ನು ಬೋಧಕರುಗಳು, ಸುವಾರ್ತಿಕರು ಎಂದು ಹೇಳಿಕೊಂಡವರೆಲ್ಲರನ್ನೂ ಕರ್ತನ ಜನರು ಸ್ವೀಕರಿಸ ಕೂಡದು. ಪವಿತ್ರಾತ್ಮನ ವರಗಳಿಂದ ಯಾರನ್ನು ಕರ್ತನು ಗುರುತಿಸಿದ್ದಾನೋ ಅಂಥವರು ಯಾರೆಂದು ಗ್ರಹಿಸಿಕೊಂಡು ಅವರನ್ನು ಮಾತ್ರವೇ ಸ್ವೀಕರಿಸಬೇಕು. ಪರೀಕ್ಷೆಯೆಂದರೆ, ದೇವರ ವಾಕ್ಯದ ಬಗ್ಗೆ ಅವರ ನಿಷ್ಠೆ – ಅವರು ತಮ್ಮ ಬಗ್ಗೆಯೇ ಬೋಧನೆ ಮಾಡದೆ, ಯೇಸುಕ್ರಿಸ್ತನ ಬಗ್ಗೆ ಮತ್ತು ಆತನ ಶಿಲುಬೆಯ ಮರಣದ ಬಗ್ಗೆ – ದೇವರ ಶಕ್ತಿ ಮತ್ತು ಆತನ ಜ್ಞಾನದ ಬಗ್ಗೆ ಎಲ್ಲಾ ನಂಬಿಗಸ್ತರಿಗೆ ಬೋಧನೆ ಮಾಡುವುದರ ಬಗ್ಗೆ, ನಮಗಾಗಿ ಶಿಲುಬೆಯಲ್ಲಿ ಪ್ರಾಣದಾನ ಮಾಡಿದ ಯೇಸುಕ್ರಿಸ್ತನನ್ನು, ದೇವರ ಶಕ್ತಿಯನ್ನು ಮತ್ತು ಆತನ ವಿವೇಕವನ್ನು ಆತನನ್ನು ನಂಬುವ ಎಲ್ಲರಿಗೂ ಬೋಧಿಸುತ್ತಾರೆಂಬುದು. ಯಾವನಾದರೂ ನಮ್ಮ ಬಳಿಗೆ ಬೇರೆ ಯಾವುದಾದರೂ ಸುವಾರ್ತೆಯೊಡನೆ ಬರುವುದಾದರೆ, ಅಂಥವನನ್ನು ಸತ್ಯದ ಬೋಧಕನನ್ನಾಗಿ ಅಂಗೀಕರಿಸಬಾರದು ಆದರೆ ಆತನನ್ನು ಸುಳ್ಳು ಸೇವಕನನ್ನಾಗಿ ಪರಿಗಣಿಸಬೇಕೆಂಬ ಸೂಚನೆಯಿದೆ. ಆತನು ತಿಳುವಳಿಕೆ ಇಲ್ಲದೆ, ಅಥವಾ ತಿಳುವಳಿಕೆಯಿಂದಲೇ ಹೀಗೆ ಮಾಡಿರಬಹುದು.

ಈ ರೀತಿಯಲ್ಲಿ ದೇವರ ಆತ್ಮ ಅಥವಾ ಪ್ರಭಾವವು, ಪವಿತ್ರಾತ್ಮನು ಅಥವಾ ಸತ್ಯದ ಪ್ರಭಾವವು ದೇವರ ಜನರಿಗೆ ದೈವಿಕ ಜ್ಞಾನದ ಬಗ್ಗೆ ಶಿಕ್ಷಣ ನೀಡುತ್ತದೆ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಾರ್ಗದರ್ಶನ ನೀಡುತ್ತದೆ. ಈ ರೀತಿಯಲ್ಲಿ ಅದು ಈಗ ಸಭೆಗೆ ಪಾಪ ಪ್ರಾಯಶ್ಚಿತ್ತ ಸಂಧಾನದ ವಾಹಿನಿಯಾಗಿದೆ. ಸ್ವಲ್ಪಮಟ್ಟಿಗೆ ಅದೇ ರೀತಿಯಲ್ಲಿ ಬರಲಿರುವ ಕಾಲದಲ್ಲಿ ಈ ಲೋಕಕ್ಕೂ ಪ್ರಾಯಶ್ಚಿತ್ತ ಸಂಧಾನದ ವಾಹಿನಿಯಾಗಿದೆ. ಆಗ **"ಆತ್ಮನೂ ಮದಲಗಿತ್ತಿಯೂ – ಬಾ ಅನ್ನುತ್ತಾರೆ. ಕೇಳುವವನು – ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ"** – ಪ್ರಕಟಣೆ 22:17.

* * * * * *